ಜನಶಕ್ತಿ




ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com


ಸಂಪುಟ 7 ಸಂಚಿಕೆ 19
ಮೆ 12, 2013 ಪುಟ 16 ರೂ. 10/-

ಸ್ವಾರ್ಥ ರಾಜಕಾರಣ ಮಾಡುವವರನ್ನು ಸೋಲಿಸಿ, ಜನಪರ ಹೋರಾಟಗಾರರನ್ನು ಗೆಲ್ಲಿಸಿ - ದೇವನೂರು ಮಹಾದೇವ





ಗುಲ್ಬರ್ಗಾ ಗ್ರಾಮೀಣ ಕ್ಷೇತ್ರದಲ್ಲಿ ಸಿಪಿಐ(ಎಂ) ಮುನ್ನಡೆ



ಕಲ್ಲಿದ್ದಲು ಹಗರಣವೂ ಮತ್ತು ಸಿಬಿಐ ದುರ್ಬಳಕೆಯೂ

ದೊಡ್ಡಬಳ್ಳಾಪುರ : 'ಮುತ್ತಿನ ಮಳೆ'ಯ ನಡುವೆ ಕಂಡ ಎರಡು ಲೋಕಗಳು



ರಾಜ್ಯಾದ್ಯಂತ ಕೆಂಪು ಮೇ ದಿನದ ಕಲರವ

ಅತಂತ್ರ ವಿಧಾನಸಭೆ! ಆತಂಕವೇಕೆ ?



ಕಂಪ್ಲಿ : 'ದುಡಿಯುವ ಜನರ ಹೋರಾಟ ಬಲಪಡಿಸಿ' - ರಾಘವುಲು



'ಆರ್ಯ-ದ್ರಾವಿಡ' ಚರ್ಚೆಯ ಸುತ್ತ

ಬಿಜೆಪಿ–ಕಾಂಗ್ರೆಸ್ ಮಾಲೀಕರ ಕೈಗೊಂಬೆಗಳು : ಬೃಂದಾ ಕಾರಟ್

ಬಿ.ರಾಜಶೇಖರಮೂರ್ತಿ

ಇತ್ತೀಚೆಗೆ ತಾನೇ ತ್ರಿಪುರ ರಾಜ್ಯದ ವಿಧಾನ ಸಭಾ ಚುನಾವಣೆಯಲ್ಲಿ ಜಯಭೇರಿ ಬಾರಿಸಿರುವ ಮಾಣಿಕ್ ಸರ್ಕಾರ್‌ರವರು ಬಡ ಮುಖ್ಯಮಂತ್ರಿಯೆಂಬುದು ಸಿಪಿಐ(ಎಂ) ಪಕ್ಷದ ಹೆಮ್ಮೆ ಮತ್ತು ಗೌರವದ ವಿಷಯವಾಗಿದೆ. ನಮ್ಮ ಪಕ್ಷದ ಮುಖ್ಯಮಂತ್ರಿ, ಮಂತ್ರಿಗಳು, ಸಂಸದರು, ಎಂ.ಎಲ್.ಎ.ಗಳು, ಎಲ್ಲಾ ಹಂತದ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳೆಲ್ಲಾರೂ ಬಡವರೇ ಆಗಿದ್ದಾರೆ. ಅನೇಕಲ್ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ನಮ್ಮ ಪಕ್ಷದ



ಅಭ್ಯರ್ಥಿಯ ಹೆಸರಿನಲ್ಲಿ ಬ್ಯಾಂಕ್ ಖಾತೆ–ಯೇ ಇಲ್ಲ. ಅತ್ಯಂತ ಬಡ ಕುಟುಂಬದಿಂದ ಬಂದಿರುವ ಹೋರಾಟಗಾರ. ಇದು ನಮ್ಮ ಹೆಗ್ಗಳಿಕೆ. ಹೀಗಾಗಿ ನಮ್ಮ ರಾಜಕೀಯ ಕಡುವೈರಿಗಳು ಸಹ ನಮ್ಮನ್ನು ಭ್ರಷ್ಟರೆಂದು ತೋರಿಸಲು ಸಾಧ್ಯವಿಲ್ಲ. ಇದು ನಮ್ಮ ಇತಿಹಾಸ ಮತ್ತು ಗೌರವ. ಈ ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಮೊದಲು ಸ್ಪರ್ಧಿಸದಿರಬಹುದು. ಆದರೆ ನಮ್ಮ ಕೆಂಬಾವುಟದಡಿ ನಮ್ಮ ಹೋರಾಟಗಳನ್ನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೆ. ರೈತರ, ಕಾರ್ಮಿಕರ, ದಲಿತರ, ಮಹಿಳೆಯರ ಮತ್ತು ಅಲ್ಪ ಸಂಖ್ಯಾತರ ಹಿತಾಸಕ್ತಿಗಳ ಪರವಾದ ಪರ್ಯಾಯ ರಾಜಕಾರಣಕ್ಕೆ ನಾವು ಬದ್ಧರಿದ್ದೇವೆ ಎಂದು ಸಿ.ಪಿ.ಐ(ಎಂ) ಪಾಲಿಟ್ ಬ್ಯೂ–ರೋ ಸದಸ್ಯರಾದ ಬೃಂದಾ ಕಾರಟ್ ರವರು ಅನೇಕಲ್ ವಿಧಾನ ಸಭಾ ಕ್ಷೇತ್ರದ ಸಿ.ಪಿ.ಐ(ಎಂ) ಅಭ್ಯರ್ಥಿ ಪರ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು.

ಬಿಜೆಪಿ ಕಾಂಗ್ರೆಸ್‌ಗಳೆರಡು ಲೂಟಿಯ ಪೈಪೋಟಿಯಲ್ಲಿ ಮುಳುಗಿವೆ. ದೆಹಲಿಯಲ್ಲಿ ಕಾಂಗ್ರೆಸ್ ಭ್ರಷ್ಟಚಾರವೆಸಗುವವರಿಗೆ ಮಣೆಹಾಕವುದು, ನಿಮ್ಮ ರಾಜ್ಯದಲ್ಲಿ ಬಿಜೆಪಿಯ ಭ್ರಷ್ಟಾಚಾರದ ವಿರುದ್ಧ ಸೋನಿಯ ಮತ್ತು ರಾಹುಲ್ ಗಾಂಧಿಯವರು ಮಾತಾಡುತ್ತಾರೆ. ಅಲ್ಪಸಂಖ್ಯಾತರನ್ನು ದಮನ ಮಾಡಿದ ನರೇಂದ್ರ ಮೋದಿಯನ್ನು ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ. ಹೀಗಿದ್ದರೂ ನಿಮ್ಮ ರಾಜ್ಯಕ್ಕೆ ಬಂದು ಮತಯಾಚಿಸುತ್ತಿದ್ದಾರೆ. ಇಂಥವರಿಗೆ ಏನೆನ್ನಬೇಕು.

ಬೆಲೆ ಏರಿಕೆ, ನಿರುದ್ಯೋಗ, ಬಡತನ ಹಸಿವಿನಿಂದ ಬಡ ಜನತೆ ತತ್ತರಿಸಿಹೋಗಿದ್ದಾರೆ. ಕೇವಲ ನಾಲ್ಕೈದು ಸಾವಿರ ಸಂಬಳ ಪಡೆದು ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ಅನೇಕಲ್ ತಾಲ್ಲೂಕಿನ ವ್ಯಾಪ್ತಿಗೆ ಬರುವ ಕಾರ್ಮಿಕರು ಸಂಘಗಳನ್ನು ಕಟ್ಟಿಕೊಂಡು ನಮಗೆ ಕನಿಷ್ಠ ವೇತನ ಜಾರಿಯಾಗಬೇಕೆಂದು ಕೇಳಿದರೆ ಕಾರ್ಮಿಕರನ್ನು ಕೆಲಸಗಳಿಂದ ಮಾಲೀಕರು ಹೊರ ಹಾಕುತ್ತಿದ್ದಾರೆ. ಕಾರ್ಮಿಕರ ಹಕ್ಕುಗಳನ್ನು ದಮನ ಮಾಡಿ ಕಾರ್ಮಿಕರನ್ನು ಮಾಲೀಕರು ಬೀದಿಗೆ ಹಾಕುತ್ತಿದ್ದಾರೆ. ಇಂಥಹ ಧೈರ್ಯವನ್ನು ಮಾಲೀಕರಿಗೆ ನೀಡುತ್ತಿರುವುದು ಯಾರು? ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿರುವ ಮಾಲೀಕರ ಜೊತೆ ಬಿಜೆಪಿ, ಕಾಂಗ್ರೆಸ್ ನಾಯಕರು ಜೊತೆಗೂಡಿ ಕಾರ್ಮಿಕರನ್ನು ಬಲಿಪಶು ಮಾಡುತ್ತಿದ್ದಾರೆ. ಇಲ್ಲಿಯ ಕಾರ್ಖಾನೆ ಮಾಲೀಕರ ಜೊತೆ ಕೈ ಜೋಡಿಸಿರುವ ಬಿಜೆಪಿ, ಕಾಂಗ್ರೆಸ್ ನಾಯಕರು ಕಾರ್ಮಿಕರ ಹಿತ ಕಾಯುವುದುಂಟೇ?. ಆನೇಕಲ್ ಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದ ಎಂ.ಎಲ್.ಎ ಆಗಿರುವವರು ಎಂದಾದರೂ ಪ್ರತಿಭಟನೆ ನಿರತ ಕಾರ್ಮಿಕರ ಹತ್ತಿರ ಹೋಗಿ ಏನು ನಿಮ್ಮ ಸಮಸ್ಯೆಗಳು, ಎಂದು ಕೇಳಿದ್ದಾರೆಯೇ?

ಆದರೆ ನಮ್ಮ ಸರ್ಕಾರವಿದ್ದ ಕಡೆ ಬಡವರಿಗೆ 12 ಲಕ್ಷ ಎಕರೆ ಭೂಮಿ ಹಂಚಲಾಗಿದೆ. ನಿಮ್ಮ ತಾಲ್ಲೂಕಿನ ಅತ್ಯಂತ ಹೀನಾಯ ಸ್ಥಿತಿಯಲ್ಲಿ ದುಡಿಯುತ್ತಿರುವವರು ದಲಿತರು, ಕನಿಷ್ಠ ಕೂಲಿ ಇಲ್ಲದೆ ಕೆಲಸ ಮಾಡುತ್ತಾರೆ. ಉದಾರೀಕರಣದ ನೀತಿಗಳಿಂದ ಉದ್ಯೋಗಾವಕಾಶಗಳು ಇವರಿಗೆ ಇಲ್ಲವಾಗಿವೆ. ದಲಿತರ ಹುಡುಗ ಹುಡುಗಿಯರು ಎಲ್ಲಿಗೆ ಹೋಗಬೇಕು? ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವರೆಲ್ಲಾ ದಲಿತರೆ ಆಗಿದ್ದಾ–ರೆ. ಇವರಿಗೆ ಸಾಮಾಜಿಕ ಭದ್ರತೆ ಇಲ್ಲ. ಆದರೆ ದಲಿತರ ಹೆಸರೇಳಿಕೊಂಡು ದಲಿತರ ಹಣವನ್ನು ಲೂಟಿ ಮಾಡುವ ರಾಜಕಾರಣಿಗಳನ್ನು ನಿಮ್ಮ ತಾಲೂಕಿನಲ್ಲಿ ಕಾಣುತ್ತಿದ್ದೀರಿ. ದಲಿತರಿಗೆ ಒಂದು ಸೈಟು ಕೂಡ ಕೊಡಿಸಲಾಗದ ಸೋಗಲಾಡಿಗಳು ದಲಿತರೆಸರೇಳಿಕೊಂಡು ನಿಮ್ಮ ಹತ್ತಿರ ಓಟು ಕೇಳಲು ಬರುತ್ತಾರೆ.


ಸಿಪಿಐ(ಎಂ) ಮನೆ ನಿವೇಶನ, ರೇಷನ್ ಕಾರ್ಡ್, ಕುಡಿಯುವ ನೀರು, ಮುಂತಾದ ನಾಗರೀಕ ಸೌಲಭ್ಯಗಳಿಗಾಗಿ ಜನರ ನಡುವೆ ಇದ್ದು ಬಡ ಜನರಿಗಾಗಿ ಹೋರಾಡುತ್ತದೆ. ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಡಿ. ಮಹಾದೇಶ್ ರವರನ್ನು ತಾವೆಲ್ಲರೂ ಬೆಂಬಲಿಸಿ ಗೆಲ್ಲಿಸಬೇಕೆಂದು ಮನವಿಯನ್ನು ಬೃಂದಾ ಕಾರಟ್ ರವರು ನೆರೆದಿದ್ದ ಜನರಲ್ಲಿ ಮನವಿ ಮಾಡಿದರು.

ಬಹಿರಂಗ ಸಭೆಯ ಆರಂಭದಲ್ಲಿ ಸಿ.ಪಿ.ಐ(ಎಂ)ನ ಆನೇಕಲ್ ತಾಲೂಕು ಸಮಿತಿ ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ಮಾತನಾಡಿದರು. ಸಿಪಿಐ(ಎಂ) ಅಭ್ಯರ್ಥಿ ಡಿ. ಮಾದೇಶ್ ಮಾತಾಡಿ ತನಗೆ ಮತ ನೀಡುವ ಮೂಲಕ ಜನಪರ ಹೋರಾಟವನ್ನು ಬಲಪಡಿಸಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ತಾಲ್ಲೂಕು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಆಶೋಕ್ ಸ್ವಾಗತಿಸಿದರು. ಸಭೆಯಲ್ಲಿ ಸಿ.ಪಿ.ಐ(ಎಂ) ನ- ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಪ್ರಸನ್ನಕುಮಾರ್ ಮತ್ತು ಬೆ. ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್, ಕಾರ್ಯದರ್ಶಿ ಮಂಡಳಿ ಸದಸ್ಯರೂ ಮತ್ತು ತಾಲ್ಲೂಕು ಸಮಿ[illegible] ಸದಸ್ಯರು ಹಾಗೂ ಸಿ.ಪಿ.ಐ ನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಗಳು ಮತ್ತು ವಿವಿಧ ಕಾರ್ಖಾನೆಗಳ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಸಾಮೂಹಿಕ ಸಂಘಟನೆಗಳ ನಾಯಕರು – ಕಾರ್ಯಕರ್ತರು ಪಾಲ್ಗೊಂಡಿದ್ದರು.

"ಕಮ್ಯೂನಿಸ್ಟರು ಗೆದ್ದು ಹೋದರೆ ಜನರ ಸಮಸ್ಯೆಗಳ ಕುರಿತು ಚರ್ಚಿಸುತ್ತಾರೆ." – ಸಿದ್ದನಗೌಡ ಪಾಟೀಲ

ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಬೆಲೆ ಕೊಡುವ ಇತಿಹಾಸ ನಮ್ಮದಾಗಿತ್ತು. ಆದರೆ ಕಳೆದ ಹತ್ತು ವರ್ಷಗಳಿಂದೀಚೆಗೆ ಎಲ್ಲಿ ಹೋದರೂ ತಲೆ ತಗ್ಗಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆಧಿಕಾರರೂಢ ಬಿಜೆಪಿಯು ಜನರ ಹಣವನ್ನು ಹಗಲು ದರೋಡೆ ಮಾಡಿದ್ದರ ಫಲ ಇದಾಗಿದೆ. ಈಗ ಚುನಾವಣೆ ಬಂದಿದೆ. ಚುನಾವಣಾ ಅಯೋಗ ಎಷ್ಟೇ ನಿಬಂಧನೆಗಳನ್ನು ಹೇರಿದ್ದರೂ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಅನಾಚಾರಗಳನ್ನು ಮಾಡುತ್ತಿವೆ. ಇಂತಹ ಸಂದರ್ಭದಲ್ಲಿ ಬಡವರು, ಕಾರ್ಮಿಕರು–ರೈತರು ಗಂಭೀರವಾಗಿ ಯೋಚನೆ ಮಾಡಲೇಬೇಕಿದೆ.



ಈ ಚುನಾವಣೆಯಲ್ಲಿ ಕೋಟ್ಯಾಧಿಪತಿಗಳು, ರೌಡಿಗಳು, ಗೂಂಡಾಗಳು, ಅತ್ಯಾಚಾರಿಗಳು ಆಯ್ಕೆಯಾಗಿ ವಿಧಾನಸೌಧಕ್ಕೆ ಹೋದರೆ ಬಡ ಜನರ ಗತಿಯೇನು? ಕೊಟ್ಯಾಧಿಪತಿಗಳು ಬಡವರನ್ನು ಪ್ರತಿನಿಧಿಸುತ್ತಾರೆಯೇ? ಶ್ರೀಮಂತರ ಕಂಪನಿಗಳ ಪರವಾಗಿ ಕೆಲಸ ಮಾಡುತ್ತಾರೆ. 1 ಲಕ್ಷ 10 ಸಾವಿರ ಎಕರೆಯ ಭೂಮಿಯನ್ನು ವಿದೇಶಿ ಬಂಡವಾಳ ಹೂಡಿಕೆ ಹೆಸರಿನಲ್ಲಿ ಖಾಸಗೀ ಕಂಪನಿಗಳಿಗೆ ಇದೇ ಬಿಜೆಪಿ ಸರ್ಕಾರ ನೀಡಿತ್ತು. ಈ ವಿಚಾರದಲ್ಲಿ ಕಾಂಗ್ರೆಸ್ ಬಾಯಿ ಬಿಚ್ಚಲಿಲ್ಲ. ಎಡ ಪಕ್ಷಗಳು ಮತ್ತು ರೈತ ಸಂಘಗಳು ಇಂತಹ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟ ನಡೆಸಿಕೊಂಡು ಬರುತ್ತಿದ್ದೇವೆ. ಹಾಗೆಯೇ ವಿಧಾನಸಭಾ ಚುನಾವಣೆಯಲ್ಲೂ ಕಮ್ಯೂನಿಸ್ಟ್ ಪಕ್ಷಗಳ ಜನಪ್ರತಿನಿಧಿಗಳು ಗೆದ್ದು ಹೋದರೆ ಜನ ಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕಾಗಿ ವಿಧಾನ ಸಭೆಯಲ್ಲಿ ಚರ್ಚಿಸುತ್ತಾರೆ. ಇಂತಹ ಇತಿಹಾಸ ನಮ್ಮ ವಿಧಾನ ಸಭೆಗೆ ಇದೆ. ಎಂ.ಎಸ್.ಕೃಷ್ಣನ್, ಪಂಪಾಪತಿ, ಸೂರ್ಯನಾರಾಯಣ ರಾವ್, ರಾಮಚಂದ್ರರಾವ್ ಇತ್ತೀಚೆಗೆ ಜಿ.ವಿ.ಶ್ರೀರಾಮರೆಡ್ಡಿಯವರು. ಹೀಗೆ ಎಡ ಪಕ್ಷಗಳ ನಾಯಕರು ಈ ಹಿಂದೆ ಗೆದ್ದು ವಿಧಾನ ಸಭೆಯಲ್ಲಿ ದುಡಿಯುವವರ ಧ್ವನಿಯಾಗಿದ್ದಾರೆ. ಹೀಗಾ[illegible] ಎಡ ಪಕ್ಷಗಳ ಅಭ್ಯರ್ಥಿಗಳನ್ನು ಬೆಂಬಲಿಸಬೇಕೆಂದು ಸಿ.ಪಿ.ಐ. ರಾಜ್ಯ ಮುಖಂಡರಾದ ಡಾ. ಸಿದ್ದನಗೌಡ ಪಾಟೀಲ್ ರವರು ಮಾತಾಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಅತಂತ್ರ ವಿಧಾನ ಸಭೆ?

ಈ ವಾರದ ಪತ್ರಿಕೆ ತಮ್ಮ ಕೈಸೇರುವಾಗ ಮತಾಧೀಶರ ತೀರ್ಪು ಮತಯಂತ್ರಗಳಲ್ಲಿ ಭದ್ರವಾಗಿರುತ್ತದೆ. ಅದರ ಬಿಡುಗಡೆಗೆ ಮೇ 8 ರ ವರೆಗೆ ಕಾಯಬೇಕಾಗಿದೆ. ಅಲ್ಲಿಯ ವರೆಗೆ ಎಲ್ಲವೂ ನಿಗೂಢ!

ಮುಂದಿನ ವಿಧಾನಸಭೆಯ ಕುರಿತಾಗಿ ಹಲವು ಊಹಾಪೋಹಗಳು ಹರಿದಾಡುತ್ತಿವೆ. ಹಲವಾರು ಮತದಾನಪೂರ್ವ ಸಮೀಕ್ಷೆಗಳು ನಡೆದಿವೆ. ಯಾವುದೇ ಒಂದು ಪಕ್ಷಕ್ಕೆ ಸರಳ ಬಹುಮತವೂ ಸಿಗಲಾರದು ಎಂದು ಅಭಿಪ್ರಾಯಕ್ಕೆ ಹೆಚ್ಚು ಒಮ್ಮತ ವ್ಯಕ್ತವಾಗುತ್ತಿದೆ. ಅತಿ–ದೊಡ್ಡ ಪಕ್ಷವಾಗಿ ಹೊರಹೊಮ್ಮ ಬಹುದಾದ ಪಕ್ಷವೂ ಸಹ ಅಧಿಕಾರವಹಿಸಿಕೊಳ್ಳಲು ಬೇರೆ ಪಕ್ಷಗಳ ಬೆಂಬಲವನ್ನು ಅವಲಂಭಿಸಬೇಕಾಗಲಿದೆ. ಹೀಗಾಗಿ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂಬ ಊಹೆ ದಟ್ಟವಾಗುತ್ತಿದೆ.

ಇದನ್ನು ಒಪ್ಪದವರು, ವಿರುದ್ಧವಾಗಿ ವಾದಿಸುವವರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರ ಪ್ರಕಾರ ಬಿಜೆಪಿ ಸರ್ಕಾರದ ವೈಫಲ್ಯಗಳ ಲಾಭ ಪಡೆದು ಪ್ರಮುಖ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಅಗತ್ಯ ಬಹುಮತ ಪಡೆದು ಅಧಿಕಾರಕ್ಕೆ ಬರಲಿದೆ. ಅನಾಯಾಸವಾಗಿ ಪ್ರಾಪ್ತವಾಗಲಿದೆ ಎನ್ನಲಾದ ಅಧಿಕಾರವನ್ನು ಸ್ವಾಗತಿಸಲು ಕಾಂಗ್ರೆಸ್ ಪಾಳೆಯದಲ್ಲಿ ಭರದ ಸಿದ್ಧತೆಗಳು ಆರಂಭವಾಗಿವೆ ಎನ್ನಲಾಗಿದೆ. 'ಕೂಸು ಹುಟ್ಟುವ ಮುನ್ನ ಕುಲಾಯಿ' ಹೊಲಿಸುತ್ತಿರುವಂತೆ ಕಾಣುತ್ತಿದೆ !

ರಾಜ್ಯದಲ್ಲಿ 'ಸಮ್ಮಿಶ್ರ ಸರ್ಕಾರ' ಅಧಿಕಾರಕ್ಕೆ ಬರುವ ಸಾಧ್ಯತೆಯ ಬಗ್ಗೆ ದೊಡ್ಡ ಪ್ರಮಾಣದ ಆತಂಕವೂ ವ್ಯಕ್ತವಾಗುತ್ತಿದೆ. ಸಮ್ಮಿಶ್ರ ಸರ್ಕಾರದಿಂದ ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗುತ್ತದೆ. ಅಸ್ಥಿರ ಸರ್ಕಾರದಿಂದ ಅಭಿವೃದ್ಧಿಗೆ ಧಕ್ಕೆಯಾಗುತ್ತದೆ. 5 ವರ್ಷಗಳ ಅವಧಿಯಲ್ಲಿ ಒಂದೇ ಸರ್ಕಾರ ಅಸ್ತಿತ್ವದಲ್ಲಿದ್ದರೆ ನಿರ್ದಿಷ್ಟ ಯೋಜನೆಗಳನ್ನು ಪೂರ್ಣಗೊಳಿಸಲು ಅಗತ್ಯ ಕಾಲಾವಧಿ ದೊರೆತಂತಾಗುತ್ತದೆ. ಆದ್ದರಿಂದ ಒಂದೇ ಪಕ್ಷ ಅಧಿಕಾರಕ್ಕೆ ಬರುವಂತಾಗಬೇಕು ಎಂದು ಅವರು ವಾದಿಸುತ್ತಾರೆ.

ಆದರೆ, ಸಾಮಾನ್ಯ ಅನುಭವ ಬೇರೆಯೇ ಪಾಠವನ್ನು ಕಲಿಸುತ್ತಿದೆ. ಹಿಂದಿನ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ಸಿಕ್ಕಿರಲಿಲ್ಲ. ಒಂದೇ ಪಕ್ಷದ ಸರ್ಕಾರವನ್ನು ಸ್ಥಾಪಿಸುವ ಉದ್ದೇಶದಿಂದ ಸ್ವತಂತ್ರ ವಾಗಿ ಆಯ್ಕೆಯಾಗಿದ್ದ ಶಾಸಕರಿಗೆ ಹಣ ಮತ್ತು ಅಧಿಕಾರದ ಆಮಿಷವೊಡ್ಡಿ ಬಿಜೆಪಿ ಬಲವನ್ನು ಹೆಚ್ಚಿಸಿಕೊಳ್ಳಲಾಯಿತು. ಆನಂತರ ಇನ್ನೂ ಹೆಚ್ಚು ಬಹುಮತ ಸಂಪಾದನೆ ಮಾಡುವ ದುರುದ್ದೇಶದಿಂದ 'ಆಪರೇಷನ್ ಕಮಲ' ಎಂಬ ಅನಿಷ್ಟ ಪದ್ಧತಿಯನ್ನು ಹುಟ್ಟುಹಾಕಲಾಯಿತು. ಹೀಗೆ ಒಂದೇ ಪಕ್ಷದ ಸ್ಥಿರ ಸರ್ಕಾರ ಅಸ್ತಿತ್ವಕ್ಕೆ ಬಂತು. ಆದರೆ ಇದ–ರಿಂದ ರಾಜ್ಯದ ಜನತೆಗೆ ಏನಾದರೂ ಪ್ರಯೋಜನ ಆಯಿತಾ? ಇಲ್ಲ. ಲೂಟಿ ಮಾಡುವುದಕ್ಕೆ ಅನುಕೂಲವಾಯಿತು. ಸಂಪೂರ್ಣ ಬಹುಮತದ ಬಲವನ್ನು ಬಿಜೆಪಿ ಮುಖ್ಯಮಂತ್ರಿಯೂ ಸೇರಿದಂತೆ ಇತರ ಮಂತ್ರಿಗಳು ಮತ್ತು ಶಾಸಕರು ರಾಜ್ಯದ ಗಣಿ ಸಂಪತ್ತು, ಭೂ ಸಂಪತ್ತನ್ನು ಲೂಟಿ ಮಾಡಲು ಬಳಸಿಕೊಂಡರು. ಬಹುಮತದ ಅಮಲಿನಲ್ಲಿ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ನಷ್ಟ ಆಗುವಂತೆ ಮಾಡಿದರು.

ಇಂತಹ ಬಹುಮತವನ್ನು ಉಪಯೋಗಿಸಿ ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿ ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸಲು ಬಿಜೆಪಿ ಸರ್ಕಾರಕ್ಕೆ ಸಾಧ್ಯವಾಯಿತು. ಇದೇ ಬಹುಮತವನ್ನು ಬಳಸಿಕೊಂಡು ಕಾರ್ಮಿಕ ಕಾಯ್ದೆಗಳನ್ನು ಮಾಲಿಕರ ಅನುಕೂಲಕ್ಕಾಗಿ ತಿದ್ದುಪಡಿ ಮಾಡಲು ಸಾಧ್ಯವಾಯಿತು. ಇದೇ ಬಹುಮತವನ್ನು ಬಳಸಿಕೊಂಡು ರಾಜ್ಯ ಬೊಕ್ಕಸದಿಂದ ಕೋಟ್ಯಂತರ ರೂ.ಗಳನ್ನು ಮಠಗಳಿಗೆ ದಾನಮಾಡಲಾಯಿತು. ಆದರೆ ವಿಧಾನ ಸಭೆಯಲ್ಲಿ ತನಗಿದ್ದ ಬಹುಮತವನ್ನು ಬಳಸಿಕೊಂಡು ಬಿಜೆಪಿ ಸರ್ಕಾರ ರೈತರ ಫಸಲಿಗೆ ನ್ಯಾಯವಾದ ಬೆಲೆಯನ್ನು ನೀಡಲು ಮುಂದಾಗಲಿಲ್ಲ. ಅಗತ್ಯ ವಸ್ತುಗಳ ತೀವ್ರ ಬೆಲೆ ಏರಿಕೆಯಿಂದ ಜನರು ಕಂಗೆಟ್ಟಿರುವಾಗ ರೇಷನ್ ಪದ್ದತಿಯನ್ನು ಸಾರ್ವತ್ರಿಕಗೊಳಿಸಿ ಯೂನಿಟ್ ಪದ್ಧತಿಯ ಬದಲು ಎಲ್ಲ ಬಡ ಕುಟುಂಬಗಳಿಗೆ ಅಗತ್ಯವಿರುವಷ್ಟು ಆಹಾರ ಧಾನ್ಯಗಳನ್ನು ಒದಗಿಸಲು ಸರ್ಕಾರ ತನ್ನ ಸಂಖ್ಯಾಬಲವನ್ನು ಬಳಸಿಕೊಳ್ಳಲಿಲ್ಲ.

ಲೂಟಿಕೋರ ಪಕ್ಷಗಳಿಗೆ ಬಹುಮತ ಪ್ರಾಪ್ತವಾದರೆ ಏನೆಲ್ಲಾ ಅನಾಹುತ ಮಾಡಬಹುದು ಎಂಬುದನ್ನು ರಾಜ್ಯದ ಜನತೆ ಕಳೆದ 5 ವರ್ಷಗಳಲ್ಲಿ ಅನುಭವಿಸಿದೆ. ಹಿಂದೆ ಕಾಂಗ್ರೆಸ್ ಪಕ್ಷವೂ ಸಹ ಅಗತ್ಯ ಬಹುಮತ ಪಡೆಯಲು ಯಶಸ್ವಿಯಾದಾಗ ಸರ್ವಾಧಿಕಾರಿಯಾಗಿ ವರ್ತಿಸಿದ್ದು, ನ್ಯಾಯಕ್ಕಾಗಿ ಬೀದಿಗಿಳಿದ ರೈತರ, ಕಾರ್ಮಿಕರ, ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದ್ದು ರಾಜ್ಯದ ಜನತೆ ಮರೆತಿರಲು ಸಾಧ್ಯವಿಲ್ಲ.

ಬಂಡವಾಳಗಾರರ ಮತ್ತು ಪಾಳೆಗಾರರ ಹಿಡಿತದಿಂದ ಮುಕ್ತವಾದ ಜನಪರ ಸರ್ಕಾರಕ್ಕೆ ಮಾತ್ರ ಜನ ಬಹುಮತ ನೀಡಬೇಕು. ಅಲ್ಲಿಯವರೆಗೆ, ರಾಜಕಾರಣವನ್ನು ದುಡ್ಡು ಮಾಡುವ ದಂಧೆಯಾಗಿಸಿರುವ ಪಕ್ಷಗಳಿಗೆ ಬಹುಮತ ನೀಡಬಾರದು. ರಾಜಕೀಯ ಅಸ್ಥಿರತೆಯಿಂದ ಉದ್ಭವವಾಗುವ ಮಂಥನದಿಂದ ಮತದಾರರೂ ಸಹ ಪರ್ಯಾಯವನ್ನು ಕಂಡುಕೊಳ್ಳುತ್ತಾರೆ. ತಮ್ಮ ಹಿತವನ್ನು ಪ್ರತಿನಿಧಿಸುವ ಪರ್ಯಾಯವನ್ನು ಆಯ್ಕೆಮಾಡುತ್ತಾರೆ.

ನಿರ್ದಿಷ್ಟ ಕ್ಷೇತ್ರಗಳಲ್ಲಿ

ಜೆಡಿಎಸ್ ಅಭ್ಯರ್ಥಿಗಳಿಗೆ ಸಿಪಿಐ(ಎಂ) ಬೆಂಬಲ

ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳು ಮತ್ತು ಜೆಡಿ(ಎಸ್) ಪಕ್ಷದ ನಡುವೆ ಯಾವುದೇ ಚುನಾವಣಾ ಮೈತ್ರಿ ಏರ್ಪಟ್ಟಿರಲಿಲ್ಲ. ಎಡ ಮೈತ್ರಿಕೂಟದ ಅಭ್ಯರ್ಥಿಗಳು ಕಣದಲ್ಲಿರುವ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಜೆಡಿ(ಎಸ್) ವರಿಷ್ಠರಾದ ಶ್ರೀ ಎಚ್.ಡಿ. ದೇವೇಗೌಡರು ಸಿಪಿಐ(ಎಂ) ಬೆಂಬಲ ಕೋರಿ ಬರೆದಿರುವ ಪತ್ರವನ್ನೂ ಪರಿಗಣಿಸಿ, ನಿರ್ದಿಷ್ಟ ಕ್ಷೇತ್ರಗಳಲ್ಲಿ ಜೆಡಿ(ಎಸ್) ಅಭ್ಯರ್ಥಿಗಳನ್ನು ಬೆಂಬಲಿಸಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ತೀರ್ಮಾನಿಸಿದೆ.

ಈ ತೀರ್ಮಾನಕ್ಕೆ ಅನುಗುಣವಾಗಿ, ರಾಜ್ಯದಲ್ಲಿ ಭ್ರಷ್ಟ ಬಿಜೆಪಿ ಮತ್ತು ಭ್ರಷ್ಟ ಕಾಂಗ್ರೆಸ್ ಪಕ್ಷಗಳನ್ನು ಸೋಲಿಸುವ ಉದ್ದೇಶದಿಂದ, ಸಿಪಿಐ(ಎಂ), ಸಿ.ಪಿ.ಐ, ಅಖಿಲ ಭಾರತ ಪಾರ್ವರ್ಡ್ ಬ್ಲಾಕ್, ಲೋಕಸತ್ತಾ ಮತ್ತು ಸರ್ವೋದಯ ಕರ್ನಾಟಕ ಪಕ್ಷಗಳ ಅಭ್ಯರ್ಥಿಗಳು ಕಣದಲ್ಲಿ ಇಲ್ಲದ ಕ್ಷೇತ್ರಗಳಲ್ಲಿ ಮತ್ತು ಸಿಪಿಐ(ಎಂ) ಜಿಲ್ಲಾ ಸಮಿತಿಗಳು ಈಗಾಗಲೇ ಬೆಂಬಲ ಸೂಚಿಸಿರುವ ಸ್ವತಂತ್ರ ಅಭ್ಯರ್ಥಿಗಳೂ




ಇಲ್ಲದ ಕ್ಷೇತ್ರಗಳಲ್ಲಿ ಜೆಡಿ(ಎಸ್) ಅಭ್ಯರ್ಥಿಗಳಿಗೆ ನಮ್ಮ ಮತಗಳನ್ನು ನೀಡಬೇಕು. ಆ ಮೂಲಕ ಬಿಜೆಪಿ ವಿರೋಧಿ ಮತಗಳು ಇಡಿಯಾಗಿ ಬಿಜೆಪಿ–ಕೆಜೆಪಿಗೆ ಹೋಗದಂತೆ ತಡೆಯಲು ಅನಿವಾರ್ಯವಾಗಿ ನಾವು ಜೆಡಿ(ಎಸ್) ಅಭ್ಯರ್ಥಿಗಳಿಗೆ ಮತ ನೀಡಬೇಕಾಗುತ್ತದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ತೀರ್ಮಾನಿಸಿದೆ.

ಕಾರ್ಟೂನ್ ಕಾರ್ನರ್

ಪಿ ಮಹಮ್ಮದ್



ಪಿ ಮಹಮ್ಮದ್



ದೊಡ್ಡಬಳ್ಳಾಪುರ : 'ಮುತ್ತಿನ ಮಳೆ' ಹೊಯ್ಯುವ ಹೊತ್ತಲ್ಲಿ ಆ ಲೋಕ –ಈ ಲೋಕಗಳ ಮುಖ ದರ್ಶನ.

ನಮ್ಮ ಚುನಾವಣಾ ಪ್ರಚಾರದ ವಾಹನಗಳು ಬೆಳಿಗ್ಗೆಯೇ ಚಿಕ್ಕ ಬೆಳವಂಗಲ, ದೊಡ್ಡ ಬೆಳವಂಗಲ ದಾಟಿ ನಾಲ್ಕೈದು ಕಿ.ಲೋ. ಮೀಟರುಗಳ ಟಾರ್ ರಸ್ತೆ ಮೂಲಕ ಹಾದು ತಿಪ್ಪೂರು ತಲುಪಿದಾಗ ಬೆಳಿಗ್ಗೆ ಇನ್ನೂ 8 ಗಂಟೆ ದಾಟಿರಲಿಲ್ಲ. ಆಗಲೇ ಏರುತ್ತಿರುವ ಬಿಸಿಲು. ಊರ ಮುಂದಲ ಅರಳಿ ಕಟ್ಟೆಯ ಮೇಲೆ ಹತ್ತು–ಹನ್ನೆರಡು ಯುವಕರು. ಕಟ್ಟೆಯ ಮತ್ತೊಂದು ತುದಿಯಲ್ಲಿ ನಾಲ್ಕೈದು ಹಿರಿ ಜೀವಗಳು. ಟೀ ಅಂಗಡಿ, ದಿನಸಿ ಅಂಗಡಿಯ ಮುಂದೆ ಕೆಲವರು. ನಿತ್ಯ ವ್ಯಾಪಾರ ಎಂದಿನಂತೆ.

ದೊಡ್ಡಬಳ್ಳಾಪುರ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಹತ್ತು ನಿಮಿಷ ಮೈಕು ಹಿಡಿದು ಮಾತನಾಡಿದರು. ..ಆಳುವ ಸರ್ಕಾರಗಳ ಜನದ್ರೋಹಿ ನೀತಿಗಳಿಂದ ಒಕ್ಕಲುತನ ಅಂದರೆ ಕೃಷಿ ಹಾಳಾಗಿ ಹೋಗಿದೆ. ಅದರ ಬಗೆಗೆ ಮಾತನಾಡುವವರೆ ಇಲ್ಲ... ಶಾಸನ ಸಭೆಯಲ್ಲಿ ಜನರ ಸಮಸ್ಯೆಗಳ ಬಗೆಗೆ ಹಾಲಿ ಶಾಸಕರು ತುಟಿ ಬಿಚ್ಚಲಿಲ್ಲ... ಜನಪರ ಹೋರಾಟ ನಡೆಸಿದ ನೈತಿಕ ಶಕ್ತಿಯಿಂದ, ಅಪರೇಷನ್ ಕಮಲಕ್ಕೆ ತುತ್ತಾಗಿ ಕಮಲ ಪಕ್ಷ ಸೇರಿದ ನರಸಿಂಹಸ್ವಾಮಿಯನ್ನು ಅವರು ತರಾಟೆಗೆ ತೆಗೆದುಕೊಂಡಿದ್ದರು. ಕೆಲವೇ ವರ್ಷಗಳಲ್ಲಿ ದೊಡ್ಡಬಳ್ಳಾಪುರ ಬೆಂಗಾಡಿನಂತೆ ಆಗುತ್ತದೆ. ಈಗಲೇ 1,500 ಅಡಿ ಬೋರ್‌ವೆಲ್ ತೋಡಿ ನೀರು ತೆಗೆಯಬೇಕಾಗಿದೆ... ಆತಂಕ ತೋಡಿಕೊಂಡರು. ಕ್ಷೇತ್ರದಲ್ಲಿ ನೀರಿಗೆ ಹಾಹಾಕಾರ. ದುಡ್ಡನ್ನು ಜೋಪಾನ ಮಾಡಿದಂತೆ ಅಥವಾ ಖರ್ಚು ಮಾಡಿದಂತೆ ಜನರು ನೀರು ಖರ್ಚು ಮಾಡಬೇಕಾಗಿದೆ. ಇಂಥ ಹೊತ್ತಲ್ಲಿ 'ನೀರು ಚೆಲ್ಲಿದಂತೆ' ದುಡ್ಡು ಚೆಲ್ಲಾಡುತ್ತಿದ್ದಾರೆ ಆಳುವ ವರ್ಗದ ರಾಜಕಾರಣಿಗಳು. ಹೀಗೆ ಚೆಲ್ಲಲ್ಲು ಅವರಿಗೆ ಹಣ ಎಲ್ಲಿಂದ ಬರುತ್ತದೆ ?.... ಅವರು ಖಾರವಾಗಿ ಕೇಳುತ್ತಿದ್ದರು.

ನಮ್ಮ ದುಡಿಮೆಯಿಂದ ನಮಗೆ ಸಾಧ್ಯವಾದಷ್ಟು ಸೀರೆ, ಪಂಚೆ, ಬಟ್ಟೆ ಕೊಂಡುಕೊಂಡು ತೃಪ್ತಿಪಟ್ಟುಕೊಳ್ಳಲು ಆಗುವುದಿಲ್ಲವೇ ? ಭ್ರಷ್ಟ ರಾಜಕಾರಣಿಗಳು ಕೊಡುವ ದುಡ್ಡು, ಸಾರಾಯಿ ಪಾಕೇಟಿಗೆ ಕೈಚಾಚುವ ದೀನ ಅವಸ್ಥೆ ನಮಗೇಕೆ ಬಂದಿದೆ. ನಮಗೆ ಸ್ವಾಭಿಮಾನ ಇಲ್ಲವೇ ಎಂದು ಮನಸ್ಸಿನ ನೋವಿಗೆ ಕೊಂಚ ಆಕ್ರೋಶವನ್ನೂ ಸೇರಿಸಿ ಕೇಳುತ್ತಿದ್ದರು. ನನಗೆ ಓಟು ಹಾಕದಿದ್ದರೂ ಪರವಾಗಿಲ್ಲ ಆದರೆ ದಯವಿಟ್ಟು ಈ ರೀತಿ ಕೈ ಚಾಚಿ ನಿಲ್ಲಬೇಡಿ ಎಂದು ಆಗ್ರಹಪೂರ್ವಕವಾಗಿ ಮನವಿ ಮಾಡಿದರು. ಭ್ರಷ್ಟ ರಾಜಕೀಯ ಪಕ್ಷಗಳಿಂದ ಕುಡಿಯಲು ಕಲಿಯುತ್ತಿರುವ ನಮ್ಮ ಯುವಕರ ಕಿವಿ ಹಿಂಡಿ, ನಿಮ್ಮ ಸಮಸ್ಯೆಗಳ ಬಗೆಗೆ ಗಮನ ಕೊಡದ ಬಗ್ಗೆ ಪ್ರಶ್ನೆ ಮಾಡಿ ಅಂತ ಹೇಳಿಕೊಟ್ಟು ಮಾತು ಮುಗಿಸಿದರು.

ಇಂಥ ಖಡಕ್ ಮಾತಿನ ಸಿಪಿಐ(ಎಂ) ಅಭ್ಯರ್ಥಿಯ ಹೆಸರು ಚಂದ್ರ ತೇಜಸ್ವಿ. ಅವರು ಅಪರಿಚಿತರೇನಲ್ಲ. ಆ ಊರಿಗೂ ದೊಡ್ಡಬಳ್ಳಾಪುರದ ಇಂತಹ ಹತ್ತಾರು ಊರಿಗೂ ಚಂದ್ರ ತೇಜಸ್ವಿ ಪರಿಚಿತರೇ. ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ರಾಮಭದ್ರಯ್ಯನವರ ಮಗ ಅವರು ಅಂತ ಹಿರಿಯರೂ, ಮಧ್ಯ ವಯಸ್ಸಿನವರು ಎಲ್ಲರೂ ಗುರುತಿಸುತ್ತಾರೆ. ಯುವ ರೈತರು, ಯುವಜನರಿಗೆ ಅವರು ಪಂಪ್‌ಸೆಟ್ ರೈತರ ಹೋರಾಟ ಸಮಿತಿ ಮುಖಂಡರಾಗಿ, ಶಾಶ್ವತ ನೀರಾವರಿ ಹೋರಾಟ ಸಮಿತಿಯ ಪ್ರಮುಖರಾಗಿ, ತಾಲ್ಲೂಕು ಕಛೇರಿಯಲ್ಲಿ ಪಹಣಿ ಪತ್ರ, ಇತ್ಯಾದಿ ಪಡೆಯಲು ಬರುವ ಬಡ ರೈತರಿಂದ ಲಂಚ ಕೀಳಲು ಯತ್ನಿಸುವ ಭ್ರಷ್ಟ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಉಚಿತವಾಗಿ ಕೆಲಸ ಮಾಡಿಸಿಕೊಡುವ ಆಪತ್ಬಾಂಧವರಾಗಿ ಕಾಣಿಸುತ್ತಾರೆ.


ಸುಡುಬಿಸಿಲಲ್ಲಿ ರೇಷನ್‌ಗಾಗಿ ಕಾದುನಿಂತ ಚಿಕ್ಕನಹಳ್ಳಿಯ ಜನ

ಸಭೆ ಮುಗಿಯಿತು. ಕೆಲವು ಜನ ವಾಹನದ ಸುತ್ತ ಮುತ್ತಿಕೊಂಡರು. ಕೆಲವರು ಯಾವ ಸಂಕೋಚವೂ ಇಲ್ಲದೇ ಕೈಚಾಚಿ 'ನಮಗೇನಾದರೂ ಕೊಡಿ' ಅಂದರು.

ರಾತ್ರಿ ಎಲ್ಲ ರಾಮಾಯಣ ಕೇಳಿ...

ಎಲಾ ಇವನ !! ಸಿಪಿಐ(ಎಂ) ಪಕ್ಷ ದುಡ್ಡು, ಸೀರೆ, ಸಾರಾಯಿ ಹಂಚುವ ಪಕ್ಷ ಅಲ್ಲ ಅಂತ ಅಲ್ಲಿ ಆಗ ತಾನೇ ಗಂಟಲು ಹರಿಯುವಂತೆ ಘೋಷಿಸಲಾಗಿತ್ತು. ಅಂತಹ ಕೃತ್ಯಗಳನ್ನು ಉಗ್ರವಾಗಿ ಖಂಡಿಸಲಾಗಿತ್ತು. ರಾಜಕೀಯ ಪಕ್ಷಗಳು ಬಹಿರಂಗವಾಗಿ ಘೋಷಿಸುವಂತೆ ಅಂತರಂಗದಲ್ಲಿ ನಡೆದುಕೊಂಡು ಬಿಡುತ್ತವೆಯೇ ? ಕೇಳಿದರೆ ಏನಾದರೂ ಸಿಗಬಹುದೋ ಏನೋ ?. ಯಾಕೆ ಒಂದು ಕೈ ನೋಡಬಾರದು.

ಬೈಯ್ಯುವುದು ಬೇಡ–ಕುಳಿತು ಮಾತಾಡೋಣ

ಹೇಳಿದ್ದು ಕೇಳಲಿಲ್ಲವಾ...ಯಾರಿಗೋ ಸಿಟ್ಟು ಬಂದಿತ್ತು. ಇಲ್ಲ ಬೈಯ್ಯುವುದು ಬೇಡ. ಕುಳಿತು ಮಾತನಾಡೋಣ.

ಆರ್. ರಾಮಕೃಷ್ಣ

ಬನ್ನಿ ಇಲ್ಲಿ ಪಕ್ಕ ಕುಳಿತುಕೊಳ್ಳಿ. ...ಪರವಾಗಿಲ್ಲ ಬನ್ನಿ... ಕುಳಿತುಕೊಳ್ಳಿ. ಸಿಪಿಐ(ಎಂ) ಪಕ್ಷ ದುಡ್ಡು ಕೊಡುವ ಪಕ್ಷ ಅಲ್ಲ ಅಂತ ಹೇಳಿದರಲ್ಲ. ಆದರೂ ಕೇಳುತ್ತಿದ್ದೀರ ? ಹೇಳಿ ದುಡ್ಡು ಯಾಕೆ ಕೊಡಬೇಕು.?

ನಾವು "....ರವರು ಸ್ವಾಮಿ". ಬೇರೆಯವರು ದುಡ್ಡು ಕೇಳಿದರೆ ತಪ್ಪು. ಆದರೆ ನಾವು ದುಡ್ಡು ಕೇಳಿದರೆ ತೀರಾ ತಪ್ಪೇನಿಲ್ಲ ಬಿಡಿ ಅನ್ನುವ ಹಾಗೆ ಆ ವ್ಯಕ್ತಿ ಒಂದು ಬಗೆಯ ಹಕ್ಕು ಮಂಡಿಸಿದರು. ನಿಮ್ಮ ಹೆಸರೇನು ?.... ಚಿಕ್ಕ ಹನುಮಯ್ಯ. ನಾನು ಮುಖ ನೋಡಿದೆ. ಆಳುವ ವರ್ಗದ ರಾಜಕಾರಣಗಳು ಬಹಳ ಸಾರಿ ತಮ್ಮದು 'ದೀನ ದಲಿತರ ಪಕ್ಷ, ದೀನ ದಲಿತರ ಪಕ್ಷ' ಅಂತ ಘೋಷಿಸುವುದು ಯಾಕೋ ನೆನಪಿಗೆ ಬಂತು. ಹರಕಲು ಚಡ್ಡಿ. ಮಾಸಲು ಅಂಗಿ. ಬಾಚಣಿಗೆ ಕಾಣದ ಕೂದಲು. ಅಡ್ಡಾದಿಡ್ಡಿ ಗಡ್ಡ ಮೀಸೆ. ವಯಸ್ಸು ನಲವತ್ತೈದು ಇರಬಹುದು. ನಲವತ್ತೇ ಇದ್ದರೂ ಇದ್ದೀತು. ತೂಕ. ಖಂಡಿತ ನಲವತ್ತೈದು ದಾಟದು.

ನಿಮಗೆ ಜಮೀನಿದೆಯಾ ? ಪ್ರಶ್ನೆ. ಇಲ್ಲ... ಮತ್ತೇನು ಮಾಡುತ್ತೀರಿ. ? ಕೂಲಿ ಮಾಡುತ್ತೇವೆ. ಆ ಮನುಷ್ಯನ ಬೆನ್ನಿನ ಕಡೆ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಕುಡುಗೋಲು ಈಗ ಹೊರಕ್ಕೆ–ಕೈಗೆ ಬಂತು. ಆ ಮನುಷ್ಯ ಒಬ್ಬರೇ ಆಗಿರಲಿಲ್ಲ. ಜೊತೆಗೆ ಹೆಚ್ಚು ಕಡಿಮೆ ಅದೇ ರೂಪ ಅದೇ ವೇಷದ ಇನ್ನೂ ನಾಲಕ್ಕೈದು ಜನ ಇದ್ದರು. ಎಲ್ಲರೂ ಬೆಳ್ಳಂಬೆಳಗ್ಗೆ ಯಾರಾದರೂ ಕೂಲಿಗೆ ಕರೆಯುತ್ತಾರಾ ? ಅಂತ ಕಾಯುತ್ತ ಕುಳಿತವರಾಗಿದ್ದರು.

ಪ್ರಶ್ನೆ: ಸರ್ಕಾರಕ್ಕೆ ಅರ್ಜಿ ಹಾಕಿಕೊಂಡರೆ ಕೂಲಿ ಕೆಲಸ ಕೊಡುತ್ತಾರಲ್ಲ...ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅದು ನಿಮ್ಮ ಊರಲ್ಲಿ ಇದೆಯಾ ? ಇಲ್ಲ ಸ್ವಾಮಿ ಇಲ್ಲ. ಮತ್ತೇನು ಕೂಲಿ ಮಾಡುತ್ತೀರಿ. ತೋಪು(ನೀಲಗಿರಿ) ಕೊಯ್ಯುವುದು, ಬೇಲಿ ಕತ್ತರಿಸೋದು, ತೋಟದ ಕೆಲಸ ಹಿಂಗೆ... ಯಾರು ಏನು ಹೇಳುತ್ತಾರೋ ಅದು. ದಿನಾ ಕೆಲಸ ಸಿಗುತ್ತದಾ ? ಇಲ್ಲ ಸ್ವಾಮಿ..


ಪ್ರಚಾರ ಊರ ಬೀದಿಗಳಲ್ಲಿ ಹೆಜ್ಜೆ ಹಾಕಿತು. ಕೊನೆಗೆ ಅಲ್ಲಿ ಒಂದು ಮನೆಯಲ್ಲಿ ಬೆಳಗಿನ ತಿಂಡಿ. ಆ ನಾಲಕ್ಕೈದು ಜನ ಹಿಂದೆಯೇ ಬಂದರು. ಇಡ್ಲಿ, ಚಟ್ನಿ, ಅನ್ನ ಮಜ್ಜಿಗೆ. ಮನೆಯ ಅಂಗಳದಲ್ಲಿ ಸಾಮೂಹಿಕ ಸೇವನೆ. ಮನೆಯವರಿಗೆ ಅವರೂ ಪರಿಚಿತರೆ–ಚಿಕ್ಕ ಹನುಮಯ್ಯ ಸಂಗಾತಿಗಳು ಅಲ್ಲಿಗೂ ಬಂದರು. ಅಲ್ಲಿಯೇ ಪಕ್ಕ ಕುಳಿತರು. ಆ ನಡುಮನೆಯಲ್ಲಿ ಕುವೆಂಪು ಫೋಟೊ. ಪ್ರಗತಿಪರರು. ಬೇಧವೇನಿಲ್ಲ. ಆದರೂ ಹೊರಗಿನಿಂದ ಬಂದವರಿಗೆ ಸರಿಯಾಯಿತು ಚಾಪೆ. ಊರವರೇ ತಾನೆ–ಚಿಕ್ಕ ಹನುಮಯ್ಯ ಮತ್ತವರು. ನಾಲ್ಕೈದು ಜನ ಅಲ್ಲೇ ನೆಲದ ಮೇಲೆ. ...ನೀವೂ ತಿಂಡಿ ತಿನ್ನಿ ಎಂದರು ಕೆಲವರು. ಇಲ್ಲ ಬೇಡ ಬೇಡ ಎನ್ನುತ್ತಾರೆ ಇವರು. ಸ್ವಾಭಿಮಾನ ? (ಆಮೇಲೇ ಗೊತ್ತಾಗಿದ್ದು ಇದು. 'ಹೊರಗಿನವರಿಗೇ' ಸ್ಟೀಲು ತಟ್ಟೆಗಳು ಮುಗಿದು ಹೋದವು. ಎಲೆ ಇದೆಯಾ ನೋಡಿ... ಇಲ್ಲಾ ತರಿಸಿ ಅಂದರು ಮನೆಯ ಹೆಂಗಸರು. ಯಾಕೋ ಎಲೆ ಬರಲೇ ಇಲ್ಲ.) ಅವರು ತಿಂಡಿಗೂ ಕಾಯುತ್ತಿರಲಿಲ್ಲ. ಕೂಲಿಗೆ ಹೋಗುವ ಜನ ಬೆಳಿಗ್ಗೆ ಪಟ್ಟಾಗಿ ಮುದ್ದೇ ಉಂಡು ಬಂದಿದ್ದರು.

ವಾಪಸ್ ಹೋಗುವಾಗ ಊರಿನ ಹಿಂಭಾಗ ಯಾವುದೋ ಗೋಡೆಯ ಮೇಲೆ ಉದ್ಯೋಗ ಖಾತ್ರಿಯ ಸರ್ಕಾರಿ ಜಾಹಿರಾತು. ಅಲ್ಲೇ ಕಟ್ಟೆಯ ಮೇಲೆ ಕುಳಿತ ಕೆಲವರನ್ನು ಕಂಡೆ. ಜಮೀನಿಲ್ಲದೇ ಕೂಲಿಯೇ ಬದುಕಾದವರಿಗೆ ಅರ್ಜಿ ಹಾಕಿದರೆ ಉದ್ಯೋಗ ಇಲ್ಲಿ 'ಖಾತ್ರಿ' ಇದೆಯಾ ? ..ಯೋಜನೆ ಇದೆ. ಯಾರೂ ಆ ಕೆಲಸಕ್ಕೆ ಹೋಗುವುದಿಲ್ಲ ... ಅಂದರು ಅವರು. ಮೂರು ತಿಂಗಳು ಆರು ತಿಂಗಳಾದರೂ ಕೂಲಿ ಕೊಡುವುದಿಲ್ಲ. ಮತ್ತೆ ತೋಪು ಕೊಯ್ಯಲು ಹೋದರೆ ಇಲ್ಲಿ ಕೊಡುವ ಕೂಲಿಗೆ ಎರಡರಷ್ಟು ಕೂಲಿ ಸಿಗುತ್ತದೆ. ಅದಕ್ಕೇ ಯಾರೂ ಹೋಗುವುದಿಲ್ಲ... ಇಷ್ಟು ಮಾಹಿತಿ ಸಿಗಲು ನಾನು ಮತ್ತೊಂದು ಫರ್ಲಾಂಗು ನಡೆದು ಮತ್ತೆ ಕೆಲವರ ಪಕ್ಕ ಕೂತು ಕೊಂಚ ಕಾಲಕಳೆಯಬೇಕಾಯಿತು. ಯಾರ ಮಾತು ನಿಜ.? ಯಾವುದನ್ನು ನಂಬುವುದು. ?

ನಡು ಹಗಲು. ಸುಡುವ ಸೂರ್ಯ. ಊರು ಚಿಕ್ಕನ ಹಳ್ಳಿ. ಅರಳಿ ಮರದ ನೆರಳಲ್ಲಿ ಕಟ್ಟೆಯ ಬಳಿ ಒಂದು ನಾಲ್ಕು ವರ್ಷದ ಆಡುವ ಕಂದ. ಸೂಕ್ಷ್ಮಮತಿ ಸರೋಜ ಕೇಳುತ್ತಾರೆ. ನೀನ್ಯಾಕೆ ಇಲ್ಲಿ ಆಡುತ್ತಿದ್ದೀಯ ? ಅಂಗನವಾಡಿಗೆ ಹೋಗಲ್ಲವಾ.? ಪುಟ್ಟ ಹುಡುಗಿ ಏನು ಹೇಳೀತು. ಕೋಲೂರುವ ಅಜ್ಜ ಬಾಯಿ ಬಿಟ್ಟಿತು. ...ಅವರು ಏ.ಕೆ. ಯವರು ಅದಕ್ಕೆ ಅಂಗನವಾಡಿಗೆ ಹೋಗಲ್ಲ. !!! ಏ.ಕೆ.ಯವರಾದರೆ ಅಂಗನವಾಡಿಗೆ ಹೋಗುವುದಿಲ್ಲ. ಹೋಗುವುದಿಲ್ಲವೋ ?

ಪುಟ 12 ಕ್ಕೆ

ಗುಲ್ಬರ್ಗಾ ಗ್ರಾಮಾಂತರ ಕ್ಷೇತ್ರದಲ್ಲಿ ಸಿಪಿಐ(ಎಂ) ಮುನ್ನಡೆ.



– ಯು. ಬಸವರಾಜು

ಅತಿ ಹಿಂದುಳಿದ ಕ್ಷೇತ್ರ – ಗುಲ್ಬರ್ಗಾ ಗ್ರಾಮಾಂತರ

ಗುಲ್ಬರ್ಗಾ ಗ್ರಾಮಾಂತರ (ಪ.ಜಾ) ಮೀಸಲು ಕ್ಷೇತ್ರ 03 ತಾಲೂಕುಗಳಿಂದ ರೂಪಿಸಲ್ಪಟ್ಟಿದೆ. ಆಳಂದಾ ತಾಲೂಕಿನ 10, ಗುಲ್ಬರ್ಗಾ ತಾಲೂಕಿನ 20 ಹಾಗು ಚಿತಾಪುರ ತಾಲೂಕಿನ 02 ಗ್ರಾಮ ಪಂಚಾಯತಿಗಳು ಸೇರಿ ಒಟ್ಟು 32 ಗ್ರಾಮ ಪಂಚಾಯತ್‌ಗಳು (ಒಟ್ಟು ಗ್ರಾಮಗಳು– ತಾಂಡಾಗಳು–96) ಅಲ್ಲದೇ ಒಟ್ಟು 45 ಮತಗಟ್ಟೆಗಳನ್ನು ಹೊಂದಿದ ಶಹಾಬಾದ್ ನಗರವೂ ಇದರ ವ್ಯಾಪ್ತಿಗೆ ಬರುತ್ತಿವೆ. ಒಟ್ಟಾರೆ ಸುಮಾರು 2.12 ಲಕ್ಷ ಮತಗಳು 263 ಮತಗಟ್ಟೆಗಳಲ್ಲಿವೆ. ಶಹಬಾದ್ ನಗರ ಪ್ರದೇಶ ಬಿಟ್ಟರೇ, ಶೇ 80 ಭಾಗ ಗ್ರಾಮೀಣ ಪ್ರದೇಶವೇ ಆಗಿದೆ.ಈಗಲೂ ಈ ಕ್ಷೇತ್ರದ ಶೇ 90 ಭಾಗ ಮಳೆ ಆಶ್ರಿತ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಪರಿಶಿಷ್ಠ ಜಾತಿ ಹಾಗು ಪರಿಶಿಷ್ಟ ಪಂಗಡಗಳ ಮತ್ತು ಮುಸ್ಲಿಂ ಅಲ್ಪ ಸಂಖ್ಯಾತರ ಒಟ್ಟು ಪ್ರಮಾಣ ಜನಸಂಖ್ಯೆಯ ಶೇ 50 ರಷ್ಟಿದೆ. ಅದೇ ರೀತಿ ಲಿಂಗಾಯಿತ ಭೂಮಾಲಿಕರು ಪ್ರಧಾನವಾಗಿರುವ ಪ್ರದೇಶವಾಗಿದೆ.



ಶಹಾಬಾದ್ ನಗರದ ಹತ್ತಿರ ಒಂದೆರಡು ಸಿಮೆಂಟ್ ಕೈಗಾರಿಕೆ ಬಿಟ್ಟರೇ, ಕ್ಯಾಲ್ಸಿಯಂ ಕಲ್ಲು ಗಣಿಗಾರಿಕೆಯೇ ವ್ಯಾಪಕವಾಗಿರುವುದು. ಆದರೇ ಇಲ್ಲಿರುವುದು ಅಪಾರ ಸಂಖ್ಯೆಯ ಅಸಂಘಟಿತ ಕಾರ್ಮಿಕರು. ಸ್ವಲ್ಪ ಜನ ಕಲ್ಲು ಗಣಿಗಳಲ್ಲಿ ದುಡಿದರೇ, ಮತ್ತೆ ಹಲವರು ಬೆಳೆಯುತ್ತಿರುವ ಗುಲ್ಬರ್ಗಾ ನಗರದ ಕೆಲಸಕ್ಕೆ ಕಟ್ಟಡ ಕಾರ್ಮಿಕರೂ ಸೇರಿದಂತೆ ಇತರೇ ಕಾರ್ಮಿಕರು, ಗ್ರಾಮಾಂತರ ಕ್ಷೇತ್ರದ ಜನರೂ ಸೇರಿದಂತೆ ಶಹಾಬಾದ್ ನಗರದವರು ಪ್ರತಿದಿನ ಅತ್ಯಂತ ಕಡಿಮೆ ವೇತನಕ್ಕೆ ದುಡಿಯಲು ಬಂದು ಹೋಗುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ.

ಕಳೆದ ಎರಡು ದಶಕಗಳ ಅನುಭವ ವೆಂದರೇ, ಹೈದ್ರಾಬಾದ್ ಕರ್ನಾಟಕದಲ್ಲಿ ಹತ್ತು ವರ್ಷಗಳಿಗೊಮ್ಮೆ ಮಾತ್ರವೇ ಖಾತ್ರಿಯಾಗಿ ಬೆಳೆ ಬರುವಂತಹ ಮಳೆಯಾಗುವ ಪರಿಸ್ಥಿತಿ ಇದೆ. ಮಗದೊಂದು ವರ್ಷ ಮಳೆ ಬಂದ–ರೇ, ಬೆಳೆ ಬಂದರೂ ಬರಬಹುದು ಅಥವಾ ಬರದೇ ಇರಬಹುದು. ಹಾಗೇ 03–04 ನೇ ವರ್ಷಮಳೆ ಬಂದರೇ ಬರ ಇಲ್ಲವೇ ಅತಿವೃಷ್ಠಿ ಮತ್ತು ಪ್ರವಾಹವಾಗಿರುತ್ತದೆ. ಅಂ–ದರೇ ಈ ಪ್ರದೇಶಗಳ ಜನರ ಪರಿಸ್ಥಿತಿಯನ್ನು ಊಹಿಸಬಹುದಾಗಿದೆ. ಇಲ್ಲಿನ ಹೆಚ್ಚಿನ ತಾಂಡಗಳ ಹಾಗು ಗ್ರಾಮಗಳ ಜನ ಬಾಂಬೆಗೆ,ಪುಣೆಗೆ, ಹೈದ್ರಾಬಾದ್ ಹಾಗೂ ಬೆಂಗಳೂರಿಗೆ ವಲಸೆ ಹೋಗುವುದು ಸಾಮಾನ್ಯವಾಗಿದೆ.

ಕೇಂದ್ರ ಸರ್ಕಾರ ತಲಾ ಆದಾಯ ಪ್ರತಿದಿನ 20ರೂ ಇರುವವರು ದೇಶದಲ್ಲಿ ಶೇ 80 ಜನರೆಂದಿದೆ. ಕರ್ನಾಟಕ ಸರ್ಕಾರ ದಲಿತರ ತಲಾ ಆದಾಯ ಕೇವಲ 09 ರೂಗಳೆನ್ನುತ್ತದೆ. ಇಂತಹವರ ಸಂ–ಖ್ಯೆಯೇ ಈ ಕ್ಷೇತ್ರದಲ್ಲಿ ಅಪಾರವಾಗಿದ್ದು.ಶೇ 85ಕ್ಕು ಹೆಚ್ಚೆಂದು ಸುಲಭವಾಗಿ ಗುರುತಿಸ ಬಹುದಾಗಿದೆ. ಇಂತಹ ಕಡಿಮೆ ಆದಾಯ ಒಂದೊತ್ತು ಊಟವನ್ನು ಕೊಡದಿರುವಾಗ ಇಲ್ಲಿಯ ಜನ ಬದುಕುವುದಾದರೂ ಹೇಗೆ ಎಂಬ ಪ್ರಶ್ನೆ ಈ ಕ್ಷೇತ್ರದ ಕುರಿತು ಚಿಂತಿಸುವವರನ್ನು ಕಾಡದೇ ಬಿಡದು.

ಈ ಎಲ್ಲಾ ಕಾರಣಗಳಿಂದಾಗಿಯೇ ಈ ಕ್ಷೇತ್ರ ರಾಜ್ಯದ ಅತ್ಯಂತ ಹಿಂದುಳಿದ ಕ್ಷೇತ್ರಗಳಲ್ಲಿ ಒಂದಾಗಿದೆ

ಕ್ಷೇತ್ರದ ಹುರಿಯಾಳುಗಳು

ಇಂತಹ ಹಿಂದುಳಿದಿರುವ ಕ್ಷೇತ್ರದ ಹುರಿಯಾಳುಗಳಾಗಿ ಒಟ್ಟು 15 ಜನರು ಸ್ಫರ್ಧೆಗಿಳಿದಿದ್ದಾರೆ. ಇದರಲ್ಲಿ ರಾಜಕೀಯ ಪಕ್ಷಗಳಿಂದ 10 ಜನರು ಮತ್ತು ಸ್ವತಂತ್ರ ಅಭ್ಯರ್ಥಿಗಳಾಗಿ 05 ಜನರು ಸ್ಪರ್ಧಿಸಿದ್ದಾರೆ. ಮುಖ್ಯವಾಗಿ, ನಿರಂತರವಾಗಿ 04 ಬಾರಿ ಗೆದ್ದವರೂ, ಎರಡು ಬಾರಿ ಮಂತ್ರಿಯಾದ ರೇವು ನಾಯಕ ಬೆಳಮಗಿ ಬಿಜೆಪಿ ಯಿಂದ ಹುರಿಯಾಳಾಗಿದ್ದರೇ, ಮಾಜಿ ಸಚಿವ ಜಿ ರಾಮಕೃಷ್ಣ ಕಾಂಗ್ರೆಸ್ ನಿಂದ ಮತ್ತು ಮತ್ತೊಬ್ಬ ಮಾಜಿ ಸಚಿವ ಬಾಬುರಾವ್ ಚವ್ಹಾಣ್ ಕೆಜೆಪಿ ಯಿಂದ ಸ್ಪರ್ಧಿಸಿ, ಈ ಕ್ಷೇತ್ರದ ಅಭಿವೃದ್ದಿಗಾಗಿ ಮತ್ತೊಮ್ಮೆ ಅವಕಾಶ ನೀಡಲು ಕ್ಷೇತ್ರದ ಜನತೆಯನ್ನು ಕೋರುತ್ತಿದ್ದಾರೆ. ಅದೇ ರೀತಿ ಸಿಪಿಐ(ಎಂ) ಪಕ್ಷದಿಂದ ಅಂಬಲಗಿ ಮಾರುತಿ ಮಾನಪಡೆ ಹುರಿಯಾಳಾಗಿದ್ದಾರೆ.

ಕ್ಷೇತ್ರದೊಳಗಿನ ರಾಜಕೀಯ ಪರಿಸ್ಥಿತಿ

ಯಡಿಯೂರಪ್ಪನವರ ಬೆಂಬಲಿಗರಾಗಿದ್ದ ರೇವು ನಾಯಕರು, ಅವರನ್ನು ಬಿಟ್ಟು ಬಿಜೆಪಿಯಲ್ಲಿ ಉಳಿದಿರುವುದು ಅಭಿವೃದ್ದಿ ಮಾಡಲಿಲ್ಲವೆಂಬ ಬೇಸರ ಮತ್ತು ಈ ಮೊದಲಿನಂತಹ ನಡವಳಿಕೆ ಇಲ್ಲವೆಂಬ ಭಾವನೆ ಬೆಳೆದು ಅಸಮಾಧಾನ ತಳೆದು ಈ ಬಾರಿ ರೇವು ನಾಯಕರಿಗೆ ಸೋಲು ಖಚಿತವೆಂಬ ಅಭಿಪ್ರಾಯ ವ್ಯಾಪಕಗೊಂಡಿದೆ.


ಅದೇ ಸಂದರ್ಭದಲ್ಲಿ, ಬಿಜೆಪಿಯ ಆಧಾರವಾಗಿದ್ದ ಮುಂದುವರೆದ ಲಿಂಗಾಯತ ಜನ ಸಮುದಾಯ ಗಣನೀಯ ಸಂಖ್ಯೆಯಲ್ಲಿ ಕೆಜೆಪಿಗೆ ವಲಸೆ ನಡೆದುದು, ಬಿಜೆಪಿಗೆ ಸೋಲುವ ಭೀತಿಯನ್ನು ತಂದಿದೆ. ಕಳೆದ ಬಾರಿ ಸುಮಾರು 40 ಸಾವಿರ ಮತಗಳಿಂದ ಗೆದ್ದಿದ್ದ ಹಾಲಿ ಮಂತ್ರಿ ರೇವು ನಾಯಕರು ಈ ಒಡಕಿನಿಂದ ಆತಂಕಿತರಾಗಿದ್ದಾರೆ. ಕೆಜೆಪಿ ಯೂ ಕೂಡ ಬಿಜೆಪಿಯ ಎಲ್ಲಾ ಮತಗಳನ್ನು ಪಡೆದು ಗೆಲುವು ಸಾಧಿಸುವುದು ಕಠಿಣವೆನ್ನಲಾಗುತ್ತಿದೆ.

ಅದೇ ರೀತಿ ಕಾಂಗ್ರೆಸ್ ಒಡೆದ ಮನೆಯಾಗಿದೆ. ಹಾಲಿ 02 ಗುಂಪುಗಳು ಚಾಲ್ತಿಯಲ್ಲಿವೆ. ಖರ್ಗೆಯವರ ಗುಂಪು ಹಾಗು ಅಭ್ಯರ್ಥಿ ರಾಮಕೃಷ್ಣರವರ ಗುಂಪುಗಳು. ಕಳೆದ ಎಲ್ಲಾ ಸಂದರ್ಭಗಳಲ್ಲಿ ಈ ಗುಂಪುಗಾರಿಕೆ ಯ ಪರಿಣಾಮವು ಕಾಂಗ್ರೆಸ್ ಪಕ್ಷದ ಸೋಲಿನಲ್ಲಿ ಕಂಡಿದೆ–ಯೆಂದು ಹೇಳಲಾಗುತ್ತದೆ. ಅದೇ ರೀತಿ ಈಗ ಖರ್ಗೆಯವರ ಮಗ ಚಿತ್ತಾಪುರ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದು, ಇಲ್ಲಿನ (ಗುಲ್ಬರ್ಗಾ ಗ್ರಾಮಾಂತರ)ಗೆಲುವು, ಖರ್ಗೆಯ ಮಗನ ಜೊತೆ ಮಂತ್ರಿ ಸ್ಥಾನಕ್ಕಾಗಿ ಪೈಪೋಟಿ ಬರಲಿದೆಯೆಂಬ ಕಾಣಕ್ಕಾಗಿ ಈ ಬಾರಿಯು ಅವರ ಗುಂಪುಗಾರಿಕೆಯು ರಾಮಕೃಷ್ಣರವರ ಸೋಲಿಗೆ ಕಾರಣವಾಗಲಿದೆಯೆಂಬ ವಿಚಾರ ಕ್ಷೇತ್ರದಾದ್ಯಂತ ಚರ್ಚೆ ಯಲ್ಲಿದೆ. ಕೆಜೆಪಿ

ಪುಟ 10 ಕ್ಕೆ

ಕರ್ನಾಟಕದಲ್ಲಿ ಕಾಂಗ್ರೆಸ್ ಬಿಜೆಪಿಗೆ ಪರ್ಯಾಯವಾಗದು –ಪ್ರಕಾಶ್ ಕಾರಾಟ್

"ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ದೇಶದ ಸಂಪನ್ಮೂಲಗಳನ್ನು ಕಾರ್ಪೊರೇಟ್ ಮನೆತನಗಳಿಗೆ ಮಾರಿಕೊಂಡಿದ್ದು, ಕರ್ನಾಟಕದಲ್ಲಿ ಬಿಜೆಪಿ ಸಾವಿರಾರು ಕೋಟಿ ರೂಪಾಯಿಗಳನ್ನು ಅಕ್ರಮ ಗಣಿಗಾರಿಕೆಯಲ್ಲಿ ಲೂಟಿ ಮಾಡಲು ಬಿಟ್ಟಿದೆ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಾಟ್ ಹೇಳಿದ್ದಾರೆ. ಅವರು ಎಪ್ರಿಲ್ 29ರಂದು ಗುಲ್ಬರ್ಗಾ ಗ್ರಾಮೀಣ ಕ್ಷೇತ್ರದ ಮಹಾಗಾಂವ್‌ನಲ್ಲಿ ಪಕ್ಷದ ಅಭ್ಯರ್ಥಿ ಮಾರುತಿ ಮಾನ್ಪಡೆ ಅವರ ಪ್ರಚಾರಾರ್ಥವಾಗಿ ಏರ್ಪಡಿಸಲಾಗಿದ್ದ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.



"ಕರ್ನಾಟಕದಲ್ಲಿ ಭ್ರಷ್ಟಾಚಾರದ ಕಾರಣಕ್ಕಾಗಿ ಮೊಟ್ಟ ಮೊದಲ ಬಾರಿಗೆ ಮುಖ್ಯಮಂತ್ರಿಯೊಬ್ಬರು ಜೈಲಿಗೆ ಹೋಗಬೇಕಾಯಿತು" ಎಂದು ಹೇಳಿದ ಅವರು "ಆದರೆ ಕಾಂಗ್ರೆಸಿಗೆ ಬಿಜೆಪಿಯ ಭ್ರಷ್ಟಾಚಾರವನ್ನಾಗಲಿ, ದುರಾಡಳಿತವನ್ನಾಗಲಿ ಟೀಕಿಸುವ ಹಕ್ಕಿಲ್ಲ, ಯಾಕೆಂದರೆ ಬೆಲೆ ಏರಿಕೆಯನ್ನು ತಡೆಗಟ್ಟದೆ ದೇಶದ ಜನ ಸಾಮಾನ್ಯರು ನಿತ್ಯ ನರಳಾಡುವಂತೆ ಮಾಡಿದೆ. ಆದ್ದರಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಬಿಜೆಪಿಗೆ ಪರ್ಯಾಯವಾಗದು" ಎಂದು ಹೇಳಿದರು.

ಅಭಿವೃದ್ಧಿ ಹೆಸರಿನಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಮತಯಾಚನೆ ಮಾಡುತ್ತಿರುವುದನ್ನು ಟೀಕಿಸಿದ ಪ್ರಕಾಶ್ ಕಾರಾಟ್ ಎರಡೂ ಪಕ್ಷಗಳು ದೊಡ್ಡ ಬಂಡವಾಳಶಾಹಿ ಮನೆತನಗಳ ಹಿತಕಾಪಾಡುವ ಪಕ್ಷಗಳಾಗಿವೆ ಎಂದು ಹೇಳಿದರು. ಆದರೆ ಸಿಪಿಐ(ಎಂ) "ಆಮ್ ಆದ್ಮಿ" ಹಿತಕ್ಕೆ ಬದ್ಧವಾದ ಅಭಿವೃದ್ಧಿಯ ಪರ್ಯಾಯ ಮಾದರಿಯನ್ನು ದೇಶದ ಮುಂದಿಟ್ಟಿದೆ" ಎಂದು ಹೇಳಿದ ಅವರು ಕಾಂಗ್ರೆಸ್ ಮತ್ತು ಬಿಜೆಪಿಗೆ ಧೋರಣೆಗಳ ಆಧಾರದಲ್ಲಿ ಪರ್ಯಾಯವನ್ನು ಒದಗಿಸಬಲ್ಲ ಮೂರನೇ ರಂಗವನ್ನು ಬಲಪಡಿಸುವುದಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ಅಭ್ಯರ್ಥಿ ಮಾರುತಿ ಮಾನ್ಪಡೆ ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಕೇಂದ್ರದ ಕಾರ್ಮಿಕ ಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರಾಗಲಿ, ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅವರಾಗಲಿ ಏನನ್ನೂ ಮಾಡಲಿಲ್ಲ ಎಂದು ಹೇಳಿದರು.

ಬೈಂದೂರು ಮತಕ್ಷೇತ್ರದಲ್ಲಿ ಸಿಪಿಐ(ಎಂ) ಪರ ಒಲವು

ವೆಂಕಟೇಶ್ ಕೋಣಿ

ಬೈಂದೂರು ಅತ್ಯಂತ ಹಿಂದುಳಿದ ವಿಧಾನಸಭಾ ಮತಕ್ಷೇತ್ರಗಳಲ್ಲಿ ಒಂದಾಗಿದ್ದು, ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಬಗ್ಗೆ ಭ್ರಮನಿರಸನ ಗೊಂಡಿರುವ ಮತದಾರರಲ್ಲಿ ಸಿಪಿಐ(ಎಂ) ಪರ ಒಲವು ಹೆಚ್ಚಾಗುತ್ತಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ ಹೇಳಿದ್ದಾರೆ. ಅವರು ಉಡುಪಿಯಲ್ಲಿ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದರು.

ಹಿಂದೆ ಸತತ ಎರಡು ಅವಧಿಗಳಲ್ಲಿ ಗೆದ್ದ ಕಾಂಗ್ರೆಸ್ ಪಕ್ಷದ ಗೋಪಾಲ ಪೂಜಾರಿ ಅವರ ಬಗ್ಗೆ ಬೆಳೆದು ಬಂದ ಅತೃಪ್ತಿಯ ಭಾಗವಾಗಿ ಕಳೆದ ಚುನಾವಣೆಯಲ್ಲಿ ಬಿಜೆಪಿಯ ಕೆ. ಲಕ್ಷ್ಮಿನಾರಾಯಣ ಆಯ್ಕೆಯಾಗಿದ್ದರು. ಆದರೆ, ಕಳೆದ 5 ವರ್ಷಗಳ ಬಿಜೆಪಿಯ ದುರಾಡಳಿತ, ಭ್ರಷ್ಟಾಚಾರ, ಮತ್ತು ಅಧಿಕಾರಕ್ಕಾಗಿ ನಡೆದ ಕಿತ್ತಾಟದಿಂದಾಗಿ ರಾಜ್ಯದಲ್ಲಿ ಒಂದು ಸರ್ಕಾರವೇ ಇಲ್ಲದಂತಾಗಿ, ಬೈಂದೂರು ಕ್ಷೇತ್ರವು ಅಭಿವೃದ್ಧಿಯನ್ನು ಕಾಣದೆ ಸೊರಗಿದೆ. ಈಗ ಅದೇ ಬಿಜೆಪಿ ಬಗ್ಗೆ ಮತ್ತು ಅದರಿಂದ ಸಿಡಿದು ಬಂದ ಕೆಜೆಪಿ ಬಗ್ಗೆ ಮತದಾರರಲ್ಲಿ ನಿರುತ್ಸಾಹ ಎದ್ದು ಕಾಣುತ್ತದೆ. ಎರಡನೇ ಬಾರಿಗೆ ಸ್ಪರ್ಧಿಸಿರುವ ಸಿಪಿಐ(ಎಂ) ಬಗ್ಗೆ ಮತದಾರರ ಒಲವು ಗಣನೀಯವಾಗಿ ಹೆಚ್ಚಾಗಿದೆ.


ಸಿಪಿಐ(ಎಂ) ಅಭ್ಯರ್ಥಿ ಮತ್ತು ಕಾರ್ಯಕರ್ತರಿಂದ ಮತಯಾಚನೆ

ಕಳೆದ 5 ವರ್ಷಗಳಲ್ಲಿ ಸಿಪಿಐ(ಎಂ) ಕ್ಷೇತ್ರದಲ್ಲಿ ಜನರ ಪ್ರಶ್ನೆಗಳನ್ನು ಎತ್ತಿ-ಕೊಂಡು ನಡೆಸಿದ ಹೋರಾಟಗಳು ಹೆಚ್ಚಾಗಿವೆ. ಗ್ರಾಮೀಣ ಕಟ್ಟಡ ಕಾರ್ಮಿಕರ ನಡುವೆ ಸಂಘಟನೆ ವಿಸ್ತಾರಗೊಂಡಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಸಿಪಿಐ(ಎಂ) ಶ್ರಮಿಸಿದೆ. ನಿವೇಶನ ರಹಿತರನ್ನು ಸಂಘಟಿಸಿ ಅವರಿಂದ ನಿವೇಶನಗಳಿಗಾಗಿ ಅರ್ಜಿಗಳನ್ನು ಸಲ್ಲಿಸಲಾಗಿದೆ. ಅಕ್ರಮ ಸಕ್ರಮ ಬೇಡಿಕೆಗಾಗಿ ಹೋರಾಟಗಳನ್ನು ನಡೆಸಲಾಗಿದೆ. ರೇಷನ್ ಹಾಗೂ ರೇಷನ್ ಕಾರ್ಡುಗಳ ವಿತರಣೆಗಾಗಿ ನಿರಂತರ ಹೋರಾಟಗಳನ್ನು ನಡೆಸಲಾಗಿದೆ. ಇಷ್ಟು ಮಾತ್ರವಲ್ಲದೆ ಕ್ಷೇತ್ರದಲ್ಲಿರುವ ಹತ್ತಾರು ಹಂಚು ಕಾರ್ಖಾನೆಗಳ ಕಾರ್ಮಿಕರ ನಡುವೆ ಸಾಕಷ್ಟು ಹಳೆಯದಾದ ಕಾರ್ಮಿಕ ಸಂಘಟನೆ ಕ್ರಿಯಾಶೀಲವಾಗಿದೆ. ಅಂಗನವಾಡಿ ಮತ್ತು ಬಿಸಿಯೂಟದ ನೌಕರರ ನಡುವೆ ಸಂಘಟನೆ ಇದೆ. ಯುವಜನರ ನಡುವೆ ಡಿವೈಎಫ್ಐ ಸಕ್ರೀಯವಾಗಿದೆ. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾಗಿ ಸಿಪಿಐ(ಎಂ) ಅನ್ನು ಆಯ್ಕೆಮಾಡಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ಕ್ಷೇತ್ರದ ನೈಜ ಅಭಿವೃದ್ಧಿಗಾಗಿ, ಕೈಗಾರಿಕೆಗಳ ಸ್ಥಾಪನೆ ಹೊಸ ತಾಲೂಕು ಕೇಂದ್ರದ ಅಭಿವೃದ್ಧಿ, ಗಂಗೊಳ್ಳಿ ಬಂದರು ಅಭಿವೃದ್ಧಿ, ಮೀನುಗಾರರ ಸಮಸ್ಯೆಗಳಿಗೆ ಪರಿಹಾರ, ಕುಡಿಯುವ ನೀರಿನ ಸಮಸ್ಯೆ, ವರಾಹಿ ನೀರಾವರಿ ಯೋಜನೆ ಪೂರ್ಣಗೊಳಿಸುವುದು, ಗ್ರಾಮೀಣ ರಸ್ತೆ ನಿರ್ಮಾಣ, ವಿದ್ಯುತ್ ಸಂಪರ್ಕ, ಅಕ್ರಮ ಸಕ್ರಮ, ರೇಷನ್ ಪದ್ಧತಿಯ ಸಾರ್ವತ್ರೀಕರಣ, ಗ್ರಾಮೀಣ ಉದ್ಯೋಗ ಖಾತ್ರಿ ಸಮರ್ಪಕ ಜಾರಿ, ನಿವೇಶನ ರಹಿತರಿಗೆ ಮನೆ ನಿವೇಶನ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ವಿರೋಧ, ಆಹಾರ ಮುಂತಾದ


ಯಮುನಾ ಗಾಂವ್ಕರ್ ಪ್ರಚಾರ ಸಭೆಯಲ್ಲಿ ಮಾತನಾಡುತ್ತಿರುವುದು

ಸಬ್ಸಿಡಿಗಳನ್ನು ನೇರ ನಗದು ವರ್ಗಾವಣೆ ಮಾಡುವುದನ್ನು ವಿರೋಧಿಸುವುದು ಮುಂತಾದ ಪ್ರಶ್ನೆಗಳಿಗಾಗಿ ಮುಂದೆ ನಡೆಸಬೇಕಾಗುವ ಹೋರಾಟಗಳನ್ನು ಪರಿಣಾಮಕಾರಿಯಾಗಿಸಲು ಸಿಪಿಐ(ಎಂ) ಅಭ್ಯರ್ಥಿಯನ್ನು ಗೆಲ್ಲಿಸುವುದು ಅಗತ್ಯವಿದೆ ಎಂಬ ತೀರ್ಮಾನಕ್ಕೆ ಮತದಾರರಲ್ಲಿ ಹೆಚ್ಚೆಚ್ಚು ಸಹಮತ ವ್ಯಕ್ತವಾಗುತ್ತದೆ ಎಂದು ಹೇಳಿದರು.

ಈ ಮೊದಲು ನಿತ್ಯಾನಂದಸ್ವಾಮಿ ಅವರು ಬೈಂದೂರು ಪಟ್ಟಣದಲ್ಲಿ ಏರ್ಪಡಿಸಲಾಗಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿ ಬೈಂದೂರು ಮತಕ್ಷೇತ್ರದ ಮತದಾರರಿಗೆ ಬೇರೆ ಕ್ಷೇತ್ರಗಳ ಮತದಾರರಿಗೆ ದೊರಕದೆ ಇರುವ ಅವಕಾಶವೊಂದು ದೊರಕಿದೆ. ಭ್ರಷ್ಟ ಬಿಜೆಪಿಗೆ ಹಾಗೂ ಭ್ರಷ್ಟ ಕಾಂಗ್ರೆಸಿಗೆ ಪರ್ಯಾಯವಾಗಿ ಯಾವ ಪಕ್ಷವನ್ನು ಆಯ್ಕೆ ಮಾಡಲು ಸಾಧ್ಯವಾಗದ ಪರಿಸ್ಥಿತಿ ಇದೆ. ಬೈಂದೂರ್ ಕ್ಷೇತ್ರದ ಮತದಾರರು ಭಾಗ್ಯವಂತರು. ಅವರಿಗೆ ಕಾಂಗ್ರೆಸನ್ನೂ ಮತ್ತು ಬಿಜೆಪಿಯನ್ನೂ ತಿರಸ್ಕರಿಸಿ ವಿಶ್ವಾಸಾರ್ಹ ಪಕ್ಷವಾಗಿರುವ ಸಿಪಿಐ(ಎಂ)ಗೆ ಮತ ನೀಡಲು ಅವಕಾಶ ಒದಗಿ ಬಂದಿದೆ. ಈ ಸದಾವಕಾಶವನ್ನು ಕಳೆದುಕೊಳ್ಳಬೇಡಿ, ಆನಂತರ ನಿರಾಶರಾಗಬೇಡಿ ಎಂದು ಮನವಿ ಮಾಡಿದರು.

ಸಿಪಿಐ(ಎಂ) ಅಭ್ಯರ್ಥಿ ಕೆ.ಶಂಕರ್, ರಾಜ್ಯ ಸಮಿತಿ ಸದಸ್ಯ ಬಾಲಕೃಷ್ಣಶೆಟ್ಟಿ, ಜಿಲ್ಲಾ ಸಮಿತಿ ಸದಸ್ಯ ವೆಂಕಟೇಶ್ ಕೋಣಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜತ್ಕಲ್, ಮುದೂರು, ಆಲೂರು ಮೊದಲಾದ ಗ್ರಾಮಗಳಲ್ಲಿ ಏರ್ಪಡಿಸಲಾದ ಪ್ರಚಾರ ಸಭೆಗಳಲ್ಲಿಯೂ ನಿತ್ಯಾನಂದಸ್ವಾಮಿ ಭಾಗವಹಿಸಿದ್ದರು.

ಗಂಗೊಳ್ಳಿಯಲ್ಲಿ ಏರ್ಪಡಿಸಲಾಗಿದ್ದ ಪ್ರಚಾರ ಸಭೆಯಲ್ಲಿ ಪಕ್ಷದ ಉತ್ತರ ಕನ್ನಡ ಜಿಲ್ಲೆಯ ಮುಖಂಡರಾದ ಯಮುನಾ ಗಾಂವ್ಕರ್ ಮಾತನಾಡಿ ಸಂಘಪರಿವಾರದವರು ಕರಾವಳಿ ಜಿಲ್ಲೆಗಳನ್ನು ತಮ್ಮ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡಿವೆ ಎಂದು ಟೀಕಿಸಿದರು. ಅದರ ಪರಿಣಾಮವಾಗಿ ಈ ಜಿಲ್ಲೆಗಳಲ್ಲಿ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ, ಅವರ ಪ್ರಾರ್ಥನಾ ಮಂದಿರಗಳ ಮೇಲೆ ಧಾಳಿ ದೌರ್ಜನ್ಯಗಳು ಹೆಚ್ಚಾಗಿವೆ. ಪಬ್ ಮತ್ತು ಹೋಂ ಸ್ಟೇಗಳ ಮೇಲಿನ ದಾಳಿಗಳ ಹೆಸರಿನಲ್ಲಿ ಮಹಿಳೆಯರ ಮೇಲೆಯೂ ಧಾಳಿಗಳನ್ನು ಮಾಡಲಾಗಿದೆ. ಇದ-ರಿಂದಾಗಿ ನಗರಗಳಲ್ಲಿ ಮತ್ತು ಕೆಲವು ಗ್ರಾಮೀಣ ಪ್ರದೇಶಗಳಲ್ಲಿಯೂ ಜನರ ನೆಮ್ಮದಿಗೆ ಧಕ್ಕೆಉಂಟಾಗಿದೆ. ಇದರಿಂದ ಬೇಸತ್ತ ಉಡುಪಿ, ದಕ್ಷಿಣಕನ್ನಡ ಜಿಲ್ಲೆಗಳ ನಗರವಾಸಿಗಳು ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಯನ್ನು ಹೀನಾಯವಾಗಿ ಸೋಲಿಸಿದ್ದಾರೆ. ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಭ್ರಷ್ಟಕೋಮುವಾದಿ ಬಿಜೆಪಿಯನ್ನು ಸೋಲಿಸುವ ಮತ್ತು ಜನವಿರೋಧಿ ಕಾಂಗ್ರೆಸನ್ನು ತಿರಸ್ಕರಿಸುವ ಸಲುವಾಗಿ ಸಿಪಿಐ(ಎಂ)ನ ಕೆ. ಶಂಕರ್ ಅವರಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಪಕ್ಷದ ಅಭ್ಯರ್ಥಿ ಕೆ. ಶಂಕರ್ ಮಾತನಾಡಿದರು. ಪಕ್ಷದ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಮಹಾಬಲ ವಡೇರಹೋಬಳಿ, ಎಚ್. ವಿಠಲ ಪೂಜಾರಿ ಮೊದಲಾದವರು ಉಪಸ್ಥಿತರಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಲ್ಲಿದ್ದಲು ಹಗರಣವೂ ಮತ್ತು ಸಿಬಿಐ ದುರ್ಬಳಕೆಯೂ

ಸೀತಾರಾಂ ಯೆಚೂರಿ

> "ನಿಮ್ಮ ಕ್ರಿಯೆ ಸ್ವತಂತ್ರ ಪ್ರಕ್ರಿಯೆಯನ್ನು ಅಲುಗಾಡಿಸಿಟ್ಟಿದೆ. ನಾವು ಮಾಡಬೇಕಾದ ಮೊದಲ ಕೆಲಸವೆಂದರೆ ಸಿಬಿಐಯನ್ನು ಯಾವುದೇ ಹೊರಗಿನ ಪರಿಗಣನೆ ಮತ್ತು ಹಸ್ತಕ್ಷೇಪ ತನಿಖೆಗೆ ಬಾಧೆಯುಂಟು ಮಾಡದಂತೆ ವಿಮೋಚನೆಗೊಳಿಸುವುದು" ಎಂದು ಸಿಬಿಐಯನ್ನು ಮತ್ತು ಸರಕಾರವನ್ನು ಸುಪ್ರಿಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಅದು ಏಳು ಪ್ರಶ್ನೆಗಳಿಗೆ "ಮುಚ್ಚುಮರೆಯಿಲ್ಲದ, ಪ್ರಾಮಾಣಿಕವಾದ ಮತ್ತು ದಾಖಲೆಗಳ ಸಹಿತವಾದ" ಉತ್ತರಗಳನ್ನು ಕೇಳಿದೆ. ಈ ನಿರ್ದೇಶನಗಳನ್ನು ಪಾಲಿಸಿದರೆ ಸಿಬಿಐ ಮತ್ತು ಸರಕಾರ ಎರಡೂ ಗಂಭೀರ ತೊಂದರೆಗೆ ಒಳಗಾಗುತ್ತವೆ.


ಕಲ್ಲಿದ್ದಲು ಹಗರಣದ ಸಿಬಿಐ ತನಿಖೆಯನ್ನು ತನಗೆ ಬೇಕಾದಂತೆ ತಿರುಗಿಸುವಲ್ಲಿ ಯುಪಿಎ–2 ಸರಕಾರದ ಪಾತ್ರದ ಬಗ್ಗೆ ಇದ್ದ ಅನುಮಾನಗಳು ಈಗ ದೃಢಪಟ್ಟಿವೆ. ಏಪ್ರಿಲ್ 30ರಂದು ಸುಪ್ರಿಂ ಕೋರ್ಟ್‌ನ ಕಟು ಟಿಪ್ಪಣಿಗಳ ಮೂಲಕ ಇಂತಹ ಹಸ್ತಕ್ಷೇಪ ನಡೆದಿದೆ ಎಂದು ಸ್ಥಾಪಿತವಾಗಿದೆ.

ನ್ಯಾಯಮೂರ್ತಿಗಳಾದ ಆರ್. ಎಂ.ಲೋಧ, ಮದನ್ ಬಿ.ಲಕುರ್ ಮತ್ತು ಕುರಿಯನ್ ಜೋಸೆಫ್‌ರವರ ನ್ಯಾಯಪೀಠ "ಒಂದು ಪ್ರಧಾನ ತನಿಖಾ ಸಂಸ್ಥೆಯಾಗಿ ನಿಮ್ಮ ಕ್ರಿಯೆ ಅದರ ವಿಶ್ವಾಸಾರ್ಹತೆ ಮತ್ತು ನಿಷ್ಪಕ್ಷಪಾತತೆಯನ್ನು ಹೆಚ್ಚಿಸುವಂತದ್ದಿರಬೇಕು. ಸ್ವಾತಂತ್ರ್ಯ ಎಂದರೆ ನೀವು(ಸಿಬಿಐ) ಕಾರ್ಯಾಂಗದ ಊರುಗೋಲುಗಳ ಮೇಲೆ ನಡೆಯಬೇಕೆಂದೇನೂ ಅಲ್ಲ. ನಿಮ್ಮ (ಕಾನೂನು ಮಂತ್ರಿ ಮತ್ತು ಇತರ ಅಧಿಕಾರಿಗಳೊಂದಿಗೆ ವರದಿಯನ್ನು ಹಂಚಿಕೊಳ್ಳುವ) ಕ್ರಿಯೆ ಸ್ವತಂತ್ರ ಪ್ರಕ್ರಿಯೆಯನ್ನು ಅಲುಗಾಡಿಸಿಟ್ಟಿದೆ. ನಾವು ಮಾಡಬೇಕಾದ ಮೊದಲ ಕೆಲಸವೆಂದರೆ ಸಿಬಿಐಯನ್ನುಯಾವುದೇ ಹೊರಗಿನ ಪರಿಗಣನೆ ಮತ್ತು ಹಸ್ತಕ್ಷೇಪ ತನಿಖೆಗೆ ಬಾಧೆಯುಂಟು ಮಾಡದಂತೆ ವಿಮೋಚನೆಗೊಳಿಸುವುದು. ಇದು ಪ್ರಧಾನ ಕೆಲಸ. ಈ ಮೊಕದ್ದಮೆಯಲ್ಲಿ ಅನಾವರಣಗೊಂಡ ತಲ್ಲಣಕಾರಿ ಘಟನೆಗಳು ತನಿಖೆಯ ವಿಶ್ವಾಸಾರ್ಹತೆಯನ್ನು ತಟ್ಟಿವೆ. ಈ ತನಿಖೆ ಮತ್ತು ಇನ್ನು ಮುಂದೆ ಎಲ್ಲ ತನಿಖೆಗಳು ಯಾವುದೇ ಹೊರಗಣ ಶಕ್ತಿಯಿಂದ ಪ್ರಭಾವಿತಗೊಳ್ಳದೇ ಇರಬೇಕು." ಎಂದು ಹೇಳಿದೆ. ಹೀಗಿರುವಾಗ, ಇನ್ನೂ ಕಾನೂನು ಮಂತ್ರಿಗಳು ತಮ್ಮ ಹುದ್ದೆಯಲ್ಲಿ ಉಳಿದಿರುವುದು ಯಾವುದೇ ರೀತಿಯಲ್ಲಿ ಒಪ್ಪತಕ್ಕಂತದ್ದಲ್ಲ.

ಮೂರು ಪ್ರಶ್ನೆಗಳು

ಈ ಹಗರಣಕ್ಕೆ ಸಂಬಂಧಪಟ್ಟಂತೆ ಮೂರು ಪ್ರಶ್ನೆಗಳು ಒಳಗೊಂಡಿವೆ. ಮೊದಲಿನದ್ದು, ನಡೆಯುತ್ತಿರುವ ತನಿಖೆಯ ಮೇಲೆ ಪ್ರಭಾವ ಬೀರುವ ಪ್ರಯತ್ನ ಮಾಡಿದ ತಪ್ಪಿತಸ್ಥ ವ್ಯಕ್ತಿಗಳು ಯಾರೆಂದು ಮತ್ತು ಸಾಮೂಹಿಕವಾಗಿ ಭಾರತ ಸರಕಾರದ ತಪ್ಪನ್ನು ಸ್ಥಾಪಿಸುವುದು. ಎರಡನೆಯದ್ದು, ಇದು ಸಿಬಿಐ ನ ನಿಷ್ಪಕ್ಷಪಾತತೆಯನ್ನು ಮತ್ತು ಅದರ ಸ್ವಾಯತ್ತತೆಯನ್ನು ಕಾಪಾಡುವ ಇನ್ನೂ ವ್ಯಾಪಕವಾದ, ಮತ್ತು ಅತ್ಯಂತ ಮಹತ್ವದ ಪ್ರಶ್ನೆ. ಅಷ್ಟೆ ಮಹತ್ವದ ಮೂರನೇ ಪ್ರಶ್ನೆಯೆಂದರೆ, ಕಲ್ಲಿದ್ದಲು ಗಣಿಗಳ ಕಾನೂನುಬಾಹಿರ ಹಂಚಿಕೆಗೆ ಹೊಣೆಗಾರರಾದ ವ್ಯಕ್ತಿಗಳನ್ನು ಗುರುತಿಸುವುದು; ಅವರನ್ನು ಶಿಕ್ಷಿಸಿ ಹಾಗೂ ಇಂತಹ ಯೋಗ್ಯತೆಯನ್ನು ಬಿಟ್ಟು ಬೇರೆ ಕಾರಣಗಳಿಗಾಗಿ ಮಾಡಿದ ಹಂಚಿಕೆಗಳನ್ನು ರದ್ದು ಮಾಡಿ, ಈ ಖನಿಜ ಸಂಪತ್ತನ್ನು ಅದರ ಪ್ರಸಕ್ತ ಮಾರುಕಟ್ಟೆ ಬೆಲೆಯನ್ನು ಬಿಂಬಿಸುವ ಒಂದು ವಿಧಾನದ ಮೂಲಕ ಮರುಹಂಚಿಕೆ ಮಾಡಿ ಸರಕಾರೀ ಖಜಾನೆಗೆ ಆದ ನಷ್ಟವನ್ನು ಸ್ವಲ್ಪವಾದರೂ ಭರ್ತಿ ಮಾಡಲು ಪ್ರಯತ್ನಿಸುವ ಮೂಲಕ ನ್ಯಾಯ ಒದಗಿಸುವುದು.

ಆಗಸ್ಟ್ 17, 2012 ರಂದು ಮಹಾ ಲೆಕ್ಕ ಪರಿಶೋಧಕರು(ಸಿಎಜಿ) ಸಂಸತ್ತಿಗೆ ಮಂಡಿಸಿದ ವರದಿ ಕಲ್ಲಿದ್ದಲು ಬ್ಲಾಕುಗಳ ಹಂಚಿಕೆ ಮಾಡಿದ ರೀತಿಯಿಂದಾಗಿ ರಾಷ್ಟ್ರೀಯ ಖಜಾನೆಗೆ ರೂ.1.86ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ ಎಂದು ತಿಳಿಸಿತು(ಮಾರ್ಚ್ 22, 2012ರ ಕರಡು ವರದಿಯಲ್ಲಿ ಮಾಡಿದ ನಷ್ಟದ ಅಂದಾಜು ರೂ. 10.67 ಲಕ್ಷ ಕೋಟಿ!). ಸಪ್ಟಂಬರ್ 6, 2012 ರಂದು ಸುಪ್ರಿಂ ಕೋರ್ಟ್ 2004ರಿಂದ 2011ರ ನಡುವೆ ಮಾಡಿದ ಕಲ್ಲಿದ್ದಲು ಗಣಿಗಳ ಹಂಚಿಕೆಯನ್ನು ರದ್ದು ಮಾಡಬೇಕು ಎಂದು ಕೋರುವ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ವಿಚಾರಣೆಗೆ ಸ್ವೀಕರಿಸುತ್ತದೆ. ಈಗ ಸರ್ವೋಚ್ಚ ನ್ಯಾಯಾಲಯ ವಿಚಾರಣೆ ನಡೆಸುತ್ತಿರುವುದು ಇದೇ ಅರ್ಜಿಯ ಮೇಲೆ.



ವಿಚಾರಣೆಯ ವೇಳೆಯಲ್ಲಿ ಮಾರ್ಚ್ 8, 2013ರಂದು ಸಿಬಿಐ ತನಿಖೆಯ ಒಂದು ಹಂತದ ವರದಿಯನ್ನು ಸಲ್ಲಿಸಿ ಕಲ್ಲಿದ್ದಲು ಗಣಿಗಳ ಹಂಚಿಕೆಯನ್ನು ಸರಿಯಾದ ವಿಧಾನದಲ್ಲಿ ಮಾಡಿಲ್ಲ ಎಂದು ಸುಪ್ರಿಂ ಕೋರ್ಟಿಗೆ ತಿಳಿಸುತ್ತದೆ. ಆದರೆ ಈ ವರದಿಯನ್ನು ಕೇಂದ್ರ ಕಾನೂನು ಮಂತ್ರಿಗಳ ಕರೆಯ ಮೇರೆಗೆ ಅವರಿಗೆ ತೋರಿಸಲಾಗಿದೆ, ಮಾತ್ರವಲ್ಲ, ಅದರ 'ಚಿಕಿತ್ಸೆ'ಯೂ ಆಗಿದೆ ಎಂಬ ಸಂಗತಿ ಆ ವರದಿಯಲ್ಲಿ ಇರಲಿಲ್ಲ. ಇದು ಮಹತ್ವದ ಪ್ರಶ್ನೆಯಾಗುತ್ತದೆ. ಏಕೆಂದರೆ, ಸರ್ವೋಚ್ಚ ನ್ಯಾಯಾಲಯ ಟಿಪ್ಪಣಿ ಮಾಡಿರುವಂತೆ, ಈ ತನಿಖೆ ಸ್ವತಂತ್ರವಾಗಿರುತ್ತದೆ ಎಂದು ಸಿಬಿಐ ಅದೇ ನ್ಯಾಯಾಲಯದ ಮುಂದೆ ನಿಸ್ಸಂದಿಗ್ಧವಾಗಿ ಹೇಳಿತ್ತು. ಈ ವರದಿಯನ್ನು ಕಾನೂನು ಮಂತ್ರಿಯೊಂದಿಗೆ ಚರ್ಚಿಸಲಾಗಿತ್ತು, ಆತ ಸೂಚಿಸಿದಂತೆ ಬದಲಾವಣೆಗಳನ್ನು ಮಾಡಲಾಗಿತ್ತು ಎಂಬುದು ಸಹಾಯಕ ಸಾಲಿಸಿಟರ್ ಜನರಲ್ ಹರಿನ್ ರಾವಲ್‌ರವರ ರಾಜೀನಾಮೆ ಪತ್ರದಲ್ಲಿ ದೃಢಪಟ್ಟಿದೆ. ಅವರು ಅಟಾರ್ನಿ ಜನರಲ್ ಜಿ.ಇ.ವಹನ್ವತಿಯವರ ಸಮ್ಮುಖದಲ್ಲಿ ಕಾನೂನು ಮಂತ್ರಿಗಳೊಂದಿಗೆ ನಡೆದ ಸಭೆಯ ಕಲಾಪಗಳನ್ನು ವಿವರಿಸಿದ್ದಾರೆ.

ಸಿಬಿಐ ಮತ್ತು ಕಾನೂನು ಮಂತ್ರಿಗಳ ಈ ಸಭೆ ಕುರಿತಂತೆ ರಾಷ್ಟ್ರೀಯ ಮಾಧ್ಯಮಗಳಲ್ಲಿ ವರದಿಗಳು ಬಂದು ರಾಜಕೀಯ ವಲಯದಲ್ಲಿ ಕೋಲಾಹಲ ಎದ್ದಾಗ, ಸುಪ್ರಿಂ ಕೋರ್ಟ್ ಏಪ್ರಿಲ್ 15, 2013 ರಂದು ಈ ವರದಿಯನ್ನು ಯಾರೊಂದಿಗೂ ಹಂಚಿಕೊಂಡಿಲ್ಲ ಎಂದು ದೃಡೀಕರಣ ಪತ್ರ (ಅಫಿಡವಿಟ್) ಸಲ್ಲಿಸುವಂತೆ ಸಿಬಿಐಗೆ ನಿರ್ದೇಶನ ನೀಡುತ್ತದೆ. ಎಪ್ರಿಲ್ 26ರಂದು ಸಿಬಿಐ ನಿರ್ದೇಶಕರು ದೃಡೀಕರಣ ಪತ್ರ ಸಲ್ಲಿಸುತ್ತಾರೆ–ಅದರಲ್ಲಿ, ವರದಿಯನ್ನು ಕಾನೂನು ಮಂತ್ರಿಗಳು, ಮತ್ತು ಪ್ರಧಾನ ಮಂತ್ರಿಗಳ ಕಚೇರಿಯಲ್ಲಿನ ಮತ್ತು ಕಲ್ಲಿದ್ದಲು ಇಲಾಖೆಯ ಅಧಿಕಾರಿಗಳೊಂದಿಗೆ ಹಂಚಿಕೊಳ್ಳಲಾಗಿದೆ ಎಂದು ಹೇಳುತ್ತಾರೆ. ಇವರೆಡೂ ಕಲ್ಲಿದ್ದಲು ಹಗರಣದಲ್ಲಿ ಆಪಾದನೆಗೊಳಗಾಗಿರುವ ಇಲಾಖೆಗಳೇ. ಎಪ್ರಿಲ್ 30ರಂದು ಸುಪ್ರಿಂ ಕೋರ್ಟ್ ಕಟುವಾದ ಟಿಪ್ಪಣಿ ಮಾಡುತ್ತದೆ ಹಾಗೂ ಮೇ6ರೊಳಗೆ ಒಂದು ಹೊಸ ಅಫಿಡವಿಟ್ ಸಲ್ಲಿಸುವಂತೆ ನಿರ್ದೇಶಿಸುತ್ತದೆ ಹಾಗೂ ಮೇ 8ರಿಂದ ವಿಚಾರಣೆ ನಡೆಯುತ್ತದೆ ಎಂದು ಹೇಳುತ್ತದೆ.

ಪ್ರಾಮಾಣಿಕ ಉತ್ತರ ಕೊಟ್ಟರೆ..

ಸುಪ್ರಿಂ ಕೋರ್ಟ್ ಏಳು ಪ್ರಶ್ನೆಗಳಿಗೆ ಉತ್ತರ ಕೇಳಿದೆ: 1. ಮಾರ್ಚ್ 8 ರಂದು ಸಲ್ಲಿಸಿದ ಸಿಬಿಐ ವರದಿಯಲ್ಲಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಮೊದಲು ಸರಕಾರದೊಂದಿಗೆ ಹಂಚಿಕೊಳ್ಳಲಾಗಿತ್ತು ಎಂದೇಕೆ ತಿಳಿಸಲಿಲ್ಲ? 2. ಯಾವ ಆಧಾರದ ಮೇಲೆ ಮಾರ್ಚ್ 12 ರಂದು ಸಹಾಯಕ ಸಾಲಿಸಿಟರ್ ಜನರಲ್ ಈ ವರದಿಯನ್ನು ಯಾರೊಂದಿಗೂ ಹಂಚಿಕೊಂಡಿಲ್ಲ ಎಂದು ದೃಢಪಡಿಸುವ ಹೇಳಿಕೆಯನ್ನು ನೀಡಿದರು? 3. ಕರಡಿನಲ್ಲಿ ಎಷ್ಟರ ಮಟ್ಟಿಗೆ ಮತ್ತು ಯಾರು ಹೇಳಿದ್ದಕ್ಕೆ ಬದಲಾವಣೆಗಳನ್ನು ಮಾಡಲಾಗಿದೆ? 4. ಕಾನೂನು ಮಂತ್ರಿ ಹಾಗೂ ಪ್ರಧಾನ ಮಂತ್ರಿಗಳ ಕಚೇರಿ ಮತ್ತು ಕಲ್ಲಿದ್ದಲು ಇಲಾಖೆಯ ಅಧಿಕಾರಿಗಳಲ್ಲದೆ ಬೇರೆ ಯಾರೊಂದಿಗಾದರೂ ವರದಿಯನ್ನು ಹಂಚಿಕೊಳ್ಳಲಾಗಿದೆಯೇ? 5. ಪ್ರಧಾನ ಮಂತ್ರಿಗಳ ಕಚೇರಿ ಮತ್ತು ಕಲ್ಲಿದ್ದಲು ಇಲಾಖೆಯ ಅಧಿಕಾರಿಗಳು ಯಾರು? 6. ನ್ಯಾಯಾಲಯಗಳು ಕೇಳುವ ತನಿಖೆ ಯಾವ ಮಟ್ಟದಲ್ಲಿದೆ ಎಂಬ ವರದಿಯನ್ನು ಸಿಬಿಐನ ಕಾರ್ಯಪ್ರಣಾಳಿ ಅಥವ ನಿಯಮಗಳ ಪ್ರಕಾರ ಹಂಚಿಕೊಳ್ಳುವ ವಿಧಾನ ಏನು? 7. ಈ ತನಿಖೆಯನ್ನು ನಿರ್ವಹಿಸುತ್ತಿರುವ ಸಿಬಿಐ ತಂಡದ ಹಿನ್ನೆಲೆ ವಿವರಗಳೇನು?

ಈ ಪ್ರಶ್ನೆಗಳಿಗೆ ಉತ್ತರಗಳು "ಮುಚ್ಚುಮರೆಯಿಲ್ಲದ, ಪ್ರಾಮಾಣಿಕವಾದ ಮತ್ತು ದಾಖಲೆಗಳ ಸಹಿತವಾದ" ಉತ್ತರಗಳಾಗಿರಬೇಕು ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಈ ನಿರ್ದೇಶನಗಳನ್ನು ಪಾಲಿಸಿದರೆ ಸಿಬಿಐ ಮತ್ತು ಸರಕಾರ ಎರಡೂ ಗಂಭೀರ ತೊಂದರೆಗೆ ಒಳಗಾಗುತ್ತವೆ. ಏಕೆಂದರೆ, ಕಲ್ಲಿದ್ದಲು ಹಗರಣದ ತನಿಖೆಗಳ ಉಸ್ತುವಾರಿ ವಹಿಸಿದ್ದ ಅಧಿಕಾರಿ ರವಿ ಕಾಂತ್ ಅವರನ್ನು ಬಾಸ್‌ಗಳು ಹಾಕಿದ ಗೆರೆಯಲ್ಲಿ ಸಾಗಲು ನಿರಾಕರಿಸಿದ್ದಕ್ಕಾಗಿ ಸಾಗಹಾಕಲಾಯಿತು ಎಂಬ ಆರೋಪಗಳಿವೆ.

'ವಿಶ್ವಾಸದ ಸಂಪೂರ್ಣ ಕ್ಷಯ'

ವಿನೀತ್ ನಾರಾಯಣ್ ಮೊಕದ್ದಮೆ(1997)ಯಲ್ಲಿ ಸಿಬಿಐ ಸರಕಾರದ ಆಡಳಿತ ಹತೋಟಿಯಲ್ಲಿದ್ದರೂ, ಅದನ್ನು ಸ್ವತಂತ್ರವಾಗಿರಿಸಬೇಕು ಎಂದು ಹೇಳಿ 15 ವರ್ಷಗಳೇ ಕಳೆದು ಹೋದರೂ, ಈಗಲೂ ರಾಜಕೀಯ ಪ್ರಭಾವ ಅದರ ನಿಷ್ಪಕ್ಷಪಾತತೆಯನ್ನು "ಭಂಗಗೊಳಿಸುತ್ತಿದೆ" ಎಂದು ಸರ್ವೋಚ್ಚ ನ್ಯಾಯಾಲಯ ಟಿಪ್ಪಣಿ ಮಾಡಿದೆ. ಸಿಬಿಐ ಅಂಗೀಕರಿಸಿದ ಈ ದಾರಿ ತೀವ್ರ ಟೀಕೆಗೆ ಒಳಗಾಗಿದೆ, ನ್ಯಾಯಪೀಠ ಸಿಬಿಐನಲ್ಲಿ "ವಿಶ್ವಾಸದ ಸಂಪೂರ್ಣ ಕ್ಷಯ" ಮತ್ತು ಅದರ ವರ್ತನೆ " ಸಮಸ್ತ ಪ್ರಜ್ಞೆಯನ್ನು ಕಲಕಿದೆ" ಎಂಬಿತ್ಯಾದಿ ಪದಗಳನ್ನು ಬಳಸಿದೆ.

ಈಗ ಸಿಬಿಐ ಮೇ 6ರಂದು ಏನು ಹೇಳುತ್ತದೆ ಎಂಬುದು ಬಹಳಷ್ಟು ಮಹತ್ವದ್ದಾಗುತ್ತದೆ. ಅದು ಅದರ ಕಾರ್ಯನಿರ್ವಹಣೆಯ ಮುಂದಿನ ಆಡಳಿತ ವ್ಯವಸ್ಥೆಯ ಮೇಲೆ ಗಹನವಾದ ಪ್ರಭಾವ ಬೀರಲಿದೆ. ಲೋಕಪಾಲ್ ಮಸೂದೆಯ ಮೇಲೆ ಸಂಸತ್ತಿನಲ್ಲಿ ಚರ್ಚೆಯ ವೇಳೆಯಲ್ಲಿ ಸಿಬಿಐನ ನಿಷ್ಪಕ್ಷಪಾತತೆಯ ಬಗ್ಗೆ ಇಂತಹ

ಪುಟ 15 ಕ್ಕೆ

ಶ್ರಮಿಕರ ಶ್ರಮದಿಂದಷ್ಟೇ ಜಗತ್ತಿನ ಅಭಿವೃದ್ಧಿ–ಎಚ್‌ಎಸ್ ನಿರಂಜನಾರಾಧ್ಯ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ತುಮಕೂರು ಜಿಲ್ಲಾ ಸಮಿತಿ ವತಿಯಿಂದ ನಗರದ ರವೀಂದ್ರ ಕಲಾನಿಕೇತನದ ಕಲಾ ಗ್ಯಾಲರಿಯಲ್ಲಿ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ರಾಜ್ಯಾಧ್ಯಕ್ಷ ಎಚ್.ಎಸ್.ನಿರಂಜನಾರಾಧ್ಯ ಮಾತನಾಡಿ ಪ್ರಾಚೀನ ಕಾಲದಿಂದಲೂ ಸಹ ಶ್ರಮ ಜೀವಿಗಳಿಂದಲೇ ಜಗತ್ತಿನ ಅಭಿವೃದ್ಧಿಯಾಗುತ್ತ ಬಂದಿದೆ ಎಂದು ಅಭಿಪ್ರಾಯಪಟ್ಟರು.

ಸಮಾಜದ ಅಭಿವೃದ್ಧಿಗೆ ಕಾರಣ-ರಾದ ಶ್ರಮಿಕರಿಗೆ ಬೂನಾದಿ ಇಲ್ಲದೆ ಜೀತದಾಳುಗಳಂತೆ ದುಡಿಯುತ್ತಿದ್ದು ಇದ-ರಿಂದ ವಿಮುಕ್ತಿ ಪಡೆಯಲು ಎಲ್ಲಾ ವಿಭಾಗದ ಕಾರ್ಮಿಕರು ಸಂಘಟಿತ ಹೋರಾಟದ ಮೂಲಕ ಪ್ರತಿಫಲ ಪಡೆಯುವ ಅನಿವಾರ್ಯತೆ ಇದೆ ಎಂದರು.

ಪ್ರಗತಿಪರ ಚಿಂತಕ ಕೆ.ದೊರೈರಾಜ್ ಅವರು ಮಾತನಾಡಿ, ಸಮಾಜದ ಬೆಳವಣಿಗೆಗೆ ಕಾರ್ಮಿಕರ ಕೊಡುಗೆ ಪ್ರಮುಖವಾಗಿದೆ. ಸೋಗಲಾಡಿ ರಾಜಕೀಯ ಪಕ್ಷಗಳಿಂದಾಗಿ ಕಾರ್ಮಿಕ ವರ್ಗ ನಿರಂತರ ಶೋಷಣೆಗೆ ಸಿಲುಕಿ ಕೇವಲ ಮಾಲಿಕನಿಗೆ ಲಾಭ ತರುವಂತಹ ಯಂತ್ರವಾಗಿದ್ದಾನೆ ಎಂದು ಆತಂಕ ವ್ಯಕ್ತಪಡಿಸಿದರು.

ಸೋಗಲಾಡಿ ರಾಜಕೀಯ ಪಕ್ಷಗಳ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಲು ಜಾತಿ, ಧರ್ಮ ಭಾಷೆ ಮತ್ತು ಪ್ರಾದೇಶಿಕ ಸಂಕುಚಿತತೆಗಳನ್ನು ಮೀರಿ ಕಾರ್ಮಿಕರು ಐಕ್ಯ ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಜಿಲ್ಲಾ ಕಾರ್ಯದರ್ಶಿ ಕಮಲ ಮಾತನಾಡಿ ಗೌರವ ಧನ ಆಧಾರಿತವಾಗಿ ದುಡಿಯುತ್ತಿರುವ ಎಲ್ಲಾ ವಿಭಾಗದ ಕಾರ್ಮಿಕರು ಒಗ್ಗೂಡಿ ಕನಿಷ್ಟ 10 ಸಾವಿರ ಕೂಲಿಗೆ ಹೋರಾಟ ನಡೆಸಬೇಕೆಂದು ತಿಳಿಸಿದರು.


ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಹ್ಮಣ್ಯ ಮಾತನಾಡಿ ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ, ಪಿಂಚಣಿ, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಗುತ್ತಿಗೆ ಕಾರ್ಮಿಕರ ಪದ್ದತಿ ನಿಷೇಧಿಸಿ ಖಾಯಂವರಾತಿ ಸ್ವರೂಪದ ಕೆಲಸಗಳಿ ಹೆಚ್ಚಳಕ್ಕೆ ಅಸಂಘಟಿತ ಮತ್ತು ಸಂಘಟಿ-ತ ವಲಯದ ಕಾರ್ಮಿಕರು ಜೊತೆಗೂಡಿ ವಿಶಾಲ ತಳಹದಿಯಲ್ಲಿ ಪ್ರಚಾರ ನಡೆಸಿ ಸಂಘಟಿಸಿ ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಬಿ.ಉಮೇಶ್ ಮಾತನಾಡಿ ಕಾರ್ಮಿಕರು ಪ್ರಾದೇಶಿಕ ಮತ್ತು ವಿಭಜನಕಾರಿ ಶಕ್ತಿಗಳನ್ನು ಜನಸಾಮಾನ್ಯರು ಬೆಂಬಲಿಸಿದರೆ ಸಮಾಜದಲ್ಲಿ ಅನಾರೋಗ್ಯಕರ ವಾತಾವರಣ ನಿರ್ಮಾಣವಾಗಲಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಿಐಟಿಯು ಜಿಲ್ಲಾಧ್ಯಕ್ಷ ಸೈಯ್ಯದ್ ಮುಜೀಬ್ ಮಾತನಾಡುತ್ತ ಕಾರ್ಮಿಕ ಚಳವಳಿಯ ಸಾಮಾಜಿಕ ಪ್ರಶ್ನೆಗಳಲ್ಲಿ ಮಧ್ಯೆ ಪ್ರವೇಶಿಸಲು ಸಿಐಟಿಯು ತೀರ್ಮಾನಿಸಿದೆ. ದಲಿತರ, ಆದಿವಾಸಿಗಳ, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಪ್ರಶ್ನೆಗಳ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಚಳವಳಿಯನ್ನು ಬಲಿಷ್ಟಗೊಳಿಸಬೇಕಾಗಿ ಕರೆ ನೀಡಿದರು.

ಸಮಾರಂಭದಲ್ಲಿ ಜೀವವಿಮಾ ನೌಕರರ ಸಂಘಟನೆ ಕಾರ್ಯದರ್ಶಿ ಕೆ.ಎಲ್. ಮಧುಸೂದನ್, ತಾಂತ್ರಿಕ ಸಂಸ್ಥೆಗಳ ಬೋಧಕೇತರರ ಸಂಘದ ಕಾರ್ಯದರ್ಶಿ ಟಿ.ಜಿ. ಶಿವಲಿಂಗಯ್ಯ, ಎಂಎಚ್‌ಐಬಿಯ ಕಾರ್ಮಿಕ ಸಂಘಟನೆ ಮುಖಂಡ ಜಯರಾಮ ಶೆಟ್ಟಿ ಮಾತನಾಡಿದರು. ವೇದಿಕೆಯಲ್ಲಿ ಎಂಎಚ್‌ಐನ ಕಾರ್ಯದರ್ಶಿ ಮಹೇಶ್, ಬೀಡಿ ಕಾರ್ಮಿಕ ಸಂಘಟನೆ ಮುಖಂಡ ನಿಸಾರ್ ಅಹಮದ್, ಪಾರಂಪರಿಕ ಕಲ್ಲು ಕುಟ್ಟುವ ಕಾರ್ಮಿಕ ಸಂಘದ ಕಾರ್ಯದರ್ಶಿ ನೌಷಾದ್ ಸೆಹಗನ್, ಕಾಫಿ ಮತ್ತು ಇತರೆ ಕಾರ್ಮಿಕರ ಸಂಘಟನೆಯ ರಂಗನಾಥ್, ಕರ್ನ್ ಲಿಬರ್ಸ ಕಾರ್ಮಿಕರ ಯೂನಿಯನ್ ಕಾರ್ಯದರ್ಶಿ ದಿಲೀಪ್‌ಕುಮಾರ್ ಕಾಳೇಶ್ವರಿ ಕಾರ್ಮಿಕ ಸಂಘಟನೆಯ ಖಜಾಂಚಿ ಮುತ್ತುರಾಜ್, ವಿಶಾಖ ಕಾರ್ಮಿಕ ಸಂಘಟನೆಯ ಉಪಾಧ್ಯಕ್ಷ ಚಂದ್ರಮೌಳಿ ಮೊದಲಾದವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಪಾರ್ವತಮ್ಮ ಸಂಗಡಿಗ-ರಿಂದ ಕ್ರಾಂತಿಗೀತೆ ಹಾಡಲಾಯಿತು. ಸಿಐಟಿಯು ತಾಲೂಕು ಅಧ್ಯಕ್ಷ ಪು-ಟ್ಟೇಗೌಡ ಸ್ವಾಗತಿಸಿ, ಸಿಐಟಿಯು ತಾಲೂಕು ಕಾರ್ಯದರ್ಶಿ ಷಣ್ಮುಖಪ್ಪ ನಿರೂಪಿಸಿದರು. ಸಿಐಟಿಯು ಮುಖಂಡ ನರಸಿಂಹಮೂರ್ತಿ ವಂದಿಸಿದರು. ಕಾರ್ಯಕ್ರಮಕ್ಕೂ ಮೊದಲು ಟೌನ್‌ಹಾಲ್ ವೃತ್ತದಿಂದ ನೂರಾರು ಕಾರ್ಮಿಕರು ಕೆಂಬಾವುಟಗಳನ್ನು ಹಿಡಿದು ವಿಶ್ವ ಕಾರ್ಮಿಕರ ದಿನಾಚರಣೆ ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ನಡೆಸಿದರು.


ಬೆಂ- ಕೆ.ಆರ್.ಪುರಂನ ಮೇ ದಿನಾಚರಣೆಯಲ್ಲಿ ಕಾಂ. ಪ್ರಕಾಶ್ ಕಾರಟ್, ಸಿಪಿಐ(ಎಂ) ಅಭ್ಯರ್ಥಿ ಕಾಂ.ಗೌರಮ್ಮ, ಕಾಂ.ಗೋಪಾಲಗೌಡ, ಕಾಂ. ವಿಜೆಕೆ ನಾಯರ್, ಕಾಂ. ಪ್ರಸನ್ನ ಕುಮಾರ್ (ಎಡಗಡೆ)


ಬೆಂಗಳೂರಿನ ಮೇ ದಿನದ ಮೆರವಣಿಗೆ

ರಾಮದುರ್ಗದಲ್ಲಿ ಮೇ ದಿನಾಚರಣೆ


ಜನಶಕ್ತಿ
ಕನ್ನಡ ವಾರಪತ್ರಿಕೆ

"ಹಣ ಬಲವನ್ನು ಸೋಲಿಸಿ, ಜನ ಬಲವನ್ನು ಗೆಲ್ಲಿಸಿ"

"ರಿಯಲ್ ಎಸ್ಟೇಟ್, ಭೂ ಮತ್ತು ಗಣಿ ಮಾಫಿಯಾದಲ್ಲಿ ತೊಡಗಿಕೊಂಡವರು



ಬಹಿರಂಗ ಸಭೆ ಮುನ್ನ ಮೆರವಣಿಗೆ



ಕಾ. ಸೀತಾರಾಂ ಯೆಚೂರಿ ಮಾತನಾಡುತ್ತಿರುವುದು

ರಾಜಕಾರಣವನ್ನು ಪ್ರವೇಶಿಸುತ್ತಿದ್ದು, ಅವರಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗುತ್ತಿದೆ. ಪ್ರಸಕ್ತ ಚುನಾವಣೆಯಲ್ಲಿ ಹಣಬಲವನ್ನು ಸೋಲಿಸಿ, ಜನ ಬಲವನ್ನು ಗೆಲ್ಲಿಸಿ" ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸದಸ್ಯರು, ಸಂಸದರೂ ಆಗಿರುವ ಸೀತಾರಾಂ ಯೆಚೂರಿ ಕರೆನೀಡಿದರು. ಅವರು ಬಾಗೇಪಲ್ಲಿ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಜಿ.ವಿ. ಶ್ರೀರಾಮರೆಡ್ಡಿ ಅವರ ಚುನಾವಣಾ ಪ್ರಚಾರದ ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

"ಕರ್ನಾಟಕ ರಾಜ್ಯದ ರಾಜಕಾರಣ ಸಂಪೂರ್ಣ ಹದಗೆಟ್ಟಿದೆ. ಎಲ್ಲವನ್ನೂ ಸುವ್ಯವಸ್ಥೆಗೆತರಲು ಮತದಾರರು ಎಡಪಕ್ಷಗಳ ಅಭ್ಯರ್ಥಿಗಳನ್ನು ಮತ್ತು ಪ್ರಮಾಣಿಕರನ್ನು ವಿಧಾನಸಭೆಗೆ ಆಯ್ಕೆ ಮಾಡಬೇಕು" ಎಂದರು. "ರಾಜ್ಯದ 30 ಕಡೆಗಳಲ್ಲಿ ಸಿಪಿಐ(ಎಂ) ಸೇರಿದಂತೆ ಎಡಪಕ್ಷಗಳ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಎಡಪಕ್ಷಗಳ ಅಭ್ಯರ್ಥಿಗಳು ಸ್ಪರ್ಧಿಸದಿರುವ ಕಡೆ ಕಾಂಗ್ರೆಸ್ ಮತ್ತು ಬಿಜೆಪಿಗೆ ವಿರುದ್ಧವಾಗಿ ಜನಪರ ಅಭ್ಯರ್ಥಿಗಳನ್ನು ಆಯ್ಕೆಮಾಡಬೇಕು" ಎಂದು ಅವರು ಮನವಿ ಮಾಡಿದರು.

"ಗುಜರಾತ್ ನರಮೇಧದ ಕಳಂಕ ಹೊತ್ತಿರುವ ನರೇಂದ್ರ ಮೋದಿ ಎಷ್ಟೇ ರಸವತ್ತಾಗಿ ಮತ್ತು ಪ್ರಚೋದನಾಕಾರಿಯಾಗಿ ಭಾಷಣ ಮಾಡಿದರೂ ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ. ಬಿಜೆಪಿ ದುರಾಡಳಿತವನ್ನು ಕಂಡಿರುವ ರಾಜ್ಯದ



ಕಾ. ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು

ಪ್ರಜ್ಞಾವಂತ ಜನರು ಬಿಜೆಪಿಗೆ ಮತ್ತೆ ಅಧಿಕಾರ ನೀಡುವುದಿಲ್ಲ ಎಂದು ಯೆಚೂರಿ ಹೇಳಿದರು.

ಸಿಪಿಎಂ ಅಭ್ಯರ್ಥಿ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ, ಕಪ್ಪು ಹಣದ ಹೊಳೆಯನ್ನೇ ಹರಿಸಿ 'ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಲೆತ್ನಿಸುತ್ತಿರುವ ಸಮಾಜ ಸೇವಕ(?)ರಿಗೆ ಚುನಾವಣೆಯಲ್ಲಿ ಚೆನ್ನಾಗಿ ಬುದ್ಧಿ ಕಲಿಸಬೇಕು' ಎಂದರು.

ಸಿಪಿಎಂ ರಾಜ್ಯ ಸಮಿತಿ ಸದಸ್ಯ ಎಸ್. ವೈ.ಗುರುಶಾಂತ್, ಜಿಲ್ಲಾ ಪಂಚಾಯಿತಿ

ಬಾಗೇಪಲ್ಲಿಯಲ್ಲಿ ಯೆಚೂರಿ

ಸದಸ್ಯೆಯರಾದ ಸಾವಿತ್ರಮ್ಮ, ನಾರಾಯಣಮ್ಮ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಮುನಿರತ್ನಮ್ಮ, ಉಪಾಧ್ಯಕ್ಷ ಶಂಕರ-ರೆಡ್ಡಿ, ಸಿಪಿಎಂ ಜಿಲ್ಲಾ ಘಟಕದ ಕಾರ್ಯದರ್ಶಿ ಎಂ.ಪಿ.ಮುನಿವೆಂಕಟಪ್ಪ, ಮುಖಂಡರಾದ ಚನ್ನರಾಯಪ್ಪ, ಕೆ. ನಾಗರಾಜ್, ರಘುರಾಮರೆಡ್ಡಿ, ಜಯರಾಮರೆಡ್ಡಿ, ಮಂಜುನಾಥರೆಡ್ಡಿ, ರಾಮರೆಡ್ಡಿ, ಅನಂತ್ ನಾಯಕ್, ನವೀನ್‌ಕುಮಾರ್ ಮತ್ತಿತರರು ಇದ್ದರು.

ಆರಂಭದಲ್ಲಿ ಬಾಗೇಪಲ್ಲಿ ಪಟ್ಟಣದ ಪ್ರಮುಖಬೀದಿಗಳಲ್ಲಿ ಪಕ್ಷದ ಬೆಂಬಲಿಗರ ಬೃಹತ್ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು. 30 ಸಾವಿರಕ್ಕೂ ಹೆಚ್ಚು ಜನ ಮೆರವಣಿಗೆಯಲ್ಲಿ ಹಾಗೂ ನಂತರ ನಡೆದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕೆಂಬಾವುಟಗಳಿಂದ, ಮತ್ತು ಕೆಂಪು ಸಮವಸ್ತ್ರಧಾರಿಗಳಿಂದ ಇಡೀ ಬಾಗೇಪಲ್ಲಿ ಪಟ್ಟಣ ಕೆಂಪಾಗಿತ್ತು.

"ಸ್ವಾರ್ಥಿಗಳನ್ನು ಸೋಲಿಸಿ"-ದೇವನೂರು ಮಹಾದೇವ

ರಾಜ್ಯದ ಸಂಪತ್ತನ್ನು ಲೂಟಿ ಮಾಡಿಕೊಂಡು ಸ್ವಾರ್ಥ ರಾಜಕಾರಣ ಮಾಡುತ್ತಿರುವವರನ್ನು ಸೋಲಿಸಿ, ಜನಪರ ಚಿಂತಕರು ಮತ್ತು ಹೋರಾಟಗಾರರನ್ನು ಚುನಾವಣೆಯಲ್ಲಿ ಆಯ್ಕೆ ಮಾಡಬೇಕು ಎಂದು ಸಾಹಿತಿ ದೇವನೂರು ಮಹಾದೇವ ಕರೆ ನೀಡಿದರು.



ಬಾಗೇಪಲ್ಲಿಯಲ್ಲಿ ಎಪ್ರಿಲ್ 29 ರಂದು ನಡೆದ ಸಿಪಿಎಂ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಜನರ ಹಣವನ್ನು ದುರ್ಬಳಕೆ ಮಾಡಿಕೊಂಡು ರಾಜಕಾರಣಿಗಳು ಶ್ರೀಮಂತರಾಗುತ್ತಿದ್ದಾರೆ ಎಂದು ವಿಷಾದಿಸಿದರು.

ಪ್ರಸಕ್ತ ಚುನಾವಣೆಯು ಹಲವು ಸವಾಲಿನಿಂದ ಕೂಡಿದ್ದು, ಪ್ರಜ್ಞಾವಂತ ಮತದಾರರು ಜನರ ಪರ ಕೆಲಸ ಮಾಡುವ ಹೋರಾಟಗಾರರನ್ನು ಆಯ್ಕೆ ಮಾಡಬೇಕು ಎಂದು ನುಡಿದರು.

'ಇಂದು ಗಾಳಿ, ನೀರು ಮತ್ತು ಆಹಾರ ಕಲುಷಿತಗೊಂಡಿರುವುದು ನಿಸರ್ಗದ ತಪ್ಪಿನಿಂದಲ್ಲ. ಇತ್ತೀಚಿನ ದಿನಗಳಲ್ಲಿ ಹೆಚ್ಚಿರುವ ಸ್ವಾರ್ಥ ರಾಜಕಾರಣಿಗಳಿಂದ ಮತ್ತು ದುರ್ಜನರಿಂದ ಅವೆಲ್ಲವೂ ಕಲುಷಿತಗೊಳ್ಳುತ್ತಿವೆ. ಸ್ವಾರ್ಥ ರಾಜಕಾರಣಿಗಳು ರೂಪಿಸುತ್ತಿರುವ ನೀತಿ ಮತ್ತು ನಿಯಮಗಳಿಂದ ಅವ್ಯವಸ್ಥೆ ನಿರ್ಮಾಣವಾಗಿದೆ' ಎಂದು ಅಭಿಪ್ರಾಯಪಟ್ಟರು.ಬಾಗೇಪಲ್ಲಿ ಕ್ಷೇತ್ರದಲ್ಲಿ ಜಿ.ವಿ. ಶ್ರೀರಾಮರೆಡ್ಡಿಯವರನ್ನು ಗೆಲ್ಲಿಸಿ ಪರ್ಯಾಯ ರಾಜಕಾರಣವನ್ನು ಬಲಪಡಿಸಬೇಕೆಂದು ಮನವಿ

ಆರ್ಯ-ದ್ರಾವಿಡ....

ಪುಟ 16 ರಿಂದ

ಸ್ವಲ್ಪ ಭಿನ್ನವಾದ ಕತೆ ಹೇಳುವಂತಿದೆ.

ಪಶುಪಾಲಕರು, ಅಲೆಮಾರಿಗಳೂ ಆಗಿದ್ದ ಆರ್ಯರಲ್ಲಿ ಇತಿಹಾಸದ ನಾನಾ ಘಟ್ಟಗಳಲ್ಲಿ ಕೃಷಿಯ ಬೆಳವಣಿಗೆ, ವ್ಯಾಪಾರ-ವಾಣಿಜ್ಯಗಳ ಬೆಳವಣಿಗೆ ಆದಂತೆ ಆರ್ಯ ಸಮುದಾಯದೊಳಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬಂತಹ ಶ್ರಮ ವಿಭಜನೆ (ಶ್ರಮದ ಹೇರಿಕೆ) ಯಾಗಿರುವುದು ಕಾಣುತ್ತದೆ. ಮೊದಮೊದಲ ವೇದಗಳ ಕಾಲದಲ್ಲಿ ವರ್ಣ ವ್ಯವಸ್ಥೆ ಉಲ್ಲಂಘಿಸಲಾರದ ಕಟ್ಟಳೆಯಾಗಿರಲಿಲ್ಲ ಎಂದೂ ತಿಳಿದು ಬರುತ್ತದೆ. ಮುಂದೆ ವರ್ಣಗಳೊಳಗೇ ಹಲವಾರು ಜಾತಿಗಳು ರೂಪುಗೊಂಡು ಜಾತಿಯು ಹುಟ್ಟಿನ ಆಧಾರದಿಂದ ಮಾತ್ರವೇ ಬರುವ ಕಟ್ಟಳೆಯಾಗಿದೆ. ಈ ಜಾತಿಯ ಕಟ್ಟಳೆ ಮುರಿದು 'ವರ್ಣ ಸಂಕರ'ಕ್ಕೆ ಕಾರಣರಾದವರನ್ನು ಮತ್ತು ಅವರ ಸಂತತಿಯನ್ನು ಅಸ್ಪೃಶ್ಯರನ್ನಾಗಿಸಿ ಊರಹೊರಗಿಟ್ಟಿರುವ ಸಾಧ್ಯತೆಗಳು ಕಾಣುತ್ತವೆ. ಅವರೇ ಪಂಚಮರು. ಆರ್ಯರು ಸೃಷ್ಟಿಸಿದ ಜಾತಿ ವ್ಯವಸ್ಥೆಯನ್ನು ಧಿಕ್ಕರಿಸಿ, ಶ್ರೇಣೀಕೃತ ಸಮಾಜದಿಂದ ದೂರಸರಿದು, ದಟ್ಟವಾದ ಅರಣ್ಯಪ್ರದೇಶಗಳಲ್ಲಿ ನೆಲೆಸಿ ತಮ್ಮ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಬಂದವರು ದ್ರಾವಿಡ ಆದಿವಾಸಿಗಳು.

ಇನ್ನು ಧಾರಾಳ ಗೋಮಾಂಸ ಭಕ್ಷಕರಾಗಿದ್ದ ವೈದಿಕ ಬ್ರಾಹಣರು ಬೌದ್ಧ, ಜೈನಧರ್ಮಗಳ ಬಂಡಾಯಗಳನ್ನು ಎದುರಿಸುವ ನಿಟ್ಟಿನಲ್ಲಿ ತಾವು ಮಾಂಸಾಹಾರವನ್ನೇ ತ್ಯಜಿಸಿ ಶ್ರೇಷ್ಠರೆಂದು ತೋರಿಸಿಕೊಂಡಂತೆ, ಆ ನಂತರದಲ್ಲಿ ಗೋವು ಬಹಳ ಪವಿತ್ರ ಎಂದು ಪ್ರತಿಪಾದಿಸಿದಂತೆ ಇತಿಹಾಸದಲ್ಲಿ ಕಾಣುತ್ತದೆ. ಈ ಬದಲಾವಣೆಯ ನಂತರ ದನದ ಮಾಂಸವನ್ನು ಆಹಾರವಾಗಿ ಬಳಸುವುದನ್ನು ಮುಂದುವರೆಸಿದ ಪಂಚಮರನ್ನು ಎಲ್ಲರಿಗಿಂತ ಕೀಳು ಎಂದು ಜರೆದು ಅವರನ್ನು ಬಹಿಷ್ಕೃತರೆಂದು ಹೊರಗಿಟ್ಟರೆಂಬಂತೆಯೂ ತೋರುತ್ತದೆ. ಒಂದೊಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಈ ಮೇಲಿನ ಒಂದೊಂದು ಅಂಶ ಪ್ರಧಾನ ಕಾರಣವಾಗಿದ್ದರಬಹುದು.

ಆರ್ಯರಲ್ಲಿ ಜೂಜಾಟ, ಸುರೆ ಕುಡಿಯುವ ಚಟ, ಪುರುಷ ಪ್ರಧಾನ ಮಹಿಳಾ ವಿರೋಧಿ ಮೌಲ್ಯಗಳು, ಅನೈತಿಕ ಎನ್ನಬಹುದಾದ ಮಟ್ಟದ ಮುಕ್ತ ಲೈಂಗಿಕ ಸಂಬಂಧಗಳು ಮತ್ತು ಆ ವಿಷಯವಾಗಿ ಕಾದಾಟಗಳು ಎಲ್ಲ ವ್ಯಾಪಕವಾಗಿದ್ದವು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಅದು ನಾಟಕದಲ್ಲಿ ಬಿಂಬಿತವಾಗಿದೆ. ಆದರೆ ಅದನ್ನು ಹೇಳುವ ಭರದಲ್ಲಿ ದ್ರಾವಿಡ ಸಂಸ್ಕೃತಿಯು ನೈತಿಕತೆಯ ಪರಿಪೂರ್ಣ ಸಾಕಾರ ರೂಪ ಎಂದು ಬಿಂಬಿಸುವುದು ವಾಸ್ತವವೇ ಎಂಬ ಪರಿಶೀಲನೆ ಬೇಕಾಗಿದೆ.

ಆದಿವಾಸಿ ಬುಡಕಟ್ಟುಗಳ ಗುಂಪು ಗುಂಪುಗಳ ನಡುವೆಯೇ ಕಾದಾಟಗಳು, ಒಂದು ಬುಡಕಟ್ಟು ಮತ್ತೊಂದು ಬುಡಕಟ್ಟು ಜನರನ್ನು ಕೊಲ್ಲುವುದು, ಇಲ್ಲವೇ ಗುಲಾಮರನ್ನಾಗಿಸಿಕೊಳ್ಳುವುದು ಎಲ್ಲವೂ ನಡೆದಿಲ್ಲವೆನ್ನಲಾದೀತೆ ?

ದಲಿತ ಮತ್ತು ಶೂದ್ರರ ಹೀನ ಅವಸ್ಥೆಗೆ ವೈದಿಕ ಪುರೋಹಿತಶಾಹಿಯೇ ಕಾರಣ ಎಂದು ಪ್ರತಿಪಾದಿಸುವ ಭರದಲ್ಲಿ ಅನ್ಯಾಯಯುತ ಸಾಮಾಜಿಕ ವ್ಯವಸ್ಥೆಯನ್ನು ರಕ್ಷಿಸಿ ಬಲಪಡಿಸಿಕೊಂಡು ಹೋಗುವ ಕ್ಷತ್ರಿಯ ಮತ್ತು ವೈಶ್ಯ ಸಮುದಾಯದ ಪಾತ್ರವನ್ನು ಮತ್ತು ಈ ಎಲ್ಲ ಶಕ್ತಿಗಳು ಒಗ್ಗೂಡಿ ನಿರ್ಮಾಣಗೊಳ್ಳುವ ಶೋಷಕ ಸಾಮಾಜಿಕ ವ್ಯವಸ್ಥೆಯನ್ನು ಇಲ್ಲಿ ಸಮರ್ಪಕವಾಗಿ ಗುರುತಿಸಿಲ್ಲ ಎನಿಸುತ್ತದೆ.

ಪುರೋಹಿತಶಾಹಿಯು ಸಂಪತ್ತನ್ನು ಕೆಲವರ ಕೈಯಲ್ಲಿ ಹಿಡಿದಿಡುವ ವಂಚಕ ಪಾಳೇಯಗಾರಿ ವ್ಯವಸ್ಥೆಯ ಮಿದುಳು. ಅದು ಶೋಷಣೆ ಅನ್ಯಾಯಕ್ಕೆ ತಾತ್ವಿಕ, ಸೈದ್ಧಾಂತಿಕ ರೂಪದ ಸಮರ್ಥನೆಗಳನ್ನು ಒದಗಿಸಿಕೊಡುತ್ತದೆ. ಕ್ಷತ್ರಿಯ ಶಕ್ತಿ ಈ ವ್ಯವಸ್ಥೆಯನ್ನು ಕ್ರೋಢೀಕರಿಸುವ, ರಕ್ಷಿಸಿಕೊಂಡು ಹೋಗುವ ತೋಳು. (ಶೂದ್ರ ಶ್ರಮ ಶಕ್ತಿಯ ಒಂದು ವಿಭಾಗವನ್ನು ಅದು ಸೈನ್ಯವಾಗಿ ಬಳಕೆ ಮಾಡಿಕೊಳ್ಳುತ್ತದೆ.) (ಕೃಷ್ಣನ ಬಾಯಿಂದ ಹೇಳಿಸಲಾದಂತೆ ಬ್ರಾಹ್ಮಣ ಬ್ರಹ್ಮನ ತಲೆಯಿಂದ ಕ್ಷತ್ರಿಯ ತೋಳಿನಿಂದ ಹುಟ್ಟಿದರಂತಲ್ಲ.!!) ಇವರಿಬ್ಬರೂ ಶೂದ್ರರ ಶ್ರಮದ ದರೋಡೆಯ ಫಲಾನುಭವಿಗಳು. ಜೊತೆಗೆ ವೈಶ್ಯನೂ ಈ ಆಳುವ ವರ್ಗದೊಂದಿಗೆ ಕೈಜೋಡಿಸಿದ್ದಾನೆ.

ಇಂದು ಭಾರತದಲ್ಲಿ ಇವರು ದ್ರಾವಿಡರು ಇವರು ಆರ್ಯರು ಎಂದು ಗುರುತಿಸುವುದು ಅಸಾಧ್ಯ ಎಂಬ ಮಟ್ಟಿಗೆ ಸಂಕರ ಹಿಂದೆ ಎಂದೋ ನಡೆದು ಹೋಗಿದೆ. ದ್ರಾವಿಡ ಮೂಲದ ಜನರ ನಡುವಿನಿಂದಲೂ ಪುರೋಹಿತಶಾಹಿಗೆ ಸೇರಿದವರಿರಬಹುದು. ಇಂತಹ ವಿಷಯದಲ್ಲಿ ಇತಿಹಾಸವನ್ನು ಅದು ಇದ್ದ ಹಾಗೆ ಒಪ್ಪಿಕೊಳ್ಳುವ ಮುಕ್ತ ಮನಸ್ಸು ಅಗತ್ಯ.

ಇಂದಿನ ದಲಿತರು ಎಂದರೆ ವೈದಿಕರು ಮೋಸದಿಂದ ಸೆರೆಹಿಡಿಯಲ್ಪಟ್ಟ ದ್ರಾವಿಡ ಕ್ಷತ್ರಿಯರು ಎನ್ನಲಾಗಿದೆ. ಪ್ರತಿಯೊಂದು ಸಮುದಾಯವು ಇಂದು ತಮಗೆ ಚರಿತ್ರೆಯಿಂದಲೋ ಪುರಾಣದೊಂದಲೋ ಒಂದು 'ಗೌರವಾರ್ಹ' ಅನ್ನಬಹುದಾದ ಮೂಲವೊಂದನ್ನು ಹುಡುಕಿಕೊಂಡು ತಮ್ಮ ಗತ ಇತಿಹಾಸದ ಕುರಿತು ಹುಸಿ ವೈಭವಿಕರಣ ಮಾಡಿಕೊಳ್ಳಬೇಕಾದ ಒತ್ತಡವನ್ನು ಮನುವಾದಿ ಪರಂಪರೆಯೇ ಸೃಷ್ಟಿ ಮಾಡಿದೆ.

ಗಾಂಧಿಯವರ ಪಾತ್ರ ನಿರೂಪಣೆಯ ಕುರಿತು ಇಲ್ಲಿ ಒಂದು ಮಾತು ಹೇಳುವುದು ಅಗತ್ಯ. ಗಾಂಧಿ ದಲಿತರನ್ನು 'ಹರಿಜನ' ಎಂದು ಕರೆದು ಅಸ್ಪೃಶ್ಯತೆ ನಿವಾರಣೆಗೆ ಕರೆ ನೀಡಿದರೂ ಕೂಡ ಅವರು ಹಿಂದೂ-ಅಂದರೆ ವೈದಿಕ ಧರ್ಮದ ಬೆನ್ನೆಲುಬಾದ ವರ್ಣ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದವರು ಎಂಬುದು ನಿಜ. ದಲಿತರಿಗೆ ಪ್ರತ್ಯೇಕ ಮೀಸಲು ಕ್ಷೇತ್ರದ ಬಾಬಾ ಸಾಹೇಬ್ ಅಂಬೇಡ್ಕರರ ಪ್ರಬಲ ಬೇಡಿಕೆಯನ್ನು ಒಪ್ಪದೇ ಅವರು ಅದನ್ನು ಕಟುವಾಗಿ ವಿರೋಧಿಸಿದರು ಎಂಬುದೂ ನಿಜ. ಸ್ವಾತಂತ್ರ್ಯ ಚಳುವಳಿಯ ಉದ್ದಕ್ಕೂ ಅವರು ದೇಶಿಯ ಬಂಡವಾಳಿಗರ ಮತ್ತು ಭೂಮಾಲಿಕರ ಪರ ವಹಿಸಿದರು. ಕಾರ್ಮಿಕರ ಮತ್ತು ರೈತರ ಕ್ರಾಂತಿಕಾರಿ ಚಳುವಳಿಗೆ ತಣ್ಣೀರೆರಚುವ ಕೆಲಸ ಮಾಡಿದರು ಎಂಬ ಟೀಕೆಗಳೂ ಅವರ ಮೇಲಿವೆ. ಇಷ್ಟಾಗಿಯೂ ಭಾರತದ ಸ್ವಾತಂತ್ರ ಚಳುವಳಿಗೆ, ಭಾರತದ ಕೋಮು ಸೌಹಾರ್ದತೆಗೆ ಅವರ ಕೊಡುಗೆ ದೊಡ್ಡದಿದೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ. ಕಳೆದು ಹೋಗುತ್ತಿರುವ ಮನುಸ್ಮೃತಿಯ ಮೇಲ್ಮೆಯನ್ನು ರಕ್ಷಿಸಲು ಅವತರಿಸಿದ ಮಧ್ಯವರ್ತಿ ಎಂಬಂತಹ ಇಲ್ಲಿನ ಗಾಂಧಿ ಪಾತ್ರ ನಿರೂಪಣೆ ತೀರಾ ಏಕಮುಖಿಯಾದ-ಸರಳೀಕೃತ ನಿರೂಪಣೆಯಲ್ಲವೇ ? ಇಲ್ಲಿ ವಿಷಯದ ಸಂಕೀರ್ಣತೆಯನ್ನು ಅರಿತು-ಕೊಂಡ ಆಳವಾದ ಚಿಂತನೆ, ವಿಷಯಗಳ ಬಹುಮುಖಿ ಪರಿಶೀಲನೆ ಅಗತ್ಯ ಅನಿಸುತ್ತದೆ



ಅಲ್ಲವೇ ?

ಬಾಬಾ ಸಾಹೇಬರು ಯಾವ ವಿಷಯವನ್ನೂ ಸರಳೀಕರಿಸಿ ನೋಡಿಲ್ಲ. ಗಹನವಾದ ಚಿಂತನೆಯಿಂದ ಹೊರ ಹೊಮ್ಮಿದ ಅವರ ವಿಚಾರ ಕಿರಣಗಳೇ ನಮಗೆ ಈ ವಿಷಯದಲ್ಲಿ ಮಾದರಿಯಾಗಬೇಕಿದೆ.

ಜಾತಿ ನೈಸರ್ಗಿಕವಲ್ಲ

ಜಾತಿ ನೈಸರ್ಗಿಕ ಅಲ್ಲ. ಮನುಷ್ಯನ ರಕ್ತದಲ್ಲಿ ಜಾತಿ ಇಲ್ಲ. ಅನ್ಯಾಯ ವಂಚನೆ ಎಸಗಲು ಅದನ್ನು ಸೃಷ್ಟಿಸಿರುವುದು ಮನುಷ್ಯ ಸಮಾಜದ ಪಟ್ಟಭದ್ರರು. ಕಷ್ಟವೇ ಆದರೂ ಕೂಡ ಜಾತಿ ವ್ಯವಸ್ಥೆಯನ್ನು ಒಂದಲ್ಲ ಒಂದು ದಿನ ನಾಶ ಮಾಡಲು ಸಾಧ್ಯ ಮತ್ತು ನಾಶ ಮಾಡಬೇಕು. ದಲಿತರು ಶಿಕ್ಷಣ-ಉದ್ಯೋಗ ಪಡೆದು ಆರ್ಥಿಕ ಸ್ವಾವಲಂಬನೆ, ಸ್ವಾಭಿಮಾನದ ಬದುಕು ರೂಪಿಸಿಕೊಳ್ಳಬೇಕು. ಭೂ ಸಂಪತ್ತು ಸೇರಿದಂತೆ ದೇಶದ ಸಮಸ್ತ ಸಂಪತ್ತು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಆರ್ಥಿಕ ಸಮಾನತೆ ಸಾಧಿಸಿದಾಕ್ಷಣ ಸಾಮಾಜಿಕ ತಾರತಮ್ಯ, ಜಾತಿವಾದ ಹೋಗಿಬಿಡುವುದಿಲ್ಲ. ಸಾಮಾಜಿಕ ಸಮಾನತೆಗಾಗಿ ಪ್ರಗತಿವಿರೋಧಿ ಮೌಲ್ಯಗಳ ವಿರುದ್ಧ ಸಮಾಜ ಸುದೀರ್ಘ ಸಮರ ಸಾರಬೇಕಾಗುತ್ತದೆ. ಈ ಸಂಘರ್ಷವನ್ನು ಕೇವಲ ದಲಿತರು ಮಾತ್ರವೇ ಮಾಡಿದರೆ ಸಾಲದು. ಸಮಾನತೆ, ಮಾನವೀಯತೆಯ ಪರ ಇರುವ ಎಲ್ಲರನ್ನು ಇದರಲ್ಲಿ ಸೇರಿಸಿಕೊಳ್ಳಬೇಕು. ಇದು ಎಲ್ಲ ಮಾನವತಾವಾದಿಗಳ ದೃಢವಾದ ನಂಬಿಕೆ ಮತ್ತು ಧೋರಣೆಯಾಗಿರಬೇಕು.

ಜಾತಿವಾದಿ ಶಕ್ತಿಗಳು ಕರ್ಮಠರು, ಪಾಳೇಯಗಾರಿ ಶಕ್ತಿಗಳು, ಪುರೋಹಿತಶಾಹಿಗಳು ತಮ್ಮ ಜಾತಿ ತಾರತಮ್ಯದ ಧೋರಣೆಗಳನ್ನು ಸಮರ್ಥಿಸಿಕೊಳ್ಳಲು ದಲಿತರ ಮೇಲೆ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಾರೆ. ...ಎಂದೂ 'ಉತ್ತಮ' ಸಂಸ್ಕಾರವನ್ನು ಕಲಿಯಲಾರದವರು...., ಸ್ವಚ್ಛ ಭಾಷಾ ಉಚ್ಚಾರಣೆ ಎಂದಿಗೂ ಬಾರದವರು... ಅರ್ಹತೆಗಿಂತ ಎಷ್ಟೋ ದೊಡ್ಡ ಪಾಲ ಸೌಕರ್ಯಗಳನ್ನು ಪಡೆದುಕೊಳ್ಳುವವವರು...., ಎಷ್ಟೋ ಸರ್ಕಾರಿ ಸೌಲಭ್ಯಗಳನ್ನು ಕಬಳಿಸಿದರೂ ಹೊಣೆಗಾರಿಕೆ ಇಲ್ಲದವರು...., ಎಂದೆಲ್ಲಾ ನಿಂದಿಸುತ್ತಾರೆ. ಇದು ಜಾತಿವಾದಿಗಳ ಮನಸ್ಸಿನಲ್ಲಿ ಕೊಳೆಬಿದ್ದು ಮಲೆತು ನಾರುವ ಕೊಳಕುತನವನ್ನಷ್ಟೆ ತೋರಿಸುತ್ತದೆ.

ಹಾಗೆಯೇ ಇಲ್ಲಿ ದಲಿತರು ಶೂದ್ರರು ಎಚ್ಚರ ವಹಿಸಬೇಕಾದ ಮತ್ತು ಪ್ರಬುದ್ಧತೆ ತೋರಬೇಕಾದ ಒಂದು ಅಂಶ ಇದೆ. ಕರ್ಮಠ ಬ್ರಾಹ್ಮಣ್ಯದ ಮನಸ್ಥಿತಿ ಖಂಡಿತ ಉಚ್ಚ-ನೀಚ ಎಂಬ ಬೇಧ-ಭಾವ ತೋರುತ್ತಿರುತ್ತದೆ. ಆದರೆ ಪ್ರಜ್ಞಾಪೂರ್ವಕವಾಗಿ ಮಾನವೀಯ ಮೌಲ್ಯಗಳನ್ನು ಒಪ್ಪಿಕೊಂಡ ವಿವೇಕವಂತ ಬ್ರಾಹ್ಮಣ ಸಮುದಾಯದ ವ್ಯಕ್ತಿಯೊಬ್ಬ ತನ್ನ ಮನಸ್ಸಿನ ಕೊಳಕುತನಗಳ ತೊಳೆದುಕೊಂಡು ಸ್ವಚ್ಛ ಮನುಷ್ಯನಾಗಲು ಸಾಧ್ಯವಿದೆ. ಅದು ಸಾಧ್ಯವೇ ಇಲ್ಲ ಎಂದು ಯಾರಾದರೂ ವಾದಿಸಿದರೆ ಅದರ ಅರ್ಥ ಜಾತಿಯು ನಿಸರ್ಗ ಸಹಜ ವಿಭಜನೆ ಎಂದಾಗುತ್ತದೆ. ಈ ತಿಳುವಳಿಕೆ ಸರಿ ಎನ್ನುವುದಾದರೆ, ಜಾತಿ ಜಾತಿಗಳಿಗೂ ರಕ್ತಗತವಾಗಿ ಬರುವ ನಿರ್ದಿಷ್ಟ ಗುಣಗಳಿವೆ... ಅದನ್ನು ಬದಲಿಸಲಾಗದು, ಬದಲಿಸಿಕೊಳ್ಳಲಾಗದು ಎಂದಾಗುತ್ತದೆ. ಅಲ್ಲಿಗೆ ಜಾತಿ ನಿಸರ್ಗ ಸಹಜ ವಿಭಜನೆ ಎಂದು ನಾವೇ ವಾದಿಸಿದಂತಾಗುತ್ತದೆ. ವೇದಗಳನ್ನು ಖಂಡ ತುಂಡವಾಗಿ ತಿರಸ್ಕರಿಸಿದ ವಚನ ಚಳುವಳಿಯ ಒಬ್ಬ ಮುಂಚೂಣಿ ನಾಯಕ ಬಸವಣ್ಣ ಹುಟ್ಟಿನ ಮೂಲದಿಂದ ಒಬ್ಬ ಬ್ರಾಹ್ಮಣ ಎಂಬುದನ್ನು ಮರೆಯಬಾರದು. ಹಾಗೆಯೇ ಆಧುನಿಕ ಭಾರತದ ಚರಿತ್ರೆಯಲ್ಲೂ ದಲಿತ ಶಿಕ್ಷಣಕ್ಕೆ ಶ್ರಮಿಸಿದ ಎಷ್ಟೋ ಜನ ಹೃಯವಂತರು ದಲಿತೇತರ ಸಮುದಯಗಳಲ್ಲಿ ಸಿಗುತ್ತಾರೆ.

ಹೆತ್ತವಳಿಗೆ ಮಾತ್ರ ಹೆರಿಗೆ ನೋವು ಅರ್ಥವಾಗಲು ಸಾಧ್ಯ. ದಲಿತರ ನೋವು ಸಂಕಟಗಳನ್ನು ಅದನ್ನು ಅನುಭವಿಸದವರು ಪ್ರತಿನಿಧಿಸಿ ಸರಿಯಾಗಿ ಅಭಿವ್ಯಕ್ತಿಗೊಳಿಸುವುದು ಕಷ್ಟ ಎಂದರೆ ಒಪ್ಪಬೇಕಾದ ಮಾತು. ದಲಿತರಲ್ಲದವರು ದಲಿತರ ನೋವುಗಳನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ, ಈ ನೋವು ಅದರ ತೀವ್ರತೆಯೊಂದಿಗೆ ಇತರರ ಮನಸ್ಸಿಗೆ ಇಳಿಯುವುದು ಸುಲಭವಲ್ಲ ಎಂದರೂ ಒಪ್ಪಬಹುದು. ಆದರೆ ದಲಿತರ ನೋವು ಬೇರೆಯವರಿಗೆ ಏನು ಮಾಡಿದರೂ ಅರ್ಥವೇ ಆಗುವುದಿಲ್ಲ ಎಂದರೆ ಅದು ಖಂಡಿತ ಅನಾರೋಗ್ಯಕರ ಧೋರಣೆ-ಯಾಗುತ್ತದೆ. ಜಾತಿವಾದವೇ ಆಗುತ್ತದೆ. ಈ ಮಾತು ಪ್ರಸ್ತುತ ನಾಟಕಕ್ಕೆ ಸಂಬಂಧಿಸಿ ಹೇಳುತ್ತಿರುವುದಲ್ಲ. ಪ್ರಸ್ತುತ ನಮ್ಮ ಸಮಾಜದ ಒಟ್ಟು ಧೋರಣೆಗಳನ್ನು ಗಮನದಲ್ಲಿರಿಸಿಕೊಂಡು

➡

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಂಪ್ಲಿ : "ದುಡಿವ ಜನರ ಹೋರಾಟ ಬಲಪಡಿಸಿ"

ಜನಹಿತ ಮರೆತು ಲೂಟಿಯನ್ನೆ ದಂಧೆಯಾಗಿಸಿಕೊಂಡಿರುವ ಕಾಂಗ್ರೆಸ್, ಬಿಜೆಪಿ, ಕೆಜೆಪಿ ಮತ್ತು ಬಿಎಸ್ಆರ್ ಪಕ್ಷಗಳನ್ನು ಮತದಾರರು ತಿರಸ್ಕರಿಸಬೇಕು ಎಂದು ಸಿಪಿಐ(ಎಂ) ರಾಷ್ಟ್ರೀಯ ಮುಖಂಡ ಹಾಗೂ ಪೊಲೀಟ್ ಬ್ಯೂರೋ ಸದಸ್ಯ ಬಿ.ವಿ. ರಾಘವಲು ತಿಳಿಸಿದರು.

ಪಟ್ಟಣದ ಬಾದಹನಟ್ಟಿ ರಸ್ತೆಯಲ್ಲಿ ಸ್ಥಳಿಯ ಸಿಪಿಐ(ಎಂ) ಘಟಕ ಅಯೋಜಿಸಿದ್ದ ಕಂಪ್ಲಿ ವಿಧಾನ ಸಭಾ ಕ್ಷೇತ್ರದ ಚುನಾವಣೆ ಪ್ರಚಾರ ಸಭೆಯಲ್ಲಿ ಗುರುವಾರ ಮಾತನಾಡಿದರು.

ಈ ಭಾಗದಲ್ಲಿ ಜನರ ಸಮಸ್ಯೆ ಪರಿಹಾರಕ್ಕೆ ನಿರಂತರ ಹೋರಾಡುತ್ತಿರುವ ಸಿಪಿಐ(ಎಂ) ಮತ ನೀಡಿದರೆ, ಹೋರಾಟದ ಶಕ್ತಿಗೆ ಇನ್ನಷ್ಟು ಶಕ್ತಿ ಬರುತ್ತದೆ. ಲೂಟಿಕೋರರಿಗೆ ಮತ ನೀಡಿದರೆ ರಾಜ್ಯದಲ್ಲಿ ಇನ್ನಷ್ಟು ಲೂಟಿಯಾಗಿ, ಬಡವರ ಗೋಳು ಗಂಭಿರ ಗೊಳ್ಳುತ್ತದೆ. ಎಂದರು.

ನಂತರ ಕೇಂದ್ರ ಹಾಗು ರಾಜ್ಯ ಸರಕಾರದ ಆರ್ಥಿಕ ನೀತಿಗಳ ಮೇಲೆ ಚಾಟಿ ಬೀಸಿದ ಅವರು,

ಸಂಸತ್ತಿನಲ್ಲಿ ಸಿಪಿಐ(ಎಂ) ಸದಸ್ಯರು ವೃದ್ಧರಿಗೆ, ದೇವದಾಸಿ ಮಹಿಳೆಯರಿಗೆ ನೀಡುವ ಮಾಶಾಸನ 1000ರೂ. ಏರಿಸಿ ಎಂದು ಕೇಳಿದರೆ. ಕೇಂದ್ರ ಸರಕಾರ ಅಗತ್ಯ ವಸ್ತುಗಳ ಬೆಲೆ ಏರಿಸಿ ಜನರನ್ನು ಭಿಕ್ಷುಕರನ್ನಾಗಿಸಿದೆ. ಇದೂ ಹೋಗಲಿ ಅಗ್ಗದರದಲ್ಲಿ ಪಡಿತರ ನೀಡಿ ಎಂದರೆ ಪಡಿತರ ಚೀಟಿಗೆ ಹಣ


ಕಂಪ್ಲಿ ಸಭೆಯಲ್ಲಿ ಬಿ.ವಿ. ರಾಘವುಲು ಮಾತನಾಡುತ್ತಿರುವುದು

ನೀಡುವ ಮತ್ತೊಂದು ಕುತಂತ್ರಕ್ಕೆ ನಡೆಸಿದೆ. ಈಗಾಗಲೆ ಮಾಶಾಸನ ಅದೇಶ ಪಡೆದ ಅನೇಕ ಬಡವರು ಇದುರವರೆಗೂ ಮಾಸಾನ ಕಂಡಿಲ್ಲ ಹಾಗೇಯೇ ಹಸಿವೆ ಎಂದು ಅತ್ತರೆ ಅನ್ನ ನೀಡದೆ ಸಾಯಿಸುವುದು ಕೇಂದ್ರ ಸರಕಾರದ ಕುತಂತ್ರವಾಗಿದೆ. ಇಷ್ಟೆಲ್ಲ ಆದರೂ ವಿರೋಧಿ ಪಕ್ಷವಾಗಿ ಆಡಳಿತ ನಡೆಸುತ್ತಿದ್ದ ರಾಜ್ಯ ಬಿಜೆಪಿ ಸರಕಾರ ಈ ಬಗ್ಗೆ ಧ್ವನಿ ಎತ್ತದೆ ಲೂಟಿಯಲ್ಲಿ ಪಾಲುಗಾರಿಕೆಗೆ ಹಾತೊರೆದು, ತಮ್ಮ ತಮ್ಮಲ್ಲೆ ಜಗಳ ಕಾದು ಬಿಎಸ್ಆರ್. ಕೆಜೆಪಿ ಬಿಜೆಪಿ ಎಂದು ಹೋಳಾಗಿದೆ. ಇಂಥಹ ರಾಜಕೀಯ ಪಕ್ಷಗಳಿಂದ ಜನ ಹಿತ ಬಯಸುವುದು ಸಾಧ್ಯವೆ ಎಂದು ಪ್ರಶ್ನಿಸಿದರು. ಜನ ಬಡವರಾದಷ್ಟು ಇವರಿಗೆ ಖುಷಿ. ಬಡಜನಕ್ಕೆ ಹಣ ಬೇಕು, ಅದನ್ನು ಚುನಾವಣೆಯಲ್ಲಿ ನೀಡಿ, ಮತ ಪಡೆದು, ಪುನಃ ಲೂಟಿಗೆ ಮುಂದಾಗಲು ಜಿದ್ದಾಜಿದ್ದಿ ನಡೆಸಿವೆ ಎಂದರು.

ನಂತರ ರಾಜ್ಯ ಸಮಿತಿ ಸದಸ್ಯರ ಎಸ್. ಪ್ರಸನ್ನ ಕುಮಾರ್ ಮಾತನಾಡಿ, ಲೂಟಿಗೆ ಮತ್ತೊಂದು ಹೆಸರೇ ಬಿಎಸ್ಆರ್. ಸದಾ ಹೆಲಿಕ್ಯಾಪ್ಟರ್ ಮೂಲಕ ಆಕಾಶದಲ್ಲಿ ಸಂಚರಿಸುವ ಜನಕ್ಕೆ ಬೀದಿಜನರ ಬದುಕು ಅರ್ಥವಾಗುವುದಾದರೂ ಹೇಗೆ ಎಂದು ವ್ಯಂಗವಾಡಿದರು.

ಬಳ್ಳಾರಿಯಲ್ಲಿ ಕೆಲ ದಿನದ ವರೆಗೆ ಪ್ರಜಾಪ್ರಭುತ್ವ ಕಾಣೆಯಾಗಿತ್ತು. ಸಿಪಿಐ(ಎಂ) ಮುಖಂಡರು ಜನರ ಸಮಸ್ಯೆ ಹಿಡಿದು ಬೀದಿಗಿಳಿದರೆ ತಾವೇ ಸಾಕಿಕೊಂಡಿದ್ದ ಪೊಲೀಸರ ಮೂಲಕ ಹೋರಾಟದ ಮುಖಂಡರನ್ನು ಬಂಧಿಸುವ ಇಲ್ಲವೆ ಇಲ್ಲಸಲ್ಲದ ಕೇಸು ದಾಖಲಿಸಿ ಕಿರುಕುಳ ನೀಡಿದ ಇವರು ತಮ್ಮ ಪ್ರಭುತ್ವ ಸ್ಥಾಪಿಸಲು ಮುಂದಾಗಿದ್ದರು. ಇವರಿಗೆ ರೈತ, ಕಾರ್ಮಿಕ ದುಡಿವ ಜನರನ್ನು ಶೋಷಿಸುವ ಶಕ್ತಿ ಇದೆ-ಯೇ ಹೊರತು ಅವರ ಸಮಸ್ಯೆಗೆ ಪರಿಹಾರ ಹುಡುಕುವ ಶಕ್ತಿ ಇಲ್ಲ. ಮತದಾರರಿಗೆ ನಾನಾ ಆಮಿಷ ಒಡ್ಡಿ ಸರಕಾರದ ಖಜಾನೆ ಲೂಟಿ ಮಾಡುವ ಶಕ್ತಿ ಬೇಕಾದಷ್ಟಿದೆ. ರಾಜ್ಯದಲ್ಲಿ ಅರಾಜಕೆ ಸೃಷ್ಟಿಸುವ ಶಕ್ತಿ ಇದೆ.

ಸಿಪಿಐ(ಎಂ) ಮಾತ್ರ ಜನರ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ಮಾಡುವ ಶಕ್ತಿ ಹೊಂದಿದೆ. ಇದು ನಿಮಗೆ ಗೊತ್ತಿರುವ ವಿಷಯ, ಇಲ್ಲಿನ ಬಡುಕಟ್ಟು ಜನರಿಗೆ ನಿವೇಶನಕ್ಕಾಗಿ, ರೈತರ ಜಮೀನಿಗೆ ನೀರಿಗಾಗಿ, ಕೃಷಿ ಕೂಲಿಕಾರರಿಗೆ ಕನಿಷ್ಟ ವೇತನಕ್ಕಾಗಿ, ದೇವದಾಸಿ ಮಹಿಳೆಯರಿಗೆ ಮಾಶಾಸನಕ್ಕಾಗಿ ಹೋರಾಟ ಮಾಡಿದ್ದು ಲೂಟಿ ಕೋರ ಪಕ್ಷಗಳಲ್ಲ. ನಿಮ್ಮ ಪಕ್ಷ, ಕೆಂಪು ಬಾವುಟದ ಪಕ್ಷ, ಇದನ್ನು ಹಿಡಿದು ಸಾದಾ ನಿಮ್ಮೊಂದಿಗಿರುವ ವಿಎಸ್. ಶಿವಶಂಕರ್ ಎಂಬದು ನಿಮಗೂ ಗೊತ್ತಿದೆ. ಜನರಿಗೋಸ್ಕರ ಎಂತಹ ತ್ಯಾಗಕ್ಕೂ ಸಿಪಿಐ(ಎಂ) ಕಾಯಕರ್ತರು ಸಿದ್ದರಿದ್ದಾರೆ. ತ್ಯಾಗಕ್ಕೆ, ನಿಮ್ಮ ಹೋರಾಟಕ್ಕೆ ನೀವು ಮತ ನೀಡುವುದಾದರೆ ವಿಎಸ್. ಶಿವಶಂಕರ್ ಅವರಿಗೆ ಮತ ನೀಡಿ. ನಿಮ್ಮ ಹೋರಾಟದ ಕೂಗು ವಿಧಾನ ಸಭೆಯಲ್ಲು ಪ್ರತಿಧ್ವನಿಗೊಳ್ಳಲಿ ಎಂದರು.

ಜಿಲ್ಲಾ ಸಮಿತಿ ಮುಖಂಡ ಕೆ. ಗಾದಿಲಿಂಗಪ್ಪ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾ ಘಟಕದ ಕಾರ್ಯದರ್ಶಿ ಆರ್ಎಸ್. ಬಸವರಾಜ್, ಮುಖಂಡರಾದ ಎಚ್ಎಮ್ವಿ .ಸ್ವಾಮಿ, ಎಸ್‌ಪಿ. ಮಹ್ಮದ್ಖಾನ್. ಪಿ. ಜಗನ್ನಾಥ್, ಇಆರ್. ಯಲ್ಲಪ್ಪ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕೋಟೇಶ್ವರ ರಾವ್, ಸಮಾಜ ಚಿಂತಕ ಟಿಜಿ. ವಿಠಲ್, ಜನವಾದಿ ಮಹಿಳಾ ಸಂಘದ ಅಧ್ಯಕ್ಷೆ ಚಂದ್ರಕಲಾ, ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಯರ್ರೆಮ್ಮ, ಎಸ್.ಬಾಬು ಮತ್ತಿತರರು ಇದ್ದರು.

– ಪಿಆರ್.ವೆಂಕಟೇಶ್

ಹೇಳುತ್ತಿರುವ ಮಾತು. ದಲಿತ ಸಮುದಾಯದಲ್ಲಿ, ದಲಿತ ಜನವಿಭಾಗಗಳಲ್ಲಿ ಏನಾದರೂ ಇಂತಹ ಸಂಕುಚಿತ ಮನೋಭಾವ ಹೆಚ್ಚುತ್ತಿದ್ದರೆ ಅದಕ್ಕೆ ದಲಿತೇತರ ಸಮುದಾಯದ ಹೊಣೆಗಾರಿಕೆ ಎಷ್ಟು ಎಂದು ಕೂಡ ನಾವು ಯೋಚಿಸಬೇಕಿದೆ.

ಮತ್ತೆ ನಾಟಕದ ವಿಷಯಕ್ಕೆ ಬರುವುದಾದರೆ....ಲಿಂಗಾಯತ, ಒಕ್ಕಲಿಗ, ಕುರುಬ, ಕುಂಬಾರ, ದಲಿತ ಇತ್ಯಾದಿ ಸಮುದಾಯಗಳ ಒಟ್ಟಾರೆ ಶೂದ್ರ ಸಮುದಾಯದ ಐಕ್ಯತೆಯ ಪ್ರತಿಪಾದನೆಯ ಮೂಲಕ ಇಲ್ಲಿ 'ಬಹುಜನ' ಸಿದ್ಧಾಂತವನ್ನು ಪ್ರತಿಪಾದಿಸಲಾಗಿದೆ. ರಾಜಕೀಯ ಅಧಿಕಾರ ಹಿಡಿಯುವ ತಂತ್ರಗಾರಿಕೆಯನ್ನು ಪಕ್ಕಕ್ಕಿಟ್ಟು ನೋಡಿದರೆ ಇಲ್ಲಿ ಎದುರಾಗುವ ಪ್ರಶ್ನೆ ಏನು ? ಭೂಮಿ ಇಲ್ಲದವರಿಗೆ ಭೂಮಿ ಹಂಚುವ ಭೂಸುಧಾರಣೆ ಇಂದಿಗೂ ಕೋಟ್ಯಾನುಕೋಟಿ ದಲಿತರ ಬದುಕಿನ ಚಿತ್ರವನ್ನು ಬದಲಿಸಿ ಅವರನ್ನು ಪರಾವಲಂಬನೆಯ ದೀನಸ್ಥಿತಿಯಿಂದ ಹೊರ ತಂದು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲು ಒಂದು ಇರುವ ದೊಡ್ಡ ಆಧಾರ. ಆದರೆ ದಲಿತರ ನಡುವೆ, ದಲಿತ ಚಳುವಳಿಯಲ್ಲಿ ಕೂಡ ಇಂದು ಭೂ ಸುಧಾರಣೆಯ ವಿಷಯ ಹಿನ್ನೆಲೆಗೆ ಸರಿದಿದೆ. ಭಾರತ ದೇಶದ ಸುಮಾರು ಮೂವತ್ತು ಕೋಟಿ ಭೂಮಿ ಇಲ್ಲದ ಕೃಷಿಕೂಲಿಕಾರರಲ್ಲಿ ದಲಿತರದ್ದೇ ಬಹುಸಂಖ್ಯೆ. ಕೇವಲ ಶಿಕ್ಷಣದ ಬಗೆಗಿನ ಜಾಗೃತಿ, ಈ ದಲಿತ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ತಂದು ಸೇರಿಸುವಂತೆ ಮಾಡಲಾರದು. ಬೇರೆ ಬೇರೆ ರೂಪ ಪಡೆದುಕೊಂಡು ಮುಂದುವರಿಯುತ್ತಿರುವ ಜೀತ ಪದ್ಧತಿ ಮತ್ತು ಬಾಲ ಕಾರ್ಮಿಕ ಪದ್ಧತಿಯನ್ನು ಅಳಿಸಲಾರದು. ಭೂಹೀನರಿಗೆ ಭೂಮಿ ಬೇಕು. ಭೂ ಸಂಪತ್ತು ಕೂಡ ಬ್ರಾಹ್ಮಣರಲ್ಲಿಯೇ ಹೆಚ್ಚು ಕೇಂದ್ರೀಕರಣವಾಗಿದ್ದ ಕಾಲವೊಂದಿತ್ತು. ಇಂದು ಅಂತಹ ಪರಿಸ್ಥಿತಿ ಸಾಕಷ್ಟು ಬದಲಾಗಿದೆ. ಲಿಂಗಾಯತ, ಒಕ್ಕಲಿಗ, ಮುಂತಾದ ಸಮುದಾಯದ ಎಲ್ಲರೂ ಭೂ ಮಾಲಿಕರಲ್ಲದಿದ್ದರೂ ಭೂಮಿತಿ ಕಾನೂನನ್ನೂ ಮೀರಿ ಎಷ್ಟೋ ದೊಡ್ಡ ಪ್ರಮಾಣದ ಭೂಮಿ ಈ ಸಮುದಾಯಕ್ಕೆ ಸೇರಿದ ದೊಡ್ಡ ಭೂಮಾಲಕರ ಕೈವಶದಲ್ಲಿದೆ. ದಲಿತ ಚಳುವಳಿ, ಜನ ಚಳುವಳಿಗಳು ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವುದೇ ಬೇಡವೆಂದು ಕೈ ಬಿಡಲು ಸಾಧ್ಯವೇ ? ಸರ್ಕಾರಿ ಭೂಮಿಯನ್ನು ಮಾತ್ರವೇ ಹಂಚಿಕೆ ಮಾಡುವ ಸೀಮಿತ ಭೂಸುಧಾರಣೆ ಸಾಕೆ ? ಇಂದು ಗ್ರಾಮೀಣ ಭಾರತದಲ್ಲಿ ಅಸ್ಪೃಶ್ಯತೆ, ಜಾತಿಪದ್ಧತಿಯನ್ನು ಪೋಷಿಸಿಕೊಂಡು, ರಕ್ಷಿಸಿಕೊಂಡು ಹೋಗುತ್ತಿರುವವರು ಯಾರು. ಈ ಅನ್ಯಾಯವನ್ನು ಪ್ರತಿಭಟಿಸಿದ ದಲಿತರ ಮೇಲೆ ಎರಗಿ ಹಲ್ಲೆ ಮಾಡುತ್ತಿರುವವರು ಯಾರು ? ಲಿಂಗಾಯತ, ಒಕ್ಕಲಿಗ, ಕುರುಬ, ವಾಲ್ಮೀಕಿ ಮುಂತಾದ ಸಮುದಾಯಗಳ ಶ್ರೀಮಂತ ಭೂಮಾಲಕರಲ್ಲವೇ ?

ಪ್ರಜಾಪ್ರಭುತ್ವ ವಿರೋಧಿ ಪಾಳೆಗಾರಿ ದರ್ಪ, ದಬ್ಬಾಳಿಕೆ ಮೆರೆಯುತ್ತಿರುವ ಈ ಭೂಮಾಲಿಕ ವರ್ಗದ ಕೈಯಲ್ಲಿ ಕೇಂದ್ರೀಕರಣಗೊಂಡಿರುವ ಹೆಚ್ಚುವರಿ ಭೂಮಿಯನ್ನು ಭೂಮಿ ಇಲ್ಲದ ದಲಿತರು, ಭೂಮಿ ಇಲ್ಲದ ಬಡ ಶೂದ್ರರಿಗೆ ಹಂಚಿಕೊಡದೇ ಈ ಜಾತಿ ವ್ಯವಸ್ಥೆಯ ರಕ್ಷಕರ ಸೊಕ್ಕು ಅಡಗಿಸುವುದು ಹೇಗೆ ? ದಲಿತರು ಓದಿ ವಿದ್ಯಾವಂತರಾಗಿ ನಗರ ಸೇರಿದ್ದರೂ, ಸರ್ಕಾರಿ ನೌಕರರು, ಅಧಿಕಾರಿಗಳೇ ಆಗಿದ್ದರೂ ತಮ್ಮ ಸ್ವಂತದ ಹಳ್ಳಿಗಳಿಗೆ ಬಂದಾಗ ಅವರು 'ದೊಡ್ಡ'ಜಾತಿಯ ಜನಗಳಿಗೆ ತಗ್ಗಿ ಬಗ್ಗಿ ನಡೆಯುವಂತೆ ಮಾಡುತ್ತಿರುವ ಕ್ರೂರ ವ್ಯವಸ್ಥೆಯ ಹಿಂದಿನ ಶಕ್ತಿ ಯಾವುದು ?

ಅಸ್ಪೃಶ್ಯತೆ-ಅಪಮಾನಗಳನ್ನು ಮೌನವಾಗಿ ಒಪ್ಪಿಕೊಂಡು ಸಾಗುತ್ತಿರುವ ಗ್ರಾಮೀಣ ಭಾರತದ ಕೋಟಿ ಕೋಟಿ ಜನ ದಲಿತರ ಬದುಕಿನ ಸ್ವಾಭಿಮಾನದ ಪ್ರಶ್ನೆಗೂ ಭೂಮಿ ಅಥವಾ ಸ್ವಾವಲಂಬಿ ಬದುಕಿಗೆ ಅಗತ್ಯವಾದ ಸಂಪತ್ತು ಇಲ್ಲದಿರುವುದಕ್ಕೂ ನೇರವಾದ ಸಂಬಂಧ ಇಲ್ಲವೇ ? ಈ ಜ್ವಲಂತ ಪ್ರಶ್ನೆ ಇತ್ಯರ್ಥವಾಗುವುದು ಯಾವಾಗ ? ಹೇಗೆ ? ಎಂಬ ಪ್ರಶ್ನೆಯನ್ನು ನಾವೆಲ್ಲ ಕೇಳಿಕೊಳ್ಳಬೇಕಿದೆ. ?

ಬುದ್ಧ ದೇವರ ಬಗೆಗೆ ಏನನ್ನೂ ಹೇಳಲಿಲ್ಲ ಎಂಬುದನ್ನೂ ಈ ಆಧುನಿಕ ಕಾಲದಲ್ಲಾದರೂ ನಾವು ಗಮನಿಸಬೇಕಿದೆ.

ಅಸ್ಪೃಶ್ಯತೆಯ ನರಕದಲ್ಲಿ ನರಳುತ್ತಾ ಬಿದ್ದಿರುವ ಕೋಟಿ ಕೋಟಿ ದಲಿತರ ಬದುಕನ್ನು ಬದಲಿಸಲು ಈಗ ಬೇಕಾದದ್ದು ಸಂವಿಧಾನ ಬದ್ಧ ಮೌಲ್ಯಗಳಾದ ಪ್ರಜಾಪ್ರಭುತ್ವ, ಸಮಾನತೆ, ಜಾತ್ಯತೀತತೆಯೇ ಅಥವಾ ಬುದ್ಧ ದಮ್ಮವೇ ಎಂದು ಚಿಂತಿಸಬೇಕಾದ ಅಗತ್ಯವಿದೆ.

ಮಹಾರಾಷ್ಟ್ರದಲ್ಲಿ ಆಧುನಿಕ ಭಾರತದಲ್ಲಿ ಬೌದ್ಧ ಧರ್ಮಕ್ಕೆ ಹೊರಳಿದ ದಲಿತರ ಬದುಕು ಹೇಗಿದೆ ಎಂದು ಕೆಲವು ಅಧ್ಯಯನ ನಡೆದಿವೆ. ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಹುಟ್ಟಿದ ವಚನ ಚಳುವಳಿ ಒಂದು ಕಡೆ ಮೇಲು ಕೀಳು ಎನ್ನುವ ಜಾತಿ ವ್ಯವಸ್ಥೆಯಲ್ಲಿ ಮತ್ತೊಂದು ಜಾತಿಯಾಗಿ ಸೇರ್ಪಡೆಯಾಗಿದೆ. ಮತ್ತೊಂದು ಕಡೆಯಿಂದ ನೋಡಿದರೆ ಲಿಂಗಾಯತ ಗಾಣಿಗ, ಲಿಂಗಾಯತ ಬಣಜಿಗ, ಲಿಂಗಾಯತ ಹಡಪದ ಇತ್ಯಾದಿ ಜಾತಿ ಶ್ರೇಣೀಕರಣವನ್ನು ಒಡಲಲ್ಲಿ ಹೊತ್ತುಕೊಂಡ 'ಹಿಂದೂ ಧರ್ಮ'ದ ಪ್ರತಿರೂಪವಾಗಿದೆ. ಮಹಾರಾಷ್ಟ್ರದಲ್ಲಿ ಬೌದ್ಧರಾದವರ ನಡುವೆಯೂ ಇಂತಹದ್ದೇ ಶ್ರೇಣೀಕರಣದ ಏಣಿ ಸೃಷ್ಟಿಯಾಗಿದೆ ಎನ್ನುತ್ತವೆ ಆಧ್ಯಯನಗಳು. ಈ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದು ಹೇಗೆ? ಯಾವುದು ದಾರಿ.? ಎಲ್ಲಿದೆ ಬೆಳಕು? ಯಾವುದೇ ವಿಚಾರದಲ್ಲೂ 'ಇದು ಇಷ್ಟೇ, ಇದೇ ಅಂತಿಮ' ಎಂಬ ಸ್ಥಗಿತತೆಗೆ ಅಂಟಿಕೊಳ್ಳದೇ ಮುಕ್ತ ಮನಸ್ಸಿನ ಚಿಂತನೆಗೆ ತೆರೆದುಕೊಳ್ಳುವ-ಸತ್ಯವನ್ನು ಹುಡುಕುವ, ಆರೋಗ್ಯಕರ ಧೋರಣೆ ಇಂದಿನ ತುರ್ತು ಅಗತ್ಯವಾಗಿದೆ. **– ಆರ್. ರಾಮಕೃಷ್ಣ**

ಆ ಲೋಕ –ಈ ಲೋಕ....

ಪುಟ 4 ರಿಂದ

ಸೇರಿಸುವುದಿಲ್ಲವೋ ? ಆಚೆ ನೂಕುತ್ತಾರೆ–ಯೇ ? ಬಹುಶ: ಇಲ್ಲ. ಮತ್ತೆ ?

ಅಗೋ ಅಲ್ಲೆ ಪಕ್ಕದಲ್ಲೆ ಅಂಗನವಾಡಿ ಕೊಠಡಿ. ಅದರ ಹಿಂದೆ ಕಾಣುವುದು– ಹೌದು, ಅದು ನ್ಯಾಯ ಬೆಲೆ ಅಂಗಡಿ. ಉದ್ದನೆ ಸಾಲು. ಅಕ್ಕಿ ತುಂಬಿಕೊಂಡು ಹೋಗಲು ತಂದಿರುವ ಚೀಲಗಳೇ ಕೊಡೆ, ನೆತ್ತಿ ಸುಡುವ ಬಿಸಿಲಿಗೆ.

ಸಾಲಲ್ಲಿ ನಿಂತುಕೊಂಡೇ ಗೋಳು ತೋ ಡಿಕೊಂಡರು ಅಂಜನಮ್ಮ. ನಿಮಗೆ ಏನು ಕಷ್ಟನಮ್ಮ. ವಯಸ್ಸಾದ ಮುದುಕಿ. ಯಾರೂ ಗತಿಇಲ್ಲ. ತಿಂಗಳಿಗೆ ನಾಲಕ್ ಕೆ.ಜಿ. ಅಕ್ಕಿ ಕೊಡ್ತಾರೆ. ಅದನ್ನು ತಗಂಡು ಏನ್ ಮಾಡಕಾಯ್ತದೆ ? ನಾಲಕ್ ಕೆ.ಜಿ. ಅಕ್ಕಿ ಎಷ್ಟು ದಿನ ಬರುತ್ತೆ ಅಜ್ಜಿ ? ಒಂದು ವಾರಕ್ಕಾಯ್ತದೆ. ನಿಮಗೆ ಪೆನ್‌ಶನ್ ಬರಲ್ವ ? ವಯಸ್ಸಾದವರಿಗೆ ಕೊಡ್ತಾರಲ್ಲ ಅದು ? ಬರ್ತದೆ. ತಿಂಗಳಿಗೆ 400 ರೂಪಾಯಿ. ಪೋಸ್ಟ್‌ಮನ್ 20 ರೂಪಾಯಿ ಮುರ್‍ಕೊಂಡು 380 ರೂಪಾಯಿ ಕೊಡ್ತಾನೆ. ಮೂರು ತಿಂಗಳ್‌ಗೋ ಆರ್ ತಿಂಗಳ್‌ಗೋ ಒಂದ್ಸರಿ ಬತ್ತದೆ...

...ಸೊಸೆ ಮತ್ತೆ ಇಬ್ಬರು ಮಕ್ಕಳ ಹೆಸರು ಕಾರ್ಡ್‌ಗೆ ಸೇರಿಸ್‌ಕೊಳ್ಳಲಿಲ್ಲ. ಒಬ್ಬರುಗೆ ನಾಲಕ್ ಕೆ.ಜಿ. ತರ ನಮ್ ಆರು ಜನರ ಕುಟುಂಬುಕ್ಕೆ ತಿಂಗಳ್‌ಗೆ 12 ಕೆ.ಜಿ. ಕೊಡ್ತಾರೆ. ಸಕ್ಕರೆ ಸಿಗದೇ ಇಲ್ಲ... ಅಂತ ಅಲವತ್ತುಕೊಂಡ ಹೆಂಗ್ಸಸಿನ ಹೆಸರು ತಂಗಮ್ಮ. ತಿಂಗಳಿಗೆ ಎರಡೋ ಮೂರೋ ದಿನ ತೆರೆಯುವ ಅಂಗಡಿಯ ಮುಂದೆ ಮುಕುರಿರುವ ಗಂಡಸರು, ಹೆಂಗಸರು. ಊರಲ್ಲಿ ಸ್ಕೂಲು, ಅಂಗನವಾಡಿ ಚೆನ್ನಾಗಿ ನಡೆಯುತ್ತಿದ್ದಾವಾ ? ಪರವಾಗಿಲ್ಲ... ಇಲ್ಲೇ ಐತಲ್ಲ. ಹಂಗಲ್ಲ. ಅಂಗನವಾಡಿಯಲ್ಲಿ ಎಲ್ಲ ಮಕ್ಕಳನ್ನೂ ಸೇರಿಸ್ಕೋತಾರಾ ? ಒಂದೇ ತರ ನೋಡ್ಕೋತಾರಾ ? ಇಲ್ಲ ಜಾತಿ ಮೇಲೆ ಏನಾದ್ರೂ...

...ಏ ಇಲ್ಲ ಬಿಡ್ರಿ ಎಲ್ಲ ಒಂದೇ. ಅಂಗೆಲ್ಲ ಬೇಧ ಭಾವ್ನೆ ಮಾಡಲ್ಲ... ಈಗ ನಾಲ್ಕು ದನಿಗಳು ಒಟ್ಟು ಸೇರಿದವು. ಎಲ್ಲರೂ ಮಾತು ಮುಗಿಸಿದರೂ ಈ ಒಬ್ಬ ಮಹಿಳೆ ಮಾತು ಮುಗಿಯಲಿಲ್ಲ. ಯಾಕಿಂಥ ಉದ್ವೇಗ? ನಾನೇನು ಯಾರ ಮೇಲೂ ಯಾವ ಗಂಭೀರ ಆರೋಪವನ್ನೂ ಹೊರಿಸಿರಲಿಲ್ಲ. ಸುಮ್ಮನೆ ಬೇಕೋ ಬೇಡವೋ ಅನ್ನುವ ಹಾಗೆ ಒಮ್ಮೆ ನೋಡುವ ಅಂತ ಕೇಳಿದ್ದೆ ಅಷ್ಟೆ

ಹಾಗಿದ್ದರೆ ಅಲ್ಲೇ ಅರಳಿ ಮರದ ಕೆಳಗೆ ಕುಳಿತ ಅಜ್ಜ ಹೇಳಿದ್ದು ಸುಳ್ಳಾ ? ಅಕ್ಕಿ ಕೊಳ್ಳಲು ಸಾಲಲ್ಲಿ ನಿಂತ ಈ ಮಹಿಳೆ ಯಾಕೆ ತಾನೆ ಅಂಗನವಾಡಿಯ ಸೂಪರ್ ವೈಸರ್ ಕಮ್ ಮೇನೇಜರ್ ಕಂ ರಸಿಪ್‌ಶನಿಸ್ಟ್ ಥರ ಉದ್ವೇಗಗೊಳ್ಳುತ್ತಾರೆ. ?

ಯಾರನ್ನೂ ನಂಬುವುದು. ಯಾವುದನ್ನು ನಂಬುವುದು ? ಉತ್ತರವಿಲ್ಲದ ಪ್ರಶ್ನೆಗಳು.

ನೆನಪಾದರು ಮುಗುವಾಳಪ್ಪ

ಪ್ರಚಾರದ ವಾಹನ ದೊಡ್ಡಬಳ್ಳಾಪುರದ ಕಸಬ ಹೋಬಳಿಯ ತಳಗವಾರ ಗ್ರಾಮಕ್ಕೆ ಹೋದಾಗ ಬಿಜೆಪಿ ಮುಖಂಡ ಸದಾನಂದಗೌಡರ ಬಹಿರಂಗ ಸಭೆಗೆ ಹೋದ ಕೆಲವರು ವಾಪಸ್ ಬಂದು ಇಳಿಯುತ್ತಿದ್ದರಂತೆ. ಹಲವರು ಗೊತ್ತಿರುವವರೇ. ದಲಿತರು ಮನುವಾದಿ ಪಕ್ಷದ ಸಭೆಗೆ ಹೋಗಿದ್ದಾರೆ. ಕೆಲವರಿಗೆ ಬೇಸರ. ಬಿಜೆಪಿ ಸಭೆಗೆ ಹೋಗಿ ಬಂದವರನ್ನು ಮತ್ತೆ ಮಾತನಾಡಿಸಬೇಕೇನು ? ಒಹೋ. ಅಗೋ ಅವರೇ ಬಂದರು ಮಾತನಾಡಿಸಲು.

ಮುಗುವಾಳಪ್ಪನವರ ಪಕ್ಷವನ್ನು ನಾವು ಮರೆಯೋದಿಕ್ಕಾಗಲ್ಲ. ಇಷ್ಟೇ ಎಲ್ಲ ಅನ್ಕೋಬೇಡಿ. ಆಗಾಗ ಊರಿನ ಕಡೆ ಬರ್ತಾ ಇರಿ. ಮುಂದೆ ನೊಡೋಣ.

ಮುಗುವಾಳಪ್ಪ ಈಗ ದೊಡ್ಡಬಳ್ಳಾಪುರದ ಬಸ್ ನಿಲ್ದಾಣದ ಬಳಿ ಪ್ರತಿಮೆಯಾಗಿ ನಿಂತಿದ್ದಾರೆ. ಅದು 1970 ಅಥವಾ 1972 ಇರಬಹುದು. ಜೋಡಿದಾರ್ ಪದ್ದತಿಯ ವಿರುದ್ದ ಪ್ರಾಂತ ರೈತ ಸಂಘದ ಹೋರಾಟದ ಹುರುಪು. ರಕ್ತ ಬಸಿದು–ಬೆವರು ಸುರಿಸಿ ಬೆಳೆ ಬೆಳೆಯುವ ರೈತನಿಗೆ ಭೂಮಿ ಮತ್ತು ಫಲ ದಕ್ಕಬೇಕು. ಹೊಲವನ್ನೇ ನೋಡದ ಜೋಡಿದಾರರಿಗೆ ಜಮೀನ್ದಾರರಿಗೆ ಯಾಕೆ ಈ ಪಾಟಿ ಪಾಲು ಕೊಡಬೇಕು.

ಅದು 1980–81. ದಲಿತರು ಊರಿನ ದೇವಸ್ಥಾನದ ಪ್ರವೇಶ ಬಯಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೇಳಿತು– ದಲಿತರನ್ನು ದೇವಸ್ಥಾನಕ್ಕೆ ಬಿಡಿ... ಇಲ್ಲ ಬಿಡುವುದಿಲ್ಲ. ..ಬಂದರೆ ಬಡಿಯುತ್ತೇವೆ. ಕೂಲಿಗೆ ಯಾರು ಕರೆಯುತ್ತಾರೋ ನೋಡುತ್ತೇವೆ. ?

ಇಲ್ಲ. ದೇವಸ್ಥಾನದ ಒಳಗೆ ಹೋಗುವುದೇ ಸರಿ. ಕೆಂಬಾವುಟ ಜೊತೆಗೆ ನಿಂತಿತು. ಸುಲಭವೇ? ಊರು ಬಿಡಬೇಕಾಯಿತು ದಲಿತರು. ಕಮ್ಯೂನಿಸ್ಟ್ ಮುಖಂಡ ಮುಗುವಾಳಪ್ಪ ಸ್ವತಂತ್ರ ಭಾರತದ ಬಹಿಷ್ಕೃತ ಭಾರತೀಯ ಪ್ರಜೆಗಳಿಗೆ ತಮ್ಮ ಮನೆಯಲ್ಲಿ ಆಶ್ರಯ ಕೊಟ್ಟ 'ಅಪರಾಧಿ'ಯಾದರು. ಯಾರು ಕೂಲಿಗೆ ಕರೆಯದಿದ್ದರೇನು ನಮ್ಮ ತೋಟವೇ ಇದೆಯಲ್ಲ, ಕೊಡಿಗೆ ಹಳ್ಳಿಯಲಿ. ದುಡಿಯಿರಿ. ಯಾರು ಬರುತ್ತಾರೋ ನೋಡೋಣ. ಮುಗುವಾಳಪ್ಪ ಸೆಟೆದು ನಿಂತರು.

ಮುಗುವಾಳಪ್ಪ ಇದ್ದಬದ್ದ ಆಸ್ತಿ ಕಳಕೊಂಡು ಎಷ್ಟೋ ಚಳುವಳಿ ಹೂಡಿದರು. ದಲಿತರಿಗೆ ಸಿಗದಂತೆ ಮಾಡಿ ತಮ್ಮ ಕಾಲೇಜಿಗೆ ಸರ್ಕಾರಿ ಜಮೀನು ಮಂಜೂರು ಮಾಡಿಸಿಕೊಂಡಿರುವ ಪುತ್ತೂರಿನ ಸುಪುತ್ರ ಸದಾನಂದ ಗೌಡರಿಗೆ ದೊಡ್ಡಬಳ್ಳಾಪುರವೇನು ಗೊತ್ತು. ತಳಗವಾರ್ ಗ್ರಾಮದ ಚರಿತ್ರೆಯೇನು ಗೊತ್ತು. ಒಂದು ಹಳ್ಳಿಯಲ್ಲಿ 80 ವರ್ಷದ ಅಜ್ಜಿಗೆ ಕೆಂಬಾವುಟ ನೋಡಿ ಏನೇನು ನೆನಪಿಗೆ ಬಂತೋ. ಕಣ್ಣೀರಿಟ್ಟರಂತೆ. ಅದು ದಲಿತರದೇ ಊರು. ಈ ಮನೆ ಅಂತ ಒಂದು ನನಗೆ ಇದ್ರೆ ಅದಕ್ಕೆ ಆ ಪುಣ್ಯಾತ್ಮನೇ ಕಾರಣ ಅಂತ ಮುಗುವಾಳಪ್ಪನವರನ್ನು ನೆನೆದರು ಅಜ್ಜಿ.

ತಿಪ್ಪೂರಿನ ಚಿಕ್ಕ ಹನುಮಯ್ಯ ಮತ್ತವರ ಕುಡುಗೋಲು ಸಂಗಾತಿಗಳು ಆಗ ಹುಟ್ಟಿದ್ದರೋ ಇಲ್ಲವೋ ಗೊತ್ತಿಲ್ಲ.

ಚಿಕ್ಕ ಹನುಮಯ್ಯನ ಮಕ್ಕಳ ಹೆಸರು ಕೇಳಿದ್ದೆ. ಒಬ್ಬ 7 ವರ್ಷ–ಹೆಸರು ಆಕಾಶ. ಮತ್ತೊಬ್ಬ 4 ವರ್ಷ–ಹೆಸರು ಅಕ್ಷಯ. ಮತ್ತೊಂದಕ್ಕೆ 11/2 ವರ್ಷ–ಹೆಸರು ಕೇಳಿಕೊಳ್ಳಲಿಲ್ಲ.

ಮಗುವನ್ನು ಶಾಲೆಗೆ ಸೇರಿಸಿದ್ದೀರಾ ? ...ಇಲ್ಲ... ಯಾಕೆ?... ಮಗ ತಲೆಮೇಲಿಂದ ಕೈ ಚಾಚಿ ಕಿವಿ ಹಿಡ್ಕೋಳೊಕೊದ್ರೆ ಎಟಕಾಕಿಲ್ಲ. ಅದಕ್ಕೆ ಸ್ಕೂಲಲ್ಲಿ ಸೇರಿಸ್ಕಂಡಿಲ್ಲ.

ಇರಲಾರದು. ಸ್ಕೂಲಿಗೆ ಸೇರಿಸುವ ಮಕ್ಕಳು ಇದಾವ ಅಂತ ಮನೆ ಮನೆ ಹುಡುಕ್ ಕೊಂಡು ಬರ್ತಾರೆ. ಇವರೇ ಸೇರಿಸಿಲ್ಲ ಅನಿಸುತ್ತೆ?

ಯಾವುದನ್ನ ನಂಬುವುದು? ಯಾವ ಊರಿಗೆ ಹೋದರೂ ಚಿಕ್ಕ ಹನುಮಯ್ಯಗಳು.. ಚಿಕ್ಕ ಹನುಮಯ್ಯನ ಮಕ್ಕಳು.

ನೀವು ಕುಡಿಯುವುದು ಬಿಡುವವರೆಗೆ ಉದ್ದಾರ ಆಗಲ್ಲ. ಯಾರೋ ಘೋಷಿಸಿದರು. ಹಶ್... ಹಾಗೆಲ್ಲಾ ಅನ್ನಬೇಡಿ. ಯಾಕೆ– ಶ್ರೀಮಂತರು ಕುಡಿಯುವುದಿಲ್ಲವಾ ? ಮಿಡಲ್ ಕ್ಲಾಸ್‌ನ ಜನ ? ಪತ್ರಕರ್ತರು...ಬನ್ನಿ ಸಂಜೆ ಕಬ್ಬನ್ ಪಾರ್ಕಿನ ಪ್ರೆಸ್ ಕ್ಲಬ್ ಕಡೆ. ದಲಿತರಾದ ಒಂದೇ ಕಾರಣಕ್ಕೆ ಕುಡಿಯುವ ಹಕ್ಕು ಕಳೆದುಕೊಳ್ಳುತ್ತಾರಾ ? ಎಲ್ಲ ವಿಭಾಗದವರು ಕುಡಿಯುತ್ತಾರೆ. ಕುಡಿಯುವುದರ ಜೊತೆ ಸರಿಯಾಗಿ ತಿನ್ನಲು ಇಲ್ಲದವರು ಕರುಳು ಸುಟ್ಟುಕೊಂಡು ಸಾಯುತ್ತಾರೆ...

"ನಾವು ಸ್ವಂತ ಮನೆಯವರು. ಬಾಡಿಗೆ ಮನೆಯವರಿಗೆ ಕೊಡೋ ತರ ನಮಗೆ ಇನ್ನೂರು ಮುನ್ನೂರು ರೂಪಾಯಿಯ ಜುಜುಬಿ ಸೀರೆ ಕೊಟ್ಟಿದ್ದೀರಾ? ಅಂತ ತಗಾದೆ ತೆಗೆದು ಎಂಟು ನೂರು ಸಾವಿರ ರೂಪಾಯಿಯ ಸೀರೆ ತೆಗೆಸಿಕೊಂಡು ಹೋದರಂತೆ ಬೊಮ್ಮನಹಳ್ಳಿಯ ಕ್ಷೇತ್ರದ ಸ್ವಂತ ಮನೆಯ ಮಹಿಳೆಯರು. ಮೊನ್ನೆ ಬೇಗೂರು ಸಿದ್ದಯ್ಯ ಹೇಳಿದ್ದರು. ಚಿಕ್ಕ ಹನುಮಯ್ಯನಿಗೆ ಮತ್ತು ಸಂಗಾತಿಗಳಿಗೆ ಸ್ವಂತ ಅಂತ ಒಂದು ಮನೆ ಇತ್ತ? ಗೊತ್ತಾಗಲಿಲ್ಲ. ಮುಗುವಾಳಪ್ಪನವರ ಪಕ್ಷದ ರಾಜಕೀಯ ಮೇಲುಗೈ ಆಗಿದ್ದಿದ್ದರೆ? ಆಗಲಿಲ್ಲ. ಹಿಂದೆ ಕಾಂಗ್ರೆಸ್‌ನ ರಾಮೇಗೌಡರು ಆಮೇಲೆ ಜನತಾ ಪರಿವಾರದ ಜಾಲಪ್ಪರಂತವರು ಹೇಗೋ ಮಂದಿಯ ಓಟು ಸೆಳೆದುಕೊಂಡರು.

ಕಮ್ಯುನಿಸ್ಟ್ ಪಕ್ಷದ ಸಹವಾಸವೇ ಅಂಥದ್ದು. ದುಡ್ಡುಕಾಸಿಗೆ ಕಷ್ಟ. ಆದರೆ ರಾಮಭದ್ರಯ್ಯ, ಮುಗುವಾಳಪ್ಪನವರಂಥ ಹಿರಿಯ ಜೀವಗಳು ಹಳ್ಳಿ ಹಳ್ಳಿಗಳಲ್ಲಿ ಜನರ ಮನಸ್ಸಿನಲ್ಲಿ ಹುಗಿದಿಟ್ಟ ನೆನಪಿನ ನಿಧಿ ಇದೆ.

ಟೌನಿಗೆ ಬಂದಾಗ ವಿಷಯ ಬಲ್ಲ ಸ್ನೇಹಿತರೊಬ್ಬರು ಹೇಳಿದರು. ಹಿಂದೆ ಪೋಲಿಸ್ ಪೇದೆಯಾಗಿದ್ದು ಈಗ ಮಾಜಿ ಮಂತ್ರಿಯಾಗಿರುವ ಜೆಡಿ(ಎಸ್) ಅಭ್ಯರ್ಥಿಗೆ ಇಲ್ಲಿಯವರೆಗೆ ಅಂದರೆ ಏಪ್ರಿಲ್ 29 ರವರೆಗೆ ಸು. 6–7 ಕೋಟಿ ಕೈಬಿಟ್ಟಿದೆಯಂತೆ. ಮುಖ್ಯ ಖರ್ಚು ಇರುವುದು ಇನ್ನು ಮುಂದೆ ಅಂತೆ. ಟಿಕೀಟು ತರುವುದಕ್ಕೆ ಬೇರೆ 5 ಕೈ ಕ ಚ್ಚಿತಂತೆ. ಪಾಪ. (ಇಲ್ಲಿ ಟಿಕೀಟು ನೆಚ್ಚಿಕೊಂಡು ಊರೂರಿನ ದೇವಾಸ್ಥಾನಗಳಿಗೆ ಗ್ರಾನೈಟು ಸೀಮೆಂಟು, ನೀರಿಲ್ಲದ ಕಡೆ ನೀರು ಪೂರೈಸಿದ ಮುನೇಗೌಡರ ಗೋಳು ಕೇಳುವವರು ಯಾರು.) ವರ್ಷಾನುವರ್ಷಗಳಿಂದ ಕ್ಷೇತ್ರದ ಕಾಮಗಾರಿಗಳ ಕಂತ್ರಾಟುದಾರರ ಪೂರ್ಣ ಒಲವು ಗಳಿಸಿರುವ ಹಾಲಿ ಶಾಸಕರಿಗೆ ಅದೇ ಒಂದು ಆನೆ ಬಲವಂತೆ. ಆಗ ಆಪರೇಷನ್ ಕಮಲಕ್ಕೆ ಉಘೇ ಉಘೇ. ಈ ಬಾರಿ 'ಕೈ'ನ ಹಿಡಿಯೋಣವೆಂದರೆ ಟಿಕೀಟು ಗಿಟ್ಟಲಿಲ್ಲವಂತೆ. ಕಮಲ ಗುರುತಿಗೆ ಮತ್ತೆ ಉಘೇ ಉಘೇ ಬೆಂಗಳೂರು ನಾನಾ ಬಾರ್‌ಗಳ ಮಾಲೀಕತನ ಮತ್ತು ಬಾರ್ ಮಾಲೀಕರ ಸಂಘದ ಗೆಳೆತನ. ಹೀಗಾಗಿ ಎಲೆಕ್ಷನ್ ಕಮೀಷನ್ ಏನೇ ಕಾವಲು ಕಾದರೂ ಬೇರೆಯವರಿಗಿಂತ 'ಹಂಚಿಕೆ' ಅವರಿಗೆ ಸಲೀಸಂತೆ.

ಅಂತೆ ಕಂತೆಗಳ ಸಂತೆ. ಕನಕಾಂಬರ ನೋಟುಗಳದೂ ಅಷ್ಟೆ. ಕ್ಷೇತ್ರದಲ್ಲಿ ಹರಿಯುವುದು ಕಂತೆ ಕಂತೆ.

ಊರಿನ ಬಣ್ಣವೇ ಒಂದು. ಊರಾಚೆಯ ಕೇ–ರಿಯ ಬಣ್ಣ ಇನ್ನೊಂದು.

ಮುರಿದ ಹೆಂಚು. ಕುಸಿಯುವ ಮಣ್ಣಿನ ಗೋಡೆ. ಗುಡಿಸಲ ಹಿಂಡು. ಕಷ್ಟಗಳಲ್ಲೂ ಬೇಧ. ಒಂದು ಲೋಕ ಹಾಗೋ ಹೀಗೋ ಹೇಗೋ ಇಪ್ಪತ್ತೊಂದನೇ ಶತಮಾನದ ಮೊದಲ ಭಾಗಕ್ಕೆ ತೆವಳಿಕೊಂಡು ಬಂದಿದೆ. ಚಿಕ್ಕ ಹನುಮಯ್ಯನ ಲೋಕ ಇನ್ನೂ ಇಪತ್ತನೇ ಶತಮಾನದ ಆರಂಭದಲ್ಲೇ 'ಅಲ್ಲೇ ಕುಂತಿದೆ'.


ಒಂದು ಆಶ್ರಯ ಮನೆ. ಒಂದು ನಾಲಕೆಕರೆ ಸರ್ಕಾರಿ ಭೂಮಿ ಬರೀ ಕೂಲಿ ನಂಬಿದವರಿಗೆ. ಇವೆಲ್ಲಾ ಯಾರಿಗೆ ಬೇಕಿದೆ. ಇಲ್ಲಿ ಬನ್ನಿ. ಘಾಟಿ ಸುಬ್ರಮಣ್ಯದ ಕಡೆಗೆ. ಬರೋಬ್ಬರಿ 74 ಎಕರೆ ಭೂಮಿ ಸರ್ಕಾರದ ಭೂಮಿ ದಾನ ರಾಷ್ಟ್ರೋತ್ಥಾನದ ಗೋಶಾಲೆಗೆ. ಪಶುಗಳಿಗಿಂತ ಕಡೆಯೇ ದಲಿತರು –ಬಡವರ ಬದುಕು. ಹಾಕು ಬಹುಪರಾಕು ಯಡಿಯೂರಪ್ಪ, ಮೋದಿ, ಶೆಟ್ಟರ್, ಕೆ.ಎಸ್. ಈಶ್ವರಪ್ಪಗೆ. ಅವರಿಗೂ ಇರಲಿ ಕಟ್ಟಾ ಸುಬ್ರಮಣ್ಯ ನಾಯ್ಡು. ಕೃಷ್ಣಯ್ಯ ಶೆಟ್ಟರಿಗೆ.

ದೊಡ್ಡಬಳ್ಳಾಪುರ ಟೌನ್‌ನಲ್ಲಿ ಕರೆ–ಂಟು ಸಮಸ್ಯೆ. ನೇಕಾರರ ಬದುಕು ಬಿದ್ದಿದೆ ಬೇಗುದಿಗೆ. ಕೆಲಸಗಾರರ ದುಡಿಮೆ ಕತ್ತರಿ ಬಿದ್ದಿದೆ. ಊರಿನ ಕುಡಿಯುವ ನೀರಿನ ಯೋಜನೆಗೂ. ಮೆರವಣಿಗೆಯಲಿ ಬಂದು ಸಲ್ಲಿಸಿದ 5,600 ಮನೆ ನಿವೇಶನ ಇಲ್ಲದವರ ಅರ್ಜಿಗಳು ಸರ್ಕಾರದ ಕಚೇರಿಯಲ್ಲಿ ಮೋಕ್ಷ ಕಾಣದೇ ಧರಣಿ ಕುಳಿತಿವೆ. ಕೆಂಬಾವುಟ ಮೋಕ್ಷ ಕೊಡಿಸಲು ಸೆಣೆಸುತ್ತಿದೆ. ಹತ್ತಿರದ ದೇವನಹಳ್ಳಿಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಂದಿದೆ. ಎಲ್ಲೆಲ್ಲೂ ಪುಷ್ಪ ಕೃಷಿ ಹೆಸರಿನ ಕಂಪನಿ ಕೃಷಿ ಕಾಲಿಡುತ್ತಿದೆ. ಅಲ್ಲಿ ಕೂಲಿಕಾರರ ಕೂಲಿ ಹೆಚ್ಚಳಕ್ಕೂ ಕೆಂಬಾವುಟವೇ ಸಾಕ್ಷಿ ಹಾಕಿದೆ. ಕೈಗಾರಿಕಾ ನಗರದಲ್ಲೂ ಇಂಥದ್ದೇ ಛಾಪು ಒತ್ತಿದೆ. ಚುನಾವಣೆಯೂ ಒಂದು ಹೋರಾಟ– ಅದು ನಡೆದಿದೆ.

ದೊಡ್ಡಬಳ್ಳಾಪುರದಿಂದ ಬೆಂಗಳೂರು ಕಡೆ ಬಂದಂತೆ ದಾರಿಯುದ್ದ, ಯಲಹಂಕ, ವಿದ್ಯಾರಣ್ಯಪುರ.. ಅಮ್ಮಮ್ಮ !!! ಮುಗಿಲ ಚುಂಬಿಸುವ 'ಸ್ಕೈಲೈನ್ ಅಪಾರ್ಟ್‌ಮೆಂಟು'ಗಳು. ತಿಪ್ಪೂರಿನ ಚಿಕ್ಕ ಹನುಮಯ್ಯನಿಗೆ ಅಲ್ಲೇನಾದರೂ ಒಂದು ಮನೆ...ಬೇಡ ಬಿಡಿ, ಆ ಕಟ್ಟಡದಲ್ಲಿ ಒಂದು ಎಂಥದ್ದಾದರೂ ಕೂಲಿಕೆಲಸವಾದರೂ ಸಿಗುವ ಕನಸಾದರೂ ಕಾಣಬಹುದೇ ? ಕಲ್ಪನೆಗೆ ನಾನೇ ಬೆಚ್ಚಿ ಬಿದ್ದು ಮನೆ ದಾರಿ ಹಿಡಿದು ನಡೆದೆ.


ಜನಶಕ್ತಿ
ಕನ್ನಡ ವಾರಪತ್ರಿಕೆ

2ಜಿ ಹಗರಣ: ಜೆಪಿಸಿ ವರದಿಯೇ ಅಥವ ಯುಪಿಎ ವರದಿಯೇ?



ವೇದರಾಜ ಎನ್.ಕೆ.

2ಜಿ ತರಂಗಾಂತರ ಹಂಚಿಕೆಯ ಹಗರಣ ಕುರಿತ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯ ಅಧ್ಯಕ್ಷರು ತಯಾರಿಸಿದ ಕರಡು ವರದಿ ಸಮಿತಿಯ ಸದಸ್ಯರಿಗೆ ತಲುಪುವ ಮೊದಲೇ ಮಾಧ್ಯಮಗಳಿಗೆ ಸೋರುವಂತೆ ಮಾಡಲಾಗಿದೆ ಎಂಬುದು ವಿವಾದವನ್ನು ಸೃಷ್ಟಿಸಿದೆ, ಅಲ್ಲದೆ ಈ ಕರಡು ವರದಿಯನ್ನು ಚರ್ಚಿಸಲು ನಿಗದಿ ಪಡಿಸಿದ್ದ ಸಭೆಯನ್ನು ಮುಂದೂಡಲಾಗಿದೆ. ಇದರಲ್ಲಿ ಆಗಿನ ದೂರಸಂಪರ್ಕ ಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ತಪ್ಪು ದಾರಿಗೆಳೆದಿದ್ದರು, ಈ ಹಗರಣದಲ್ಲಿ ಪ್ರಧಾನ ಮಂತ್ರಿಗಳದ್ದಾಗಲೀ, ಹಣಕಾಸು ಮಂತ್ರಿಗಳದ್ದಾಗಲೀ ಏನೂ ತಪ್ಪಿಲ್ಲ ಎಂದು ಹೇಳಲಾಗಿದೆ ಎಂಬ ಮಾಧ್ಯಮಗಳಲ್ಲಿನ ಸುದ್ದಿಯನ್ನು ನಿರಾಕರಿಸಲು ಯುಪಿಎ ವಕ್ತಾರರುಗಳು ಆರಂಭದಲ್ಲಿ ಪ್ರಯತ್ನಿಸಿದ್ದರು. ಆದರೆ ಈಗ ಜೆಪಿಸಿ ಅಧ್ಯಕ್ಷರೇ ಅದನ್ನು ಒಪ್ಪಿಕೊಂಡಿದ್ದಾರೆ.



ಕೃಪೆ : ದಿ. ಹಿಂದೂ

ಆಗಿನ ದೂರಸಂಪರ್ಕ ಮಂತ್ರಿಗಳು ಪ್ರತೀ ಹಂತದಲ್ಲಿ ಅವರಿಬ್ಬರ ಗಮನಕ್ಕೆ ತಂದೇ ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿಕೆ ನೀಡಿದ್ದರೂ, ತಮ್ಮನ್ನು ಸಾಕ್ಷ್ಯ ನೀಡಲು ಕರೆಯ ಬೇಕೆಂದು ಹೇಳಿದ್ದರೂ ಕರೆಸದೆ ಈ ತೀರ್ಮಾನಕ್ಕೆಹೇಗೆಬಂದಿರಿ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತ ಯಾರು ಏನೇ ಹೇಳಿರಲಿ, ಪ್ರಧಾನ ಮಂತ್ರಿಗಳು ಅಥವ ಹಣಕಾಸು ಮಂತ್ರಿಗಳ ಪಾತ್ರ ಈ ಹಗರಣದಲ್ಲಿ ಇದೆ ಎನ್ನುವುದನ್ನು ಸೂಚಿಸುವ ಯಾವುದೇ ಕಡತ ನಮಗೆ ಸಿಗಲಿಲ್ಲ ಎಂದು ತಮ್ಮನ್ನು ಸಮರ್ಥಿಸಿಕೊಂಡಿದ್ದಾರೆ.

ಆದರೆ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳಿಂದ ಕೆಲವು ಮುಖ್ಯ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯದೆ ಈ ಕುರಿತು ಒಂದು ತೀರ್ಮಾನ ಕೊಡುವಂತಹ ಜೆಪಿಸಿ ವರದಿ ಸಿದ್ಧ ಪಡಿಸುವುದು ಅಸಾಧ್ಯ ಎಂದು ಜೆಪಿಸಿ ಸದಸ್ಯರಾದ ಸಿತಾರಾಂ ಯೆಚೂರಿ ಸಮಿತಿಯ ಇತರ ಸದಸ್ಯರಿಗೆ ಕಳಿಸಿರುವ ಒಂದು ಟಿಪ್ಪಣಿಯಲ್ಲಿ ಹೇಳಿದ್ದಾರೆ. ಕರಡು ವರದಿಯಲ್ಲಿಯೇ ಲೈಸೆನ್ಸ್‌ಗಳನ್ನು ನೀಡುವ ಪತ್ರಗಳನ್ನು ಕಂಪನಿಗಳಿಗೆ ಕಳಿಸುವ ಮೊದಲು ರಾಜಾ ಅವರು ಪ್ರಧಾನಿಗಳಿಗೆ 3 ಪತ್ರಗಳನ್ನು ಬರೆದಿದ್ದರು, ಅಲ್ಲದೆ ಪ್ರಧಾನ ಮಂತ್ರಿಗಳು ಅವರ 26 ನವಂಬರ್ 2008ರ ಪತ್ರದ ಮೇಲೆ ಒಂದು ಟಿಪ್ಪಣಿಯನ್ನು ಸಿದ್ಧಪಡಿಸಲು ಕೂಡ ತಮ್ಮ ಕಚೇರಿಗೆ ಹೇಳಿದ್ದರು ಎಂದು ತಿಳಿಸಲಾಗಿದೆ. ಹೀಗಿರುವಾಗ ರಾಜಾ ಅವರ ಹೇಳಿಕೆಯಲ್ಲಿನ ಸತ್ಯಾಸತ್ಯತೆಯ ಬಗ್ಗೆಯಾಗಲೀ, ಅಥವ ಅವರು ಪ್ರಧಾನ ಮಂತ್ರಿಗಳನ್ನು ದಾರಿ ತಪ್ಪಿಸಿದರು ಎಂದಾಗಲೀ ತೀರ್ಮಾನಕ್ಕೆ ಬರಲು ಪ್ರಧಾನ ಮಂತ್ರಿಗಳಿಂದ ಕೆಲವು ಪ್ರಶ್ನೆಗಳಿಗೆ ಉತ್ತರ ಬೇಕಾಗುತ್ತದೆ. ಯೆಚೂರಿಯವರ ಟಿಪ್ಪಣಿ ಈ ಪ್ರಶ್ನೆಗಳನ್ನು ಪಟ್ಟಿದೆ. ಅವು ಹೀಗಿವೆ:

1. ರಾಜಾ ಅವರು ತಮ್ಮ ಪತ್ರದಲ್ಲಿ ಹೇಳಿರುವಂತೆ ಜನವರಿ 2008ರ ಮೊದಲ ವಾರದಲ್ಲಿ ಪ್ರಧಾನಿಗಳನ್ನು ಭೇಟಿಯಾಗಿದ್ದ-ರೇ?

2. ಭೇಟಿಯಾಗಿದ್ದರೆ, ರಾಜಾ ಅವರು ಹೇಳಿರುವಂತೆ, ಪ್ರಧಾನ ಮಂತ್ರಿಗಳು ಆತ ಪ್ರಸ್ತಾವಿಸಿದ ದಾರಿಯನ್ನು ಒಪ್ಪಿದರೇ?

3. ರಾಜಾ ಅವರು ಪ್ರಧಾನ ಮಂತ್ರಿಗಳನ್ನು ತಪ್ಪುದಾರಿಗೆಳೆದರು ಎಂದು ಯಾವ ನಿರ್ದಿಷ್ಟ ಸಂಗತಿಯಲ್ಲಿ ನಾವು ಹೇಳಬಹುದು?

ಅ) ಹರಾಜು ನಡೆಸಿಲ್ಲ ಎಂದೇ ಅಥವ 2001 ರ ಲೈಸೆನ್ಸ್ ಶುಲ್ಕವನ್ನು 2008ರ ಸೂಚ್ಯಂಕಕ್ಕೆ ಸರಿಹೊಂದಿಸಲಿಲ್ಲ ಎಂದೇ?

ಆ) ಮೊದಲು ಬಂದವರಿಗೆ ಮೊದಲು ಆದ್ಯತೆ ಎಂಬುದರಲ್ಲಿ ಅರ್ಹತೆಯ ದಿನಾಂಕದ ಬದಲಾವಣೆ ಮಾಡಿದರೆಂದೇ?

ಇ) ರಾಜಾ ಅವರು ತಮ್ಮ ಪತ್ರದಲ್ಲಿ ಹೇಳಿರುವಂತೆ ತಾವು ಸೂಚಿಸಿದ ಪ್ರಸ್ತಾವಕ್ಕೆ ಸಾಲಿಸಿಟರ್-ಜನರಲ್ ಸಮ್ಮತಿ ಪಡೆಯುವ ಬಗ್ಗೆಯೇ?

4. ರಾಜಾ ಅವರು ಹಂಚಿಕೆಯ ವಿಧಾನದಲ್ಲಿ ಪಾರದರ್ಶಕತೆ ಉಳಿಸಿಕೊಳ್ಳಲಿಲ್ಲ ಎಂದು ಕರಡು ವರದಿ ಹೇಳಿರುವಂತೆ ಹೇಳುವುದು ಹೇಗೆ?

5. ರಾಜಾ ರವರು ಪಾರ-ದರ್ಶಕತೆ ಉಳಿಸಿಕೊಳ್ಳಲಿಲ್ಲ ಅಥವ ತಪ್ಪುದಾರಿಗೆಳೆದರು ಎಂಬುದು ನಿಜವಾಗಿದ್ದರೂ, ಈ ಕೆಳಗಿನ ಪ್ರಶ್ನೆಗಳು ಉಳಿದೇ ಉಳಿಯುತ್ತವೆ. ಅದಕ್ಕೆ ಪ್ರಧಾನಿಗಳು ಉತ್ತರ ಕೊಡಬೇಕಾಗಿದೆ:

ಅ) ಲೈಸೆನ್ಸ್‌ಗಳನ್ನು ಇನ್ನೂ ನೀಡಿರಲಿಲ್ಲವಾದ್ದರಿಂದ ಲೈಸೆನ್ಸ್ ನೀಡಿಕೆಯ ಆಶಯ ಪತ್ರಗಳನ್ನು ಸರಕಾರ ಹಿಂತೆದುಕೊಂಡು ಸರಿಯಾದ ವಿಧಾನವನ್ನು ಅನುಸರಿಸಬಹುದಿತ್ತಲ್ಲ- ಪ್ರಧಾನಿಗಳು ತಾನೇ ಹೇಳಿದಂತಹ ಕ್ರಮವನ್ನು ಏಕೆ ಕೈಗೊಳ್ಳಲಿಲ್ಲ?

ಆ) ಹಣಕಾಸು ಇಲಾಖೆ ಮತ್ತು ದೂರಸಂಪರ್ಕ ಇಲಾಖೆ 2008 ರಲ್ಲಿ 2001ರ ಬೆಲೆಗಳು ಮತ್ತು ಪ್ರವೇಶ ಶುಲ್ಕಗಳನ್ನು ಹಾಗೆಯೇ ಮುಂದುವರೆಸಲು ಒಪ್ಪಿದವು ಎಂದು ಪ್ರಧಾನ ಮಂತ್ರಿಗಳು ಅಕ್ಟೋಬರ್ 29,2011 ರಂದು ಟಿವಿ ಸಂಪಾದಕರುಗಳಿಗೆ ಹೇಳಿದರು. ಇದು ಜನವರಿ10, 2008 ರ ಮೊದಲೋ ಅಥವ ನಂತರವೋ?

ಇ) ಪ್ರಧಾನ ಮಂತ್ರಿಗಳು, ಹರಾಜು ನಡೆಸಬೇಕೆಂಬ ತನ್ನದೇ ಪ್ರಸ್ತಾವವನ್ನು ಯಾವ ಆಧಾರದಲ್ಲಿ ಕೈಬಿಟ್ಟರು?

ಇದೇ ರೀತಿ ಹಣಕಾಸು ಇಲಾಖೆಯ ಬಗ್ಗೆ ಕರಡು ವರದಿಯಲ್ಲಿ ಬಹಳಷ್ಟು ಪ್ರಸ್ತಾಪಗಳಿವೆ. ಆದ್ದರಿಂದ ಅವರಿಂದಲೂ ಕೆಲವು ಪ್ರಶ್ನೆಗಳಿಗೆ ಉತ್ತರ ಪಡೆಯದೆ ಅವರ ಪಾತ್ರ ಏನೂ ಇಲ್ಲ ಎಂಬ ತೀರ್ಮಾನಕ್ಕೆ ಬರಲು ಕೂಡ ಸಾಧ್ಯವಿಲ್ಲ ಎಂದು ಯೆಚೂರಿ ತಮ್ಮ ಟಿಪ್ಪಣಿಯಲ್ಲಿ ಹೇಳಿದ್ದಾರೆ.

□ ಲೈಸೆನ್ಸ್ ಶುಲ್ಕ ಕುರಿತಂತೆ ದೂರಸಂಪರ್ಕ ಇಲಾಖೆ ನೀಡಿದ ವಿವರಣೆಗಳಿಗೆ ಹಣಕಾಸು ಇಲಾಖೆ ಸ್ಪಂದಿಸದೆ ಇರುವ ಮೂಲಕ ವಾಸ್ತವವಾಗಿ ಹಣಕಾಸು ಮಂತ್ರಿಗಳು ಅದಕ್ಕೆ ಸಮ್ಮತಿ ನೀಡಿದ್ದರು ಎಂದು ಜೆಪಿಸಿ ಕರಡು ವರದಿ ಹೇಳಿದೆ. ಇದನ್ನು ಹಣಕಾಸು ಮಂತ್ರಿಗಳು ಒಪ್ಪುತ್ತಾರೆಯೇ?

□ ಲೈಸೆನ್ಸ್ ನೀಡಿಕೆಯಲ್ಲಿ ಪ್ರವೇಶ ಮತ್ತು 2008 ರಲ್ಲಿ 2001ರ ಬೆಲೆಗಳು ಮತ್ತು ಶುಲ್ಕಗಳ ವಿಷಯದಲ್ಲಿ ಹಣಕಾಸು ಇಲಾಖೆ ಮತ್ತು ದೂರಸಂಪರ್ಕ ಇಲಾಖೆಯ ನಡುವೆ ಒಪ್ಪಂದ ಇರಲೇಬೇಕು ಎಂದು ಸಂಪುಟ ಟಿಪ್ಪಣಿ ಇದ್ದರೂ ಹಣಕಾಸು ಇಲಾಖೆ ಇದರ ಮೇಲೆ ಒತ್ತು ನೀಡಲಿಲ್ಲವೇಕೆ?

□ ತನ್ನ ಕ್ರಮಗಳಿಗೆ ಹಣಕಾಸು ಇಲಾಖೆಯ ಮತ್ತು ಮಂತ್ರಿಗಳ ಸಮ್ಮತಿ ಇತ್ತು, ತಾನು ಜನವರಿ 2008ರ ಮೊದಲ ವಾರದಲ್ಲಿ ಹಣಕಾಸು ಮಂತ್ರಿಗಳನ್ನು ಭೇಟಿ ಮಾಡಿದ್ದಾಗಿ ರಾಜಾ ಹೇಳಿದ್ದಾರೆ. ಇದು ನಿಜವೇ ಹಾಗೂ ಹಣಕಾಸು ಮಂತ್ರಿಗಳು 2008 ರಲ್ಲಿ ಲೈಸೆನ್ಸ್ ನೀಡಿಕೆಯಲ್ಲಿ 2001ರ ಮಟ್ಟದ ಶುಲ್ಕಗಳಿಗೆ ತಮ್ಮ ಸಮ್ಮತಿ ನೀಡಿದ್ದರೇ?

□ ಜನವರಿ 15, 2008 ರಲ್ಲಿ ಪ್ರಧಾನ ಮಂತ್ರಿಗಳಿಗೆ ಸಲ್ಲಿಸಿದ ಟಿಪ್ಪಣಿಯಲ್ಲಿ ಹೇಳಿರುವಂತೆ ಅದೇ ಜನವರಿ 10ರ ಆಶಯ ಪತ್ರಗಳ ನೀಡಿಕೆಯಲ್ಲಿ ಪ್ರವೇಶ ಮತ್ತು ಶುಲ್ಕಗಳ ಸಂಗತಿಗಳು ಮುಚ್ಚಲ್ಪಟ್ಟ ಸಂಗತಿಗಳು ಎಂದು ಪರಿಗಣಿಸಲು ಹಣಕಾಸು ಮಂತ್ರಿಗಳು ಒಪ್ಪಿದ್ದೇಕೆ?

□ ಜನವರಿ 30.2018 ರಂದು ರಾಜಾ ಅವರನ್ನು ಭೇಟಿ ಮಾಡಿದಾಗ ಹಣಕಾಸು ಮಂತ್ರಿಗಳು ಆಶಯ ಪತ್ರಗಳ ನೀಡಿಕೆಯಲ್ಲಿ ಪ್ರವೇಶ ಮತ್ತು ಶುಲ್ಕಗಳ ಸಂಗತಿಗಳು ಮುಚ್ಚಲ್ಪಟ್ಟ ಸಂಗತಿಗಳು ಎಂದು ಪರಿಗಣಿಸಲು ಒಪ್ಪಿದ್ದೇಕೆ?

□ ದೇಶದ ಒಬ್ಬ ಪ್ರತಿಷ್ಠಿತ ವಕೀಲರಾದ ನಮ್ಮ ಹಣಕಾಸು ಮಂತ್ರಿಗಳಿಗೆ, ಲೈಸೆನ್ಸ್ ನೀಡಿರದಿರುವಾಗ ಅದನ್ನು ಕುರಿತಾದ ಆಶಯ ಪತ್ರಗಳನ್ನು ರದ್ದು ಮಾಡಬಹುದು ಎಂದು ಗೊತ್ತಿರಲೇಬೇಕು. 2008 ರಲ್ಲಿ 2001 ರ ಮಟ್ಟದಲ್ಲಿಡಲು ಹಣಕಾಸು ಇಲಾಖೆಯ ಸಮ್ಮತಿ ಬೇಕೇ ಬೇಕು, ಅದ-ಕ್ಕೆ ಸಂಪುಟ ಟಿಪ್ಪಣಿಯ ಅಗತ್ಯವೂ ಇಲ್ಲ ಎಂಬ ಭಾರತ ಸರಕಾರದ ವ್ಯವಹಾರಗಳ ನಾಲ್ಕನೇ ನಿಯಮದ ಮೇಲೆ ಅವರು ಒತ್ತು ನೀಡಲಿಲ್ಲವೇಕೆ?


□ ಇದೇ ದಸ್ತಾವೇಜಿನ ನಿಯಮ 7, ಹಣಕಾಸಿನ ಪ್ರಶ್ನೆಯಿರುವ ಯಾವುದೇ ವಿಷಯದಲ್ಲಿ ಸರಕಾರದ ಇಲಾಖೆಗಳ ನಡುವೆ ಭಿನ್ನಾಭಿಪ್ರಾಯಗಳಿದ್ದರೆ, ಹಣಕಾಸು ಮಂತ್ರಿಗಳು ಈ ಬಗ್ಗೆ ಸಂಪುಟದ ನಿರ್ಣಯ ಬೇಕೆನಿಸಿದರೆ ಅದನ್ನು ಸಂಪುಟದ ಮುಂದೆ ತರಬೇಕು ಎಂದು ಹೇಳುತ್ತದೆ. ಹಣಕಾಸು ಮಂತ್ರಿಗಳು ಈ ನಿಯಮದ ಮೇಲೆ ಒತ್ತು ನೀಡಲಿಲ್ಲವೇಕೆ?

ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳ ಉನ್ನತ ಸ್ಥಾನವನ್ನು ಗಮನದಲ್ಲಿಟ್ಟುಕೊಂಡು ಈ ಪ್ರಶ್ನೆಗಳಿಗೆ ಅವರಿಂದ ಲಿಖಿತವಾಗಿ ಅಥವ ಮೌಖಿಕವಾಗಿ ಉತ್ತರ ಪಡೆಯಬಹುದು. ಹಾಗೆ ಪಡೆಯದೆ ಅವರಿಬ್ಬರ ಪಾತ್ರ ಏನೇನೂ ಇಲ್ಲ ಎನ್ನುವ ತೀರ್ಮಾನವನ್ನು ಕೈಗೊಳ್ಳುವುದು ಜೆಪಿಸಿಗೆ ಹೇಗೆ ಸಾಧ್ಯ ಎಂದು ಅರ್ಥವಾಗದು ಎಂದು ಯೆಚೂರಿ ತಮ್ಮ ಟಿಪ್ಪಣಿಯಲ್ಲಿ ಹೇಳಿದ್ದಾರೆ.

ಮಾಧ್ಯಮಗಳ ವರದಿಗಳ ಪ್ರಕಾರ ಕರಡು ಜೆಪಿಸಿ ವರದಿಯಲ್ಲಿ ಕನಿಷ್ಟ 27 ಬಾರಿ ಮಾಜಿ ದೂರಸಂಪರ್ಕ ಮಂತ್ರಿಗಳ ಪ್ರಸ್ತಾಪ ಬಂದಿದೆ, ಆದರೂ ಅವರು ಬಯಸಿದಂತೆ ಅವರನ್ನು ಸಾಕ್ಷ್ಯ ಹೇಳಲು ಕರೆಯಲಿಲ್ಲವೇಕೆ ಎಂದು ಪ್ರಶ್ನಿಸಿದಾಗ ಜೆಪಿಸಿ ಅಧ್ಯಕ್ಷರು ಅವರನ್ನು ಕೇಳಿಲ್ಲ ಎಂಬ ಟೀಕೆ ಸರಿಯಲ್ಲ, ಅವರೊಂದಿಗೆ ತಾನೇ ಈ ಬಗ್ಗೆ ಮಾತಾಡಿ ತಮ್ಮ ವಿವರಣೆಯನ್ನು ಬರೆದು ಕೊಡುವಂತೆ ಕೇಳಿದ್ದೇನೆ ಎಂದು ಸಮರ್ಥಿಸಿಕೊಂಡರು.

ಆದರೆ ಅವರು ಈ ರೀತಿ ಸಲ್ಲಿಸಿದ ಪತ್ರದಿಂದಾಗಿ, ಯೆಚೂರಿಯವರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಎದ್ದಿರುವ ಪ್ರಶ್ನೆಗಳಿಗೆ ಉತ್ತರ ಪಡೆಯದೆ ಜೆಪಿಸಿ ಅಧ್ಯಕ್ಷರು ಹೇಗಾದರೂ ತೀರ್ಮಾನಗಳಿಗೆ ಬಂದರು ಎಂಬುದಕ್ಕೆ ಅವರ ಬಳಿಯಾಗಲೀ, ಯುಪಿಎ ಬಳಿಯಾಗಲೀ ಸಮರ್ಥನೆಗಳಿಲ್ಲ. ವಾಸ್ತವವಾಗಿ ಅವರ ಕರಡು ವರದಿಯಲ್ಲಿನ ಹಲವು ವಾಕ್ಯಗಳನ್ನು ಯುಪಿಎ-2 ಸರಕಾರ ತನ್ನ ಸಮರ್ಥನೆಗೆ ಆಗಾಗ ನೀಡಿದ ಹೇಳಿಕೆಗಳಿಂದಲೇ ಅನಾಮತ್ತಾಗಿ ಎತ್ತಿಕೊಂಡಂತೆ ಕಾಣುತ್ತದೆ ಎಂದು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

ವಿಶ್ವದ ಅತ್ಯಂತ ದೀರ್ಘ ಕಾಲದ ದಾಖಲೆಯ ಲಕ್ಷಾಂತರ ಕಾರ್ಮಿಕರ ಮುಷ್ಕರ




ಜಿ.ಎಸ್. ನಾಗರಾಜ್ 32

ಮೇ 30ರ ಹತ್ಯಾಕಾಂಡ– ಕಾರ್ಮಿಕರ ಮುಷ್ಕರಗಳ ಹೊಸ ಅಲೆ, ಅದನ್ನು ಅಡಗಿಸಲು ಕಾರ್ಮಿಕರ ಕೊಲೆ, ಸಹಾನುಭೂತಿ ತೋರಿದ ವಿದ್ಯಾರ್ಥಿಗಳ ಮೇಲೆ ಧಾಳಿ ಮತ್ತು ಬಂಧನ, ಪತ್ರಿಕಾ ಮತ್ತಿತರ ಸ್ವಾತಂತ್ರ್ಯ ಮತ್ತಿತರ ಹಕ್ಕುಗಳ ಮೇಲೆ ಧಾಳಿ, ಇವೆಲ್ಲವುಗಳನ್ನು ಜೊತೆಗೂಡಿಸಿ ಎಲ್ಲ ವಿಭಾಗಗಳ ಸಾಮ್ರಾಜ್ಯಶಾಹೀ ವಿರೋಧೀ ಪ್ರತಿಭಟನೆ, 10,000ಕ್ಕೂ ಮಿಗಿಲಾದ ಈ ಪ್ರತಿಭಟನೆಯ ಮೇಲೆ ಗುಂಡಿನ ಧಾಳಿ, ಹನ್ನೆರಡು ಜನಕ್ಕು ಹೆಚ್ಚು ಜನರ ಹತ್ಯೆ. ಇವು ಮೇ ಹತ್ಯಾಕಾಂಡದ ವಿವರಗಳು.

ಈ ಹತ್ಯಕಾಂಡದ ಮೂಲಕ ಕಾರ್ಮಿಕ ಹೋರಾಟದ ಹೊಸ ಅಲೆಯನ್ನು ಹತ್ತಿಕ್ಕಬೇಕೆಂದು ಬ್ರಿಟಿಷ್ ಹಾಗೂ ಜಪಾನೀ ಆಕ್ರಮಣಕಾರರು ಬಯಸಿದ್ದರೆ ಚೀನೀ ಕಮ್ಯುನಿಸ್ಟ್ ಪಕ್ಷ ಈ ದಮನವನ್ನು ಎದುರಿಸಲು ಎಲ್ಲೆಡೆ ಪ್ರತಿಭಟನಾ ಮೆರವಣಿಗೆಗಳು, ಸಭೆಗಳ ಜೊತೆ–ಗೆ ಮೇ 31 ರಂದೇ ಕಾಮಿಕರು, ವಿದ್ಯಾರ್ಥಿಗಳು, ವ್ಯಾಪಾರಿಗಳ ಒಂದು ಜಂಟಿ ಕ್ರಿಯಾ ಸಮಿತಿಯನ್ನು ರಚಿಸಿತು. ಇದ–ಕ್ಕೆ ಶಾಂಘೈ ಕಾರ್ಮಿಕ ಸಂಘಗಳ ಒಕ್ಕೂಟ ಕೇಂದ್ರವಾಗಿ ಕೆಲಸ ಮಾಡಿತು. ಜೂನ್ 1 ರಿಂದಲೇ ಮಹಾ ಮುಷ್ಕರ ಹಾಗೂ ಬಂದ್ ಆರಂಭವಾಯಿತು. 2,00,000 ಕಾರ್ಮಿಕರು ಮುಷ್ಕರ ಮಾಡಿದರು. 50,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಲಾ, ಕಾಲೇಜುಗಳಿಂದ ಹೊರಬಂದರು. ಬಹುತೇಕ ಎಲ್ಲ ಅಂಗಡಿ ಮುಂಗಟ್ಟುಗಳೂ ಬಾಗಿಲು ಹಾಕಿದುವು. ವಿದೇಶಿಯರ ಹಿಡಿತದಲ್ಲಿದ್ದ ಪ್ರದೇಶಗಳ ಪೋಲೀಸರೂ ಮುಷ್ಕರ ಮಾಡಿದರು !

ಈ ಮಹಾ ಮುಷ್ಕರ ಹಾಗೂ ಬಂದ್ ದಿನಗಟ್ಟಳೇ ಮುಂದುವರೆಯಿತು. ಸಾಮ್ರಾಜ್ಯಶಾಹಿಗಳೊಡನೆ ಅತೀ ಹತ್ತಿರದ ವ್ಯಾಪಾರೀ ಸಂಬಂಧ ಹೊಂದಿದ್ದ ಅಧೀನ ಬಂಡವಾಳಶಾಹಿಗಳ ಸಂಘವಾದ ಶಾಂಘೈನ ವಾಣಿಜ್ಯ ಮಂಡಳಿ ಹೊರತುಪಡಿಸಿ ಇತರ ವ್ಯಾಪಾರ ವ್ಯವಹಾರಗಳ ಸಂಘಗಳೂ ಕೂಡ ಇದಕ್ಕೆ ಬೆಂಬಲವಾಗಿ ನಿಂತರು. ಈ ಹೋರಾಟದ ಗುರಿಯ ಬಗ್ಗೆ ಕಮ್ಯುನಿಸ್ಟ್ ಪಕ್ಷ ಇದು ಕಾನೂನಿನ ಪ್ರಶ್ನೆಯಲ್ಲ ರಾಜಕೀಯ ಪ್ರಶ್ನೆ. ಸಾಮ್ರಾಜ್ಯಶಾಹಿಗಳನ್ನು ಹೊಡೆದೋಡಿಸುವ ಪ್ರಶ್ನೆ ಎಂದು ಘೋಷಿಸಿತು. ಜೂನ್ 11 ರಂದು 2,00,000 ಕಾರ್ಮಿಕರು, ವಿದ್ಯಾರ್ಥಿಗಳು, ವ್ಯಾಪಾರಿಗಳು ಒಂದು ಮಹಾಸಭೆಯನ್ನು ನಡೆಸಿ 17 ಸಾಮ್ರಾಜ್ಯಶಾಹಿ ವಿರೋಧೀ ಒತ್ತಾಯಗಳನ್ನು ಅಂಗೀಕರಿಸಿದರು.

ಚೀನಾದಿಂದ ಎಲ್ಲ ಭೂ ಹಾಗೂ ನಾವಿಕ ಸೈನ್ಯವನ್ನು ಹಿಂತೆಗೆದುಕೊಳ್ಳಬೇಕು, ಪತ್ರಿಕಾ ಸ್ವಾತಂತ್ರ್ಯ ಸಂಘಟನಾ ಸ್ವಾತಂತ್ರ್ಯ, ಮುಷ್ಕರ ಸ್ವಾತಂತ್ರ್ಯ ನೀಡಬೇಕು, ವಿದೇಶೀ ಹಿಡಿತದ ಪ್ರದೇಶಗಳಲ್ಲಿನ ಪುರ ಸಭೆ ಹಾಗು ನ್ಯಾಯಾಲಯಗಳಲ್ಲಿ ಚೀನೀಯರಿಗೆ ಪ್ರಾತಿನಿಧ್ಯ ಮುಂತಾದ ಮುಖ್ಯ ಬೇಡಿಕೆಗಳಿಗಾಗಿ ಹೋರಾಟ ತೀವ್ರವಾಯಿತು. ಈ ಐತಿಹಾಸಿಕ ಹೋರಾಟವನ್ನು ದಮನ ಮಾಡಲು ಬ್ರಿಟಿಷ್ ಜಪಾನ್ ನಾವಿಕ ಸೈನ್ಯದ ಹಡಗುಗಳನ್ನು ಶಾಂಘೈ ನಗರದ ತೀರ ಪ್ರದೇಶಕ್ಕೆ ಕಳುಹಿಸಲಾಯಿತು. ಈ ಹೋರಾಟದ ಒಕ್ಕೂಟದಲ್ಲಿ ಒಡಕು ತರಲು ವ್ಯಾಪಾರಿಗಳಿಗೆ ಒಂದು ಕಡೆ ಪ್ರಲೋಭನೆಗಳನ್ನು, ಮತ್ತೊಂದು ಕಡೆ ಬೆದರಿಕೆಗಳನ್ನು ಒಡ್ಡಲಾಯಿತು. ಅಮೆರಿಕ ಪರ ಇದ್ದ ಬುದ್ಧಿಜೀವಿಗಳಾದ ಹು ಶಿಯಂತಹವರೂ ಶಾಂತಿಪ್ರಸ್ತಾಪಗಳನ್ನು ಮುಂದಿರಿಸಿ ಈ ಒಡಕನ್ನು ಮೂಡಿಸಲು ನೆರವಾದರು. ದೊಡ್ಡ ವ್ಯಾಪಾರಿಗಳ ಒಂದು ಗುಂಪು ಅವರ ಪ್ರಲೋಭನೆಗಳ ಲಾಭ ಪಡೆಯಲು ತಮ್ಮ ಅಂಗಡಿಗಳನ್ನು ತೆ–



ಗೆದು ವ್ಯಾಪಾರ ಆರಂಭಿಸಿದರು. ಇವುಗಳ ಜೊತೆಗೆ ಕಾರ್ಮಿಕ ನಾಯಕರ ಬಂಧನ ಸತ್ರ ಆರಂಭವಾಯಿತು. ಕೊನೆಗೆ ಕೆಲ ಒತ್ತಾಯಗಳ ಅಂಶಿಕ ಜಾರಿಯೊಂದಿಗೆ ಈ ಹೋರಾಟವನ್ನು ಜುಲೈ ತಿಂಗಳಿನಲ್ಲಿ ಹಿಂತೆಗೆದುಕೊಳ್ಳಲಾಯಿತು.

ವಿಶ್ವ ದಾಖಲೆ ಸ್ಥಾಪಿಸಿದ ಸಮರ ಧೀರ ಮುಷ್ಕರ ಮತ್ತು ಕಾರ್ಮಿಕ ಆಡಳಿತದ ಸ್ಥಾಪನೆ

ಶಾಂಘೈನಲ್ಲಿ ಆರಂಭವಾದ ಮಹಾ ಮುಷ್ಕರದ ಪ್ರೇರಣೆಯೊಂದಿಗೆ ಬೀಜಿಂಗ್, ಚಾಂಗ್ ಶಾ ಮೊದಲಾದ ಅನೇಕ ನಗರಗಳಲ್ಲಿ ಮುಷ್ಕರಗಳು ಆರಂಭವಾಗಿದ್ದವು. ಈ ಸರಣಿಯಲ್ಲಿ ಹಾಂಗ್‌ಕಾಂಗ್ ನಗರದಲ್ಲಿ ಕೂಡ ಜೂನ್ 19 ರಂದು ಮುಷ್ಕರ ಆರಂಭವಾಯಿತು. 1,00,000 ಕಾರ್ಮಿಕರು ಅದರಲ್ಲಿ ಭಾಗವಹಿಸಿ ಶಾಂಘೈನ 17 ಒತ್ತಾಯಗಳನ್ನು ತಾವೂ ಎತ್ತುವುದರ ಜೊತೆಗೆ ಹಾಂಗ್‌ಕಾಂಗ್ ಪ್ರದೇಶದ 6 ಒತ್ತಾಯಗಳನ್ನು ಸೇರಿಸಿದರು. ಹಾಂಗ್‌ಕಾಂಗ್ ಪ್ರದೇಶದ ಬ್ರಿಟಿಶ್ ಸರ್ಕಾರ ಕೂಡಲೆ ಮಾರ್ಷಲ್ ಲಾ ಘೋಷಿಸಿತು. ಗ್ವಾಂಗ್ ಡಾಂಗ್ ನ ಕೋಮಿಂಟಾಂಗ್ ಪಕ್ಷದ ಸರ್ಕಾರ ಈ ಮುಷ್ಕರಕ್ಕೆ ಬೆಂಬಲ ಕೊಟ್ಟಿತೆಂಬ ಸಿಟ್ಟಿನಲ್ಲಿ ಆ ಪ್ರದೇಶದ ಜೊತೆ ಎಲ್ಲ ವ್ಯವಹಾರವನ್ನೂ ಬಹಿಷ್ಕರಿಸುವುದಾಗಿ ಘೋಷಿಸಿತು. ಜೂನ್ 23 ರಂದು ಶಾಂಘೈ ಒತ್ತಾಯಗಳ ಬೆಂಬಲಕ್ಕಾಗಿ ನಡೆದ ಪ್ರತಿಭಟನೆಯಲ್ಲಿ 1,00,000 ಜನ ಎಲ್ಲ ವಿಭಾಗದವರೂ ಭಾಗವಹಿಸಿದ್ದರು. ಈ ಮೆರವಣಿಗೆ ಅಲ್ಲಿಯ ಶಾಕೀ ಎಂಬ ರಸ್ತೆಯಲ್ಲಿ ಸಾಗುತ್ತಿದ್ದಾಗ ಅದರ ಮೇಲೆ ಗುಂಡು ಹಾರಿಸಿ 50 ಜನರನ್ನು ಕೊಂದು ಹಾಕಲಾಯಿತು. ಹತ್ಯಾಕಾಂಡದ ಮೇಲೆ ಹತ್ಯಾಕಾಂಡ ನಡೆಸಿದ ಈ ಕ್ರೂರಿಗಳ ಮೇಲೆ ಇಡೀ ಚೀನಾದಲ್ಲಿ ಸಿಟ್ಟು ಉಕ್ಕೇರಿತು. ಕೋಮಿಂಟಾಂಗ್ ಸರ್ಕಾರ ಹಾಂಗ್‌ಕಾಂಗ್ ಜೊತೆ ಆರ್ಥಿಕ ಸಂಬಂಧಗಳನ್ನು ಕಡಿದು–ಕೊಂಡು ಎಲ್ಲ ಬಂದರುಗಳ ಮೇಲೆ ನಿಷೇಧ ಹೇರಿತು. ಹಾಂಗ್‌ಕಾಂಗ್‌ನ 2,50,000 ಕಾರ್ಮಿಕರು ಮುಷ್ಕರ ಹೂಡಿದರು. ಈ ಕಾರ್ಮಿಕರಲ್ಲಿ 1,30,000 ಕಾರ್ಮಿಕರು ನೆರೆಯ ಕ್ಯಾಂಟನ್ ನಗರ–ಕ್ಕೆ ಹಿಂದಿರುಗಿದರು. ಈ ಹಿನ್ನೆಲೆಯಲ್ಲಿ ಹಾಂಗ್‌ಕಾಂಗ್–ಕ್ಯಾಂಟನ್ ಜಂಟಿ ಮುಷ್ಕರ ಸಮಿತಿ ರಚಿಸಿಕೊಂಡರು. ಅದರಲ್ಲಿ 2,000 ಕಾರ್ಮಿಕರ ಒಂದು ಸ್ವ–ಯಂ ಸೇವಕರ ಪಡೆಯೊಂದನ್ನು ರಚಿಸಿಕೊಂಡರು. ಈ ಪಡೆ ಬ್ರಿಟಿಷ್–ಜಪಾನೀ ವಸ್ತುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬಹಿಷ್ಕಾರ ಮಾಡಿದರು.

ಈ ಕಾರ್ಮಿಕ ಹೋರಾಟ ಅವರ ಆರ್ಥಿಕ ಒತ್ತಾಯಗಳಿಗಾಗಿ ಅಲ್ಲವೆ ಅಲ್ಲ ಎಂಬುದನ್ನು ಗಮನಿಸಿದ್ದೀರಿ. ಇದು ದೇಶದ ಸ್ವಾತಂತ್ರ್ಯಕ್ಕಾಗಿ ಮಾತ್ರವೇ ಕೇವಲ ಕಾರ್ಮಿಕ ವರ್ಗ ಘೋಷಿಸಿದ ಮುಷ್ಕರವಾಗಿತ್ತು. ಎದುರಾಳಿಗಳು ಈ ಅಥವಾ ಆ ಕಾರ್ಖಾನೆಯ ಮಾಲಿಕ ಮಂಡಳಿಯಾಗಿರಲಿಲ್ಲ, ಬದಲಾಗಿ ಇಡೀ ಸಾಮ್ರಾಜ್ಯಶಾಹಿ ಮತ್ತು ಅವರ ಚೀನೀ ಸಹಚರರಾದ ಪಾಳೆಯಗಾರೀ ಯುದ್ಧ–ಕೋರರು, ಅವರ ಮಿಲಿಟರಿ ಹಾಗೂ ರಾಜಕೀಯ ಪ್ರಭುತ್ವ ಶಕ್ತಿಯಾಗಿತ್ತು. ಆದ್ದ–ರಿಂದ ಸಂಪೂರ್ಣವಾಗಿ ರಾಜಕೀಯ ಸಂಘರ್ಷವಾಗಿ ಪರಿಣಮಿಸಿತು. ಜಗತ್ತಿನ ಇತಿಹಾಸದಲ್ಲಿಯೇ, ಕಾರ್ಮಿಕ ಹೋರಾಟದ ಚರಿತ್ರೆಯಲ್ಲಿಯೇ ಅಪೂರ್ವವಾದ ಹೊಣೆಗಾರಿಕೆಯನ್ನು ಕಾರ್ಮಿಕ ವರ್ಗ ನಿರ್ವಹಿಸಿದ ಸಂದರ್ಭವಾಗಿತ್ತು.

ಕಾರ್ಮಿಕರು ರಚಿಸಿಕೊಂಡಿದ್ದ ಮುಷ್ಕರ ಸಮಿತಿ ಈ ಎಲ್ಲ ಸಂಕೀರ್ಣ, ವೈವಿಧ್ಯಮಯ ಕೆಲಸಗಳ ನಿರ್ವಹಣೆಗೆ ಒಂದು ಕಾರ್ಮಿಕ ಪರಿಷತ್ತನ್ನು ಸ್ಥಾಪಿಸಿದರು. 8
ಪ್ರತಿನಿಧಿಗಳನ್ನು ಒಳಗೊಂಡ ಈ ಪರಿಷ
ಕಾರ್ಯಾಂಗ ಸಮಿತಿ, ಶಾಸಕಾಂಗ ಸಮಿ
ನ್ಯಾಯಾಂಗ ಸಮಿತಿ, ಹಣಕಾಸು ಸಮಿತಿ, ಲೆ
ಪತ್ರ ತಪಾಸಣಾ ಸಮಿತಿ, ಜೈಲುಗಳು, ಶ
ಸನ್ನದ್ಧರಾದ ಪಿಕೆಟಿಂಗ್ ದಳ, ಆಸ್ಪತ್ರೆಗಳ
ಶಾಲೆಗಳು ಮುಂತಾದವನ್ನು ಸ್ಥಾಪಿಸಿತು. ಹೀ
ಈ ಪರಿಷತ್ತು ಒಂದು ಪರ್ಯಾಯ ಸರ್ಕಾರ
ಸ್ವರೂಪವನ್ನೇ ಪಡೆದುಕೊಂಡಿತು.

ಈ ಪರಿಷತ್ತಿನ ಅಡಿಯಲ್ಲಿ ಹಾಂಗ
ಕಾಂಗ್ ದ್ವೀಪ ಸಮೂಹದ ಜೊತೆ ವ್ಯಾಪಾ
ವ್ಯವಹಾರ ನಡೆಸುತ್ತಿದ್ದ ಕಡಲ ತೀರದ ಎ
ಬಂದರುಗಳ ಮೇಲೂ ನಿರ್ಬಂಧ ಹೇರಿತು
ಹಾಂಗ್‌ಕಾಂಗ್ ಹಾಗೂ ಮಕಾವೋಗ
ನಡುವಣ ಎಲ್ಲ ಸಂಪರ್ಕಗಳೂ ಕಡಿದ
ಹೋದವು.

ಈ ಮುಷ್ಕರದ ಆರಂಭದಲ್ಲ
ಗ್ವಾಂಗ್‌ಡಾಂಗ್‌ನಲ್ಲಿ ಸ್ಥಾಪಿಸಲಾಗಿ
ಕೋಮಿಂಟಾಂಗ್ ಕ್ರಾಂತಿಕಾರೀ ಸರ್ಕಾರವನ
ಕಿತ್ತೊಗೆಯಲು ಅನೇಕ ಪ್ರಯತ್ನಗಳ
ನಡೆದವು. ಸರ್ಕಾರದ ಭಾಗವಾಗಿ
ಕೋಮಿಂಟಾಂಗ್‌ನ ಬಲ ಪಂಥೀಯ
ಜೊತೆ ಸೇರಿ ಅಲ್ಲಿಯ ಪಾಳೆಯಗಾರರ
ಅದನ್ನು ಬೀಳಿಸುವ ಯತ್ನ ನಡೆಸಿದರು
ಅದೇ ಸಮಯದಲ್ಲಿ ಈ ಪ್ರದೇಶದ ಹೊರ
ಇಬ್ಬರು ಪಾಳೆಯಗಾರರು ತಮ್ಮ ಸೈನ್ಯವನ
ನೆರೆಸಿ ಧಾಳಿ ಮಾಡಲು ಹೊಂಚ
ಹಾಕುತ್ತಿದ್ದರು. ಆದರೆ ಒಂದು ಕಡೆ ಆ
ತಾನೇ ಆ ಪ್ರದೇಶದಲ್ಲಿ ಬೆಳೆಯುತ್ತಿದ್ದ ರೈ
ಚಳುವಳಿ, (ರೈತ ತರಬೇತಿ ಸಂಸ್ಥೆಯ ಸ್ಥಾಪ
ಮತ್ತು ತರಬೇತಿಯನ್ನು ನೆನಪಿಸಿಕೊಳ್ಳಿ
ಕಾರ್ಮಿಕರು, ಮತ್ತು ಮಿಲಿಟರಿ ತರಬೇ
ಸಂಸ್ಥೆಯಲ್ಲಿ ತಯಾರಾದ ಸೈನ್ಯಾಧಿಕಾರಿಗ
ನೆರವಿನಿಂದ ಈ ಒಳ ಸಂಚುಗಳನ್ನು ಹಾಗು
ಧಾಳಿಗಳನ್ನು ಹತ್ತಿಕ್ಕಲಾಯಿತು.

ಈ ಮಹಾ ಮುಷ್ಕರ ಹ
ಹಾಂಗ್‌ಕಾಂಗ್ ದ್ವೀಪ ಸಮೂಹದ ನಿಬ
ಜೂನ್ 1925 ರಿಂದ ಅಕ್ಟೋಬರ್ 192
ರವರೆಗೆ ಸುಮಾರು ಹದಿನಾರು ತಿಂಗ
ಕಾಲ ನಡೆಯಿತು.

ಈ ಮುಷ್ಕರ ಹಾಗೂ ನಿರ್ಬಂಧ ಧ
ಪರಿಣಾಮವಾಗಿ ಹಾಂಗ್‌ಕಾಂಗ್‌ನ ವ್ಯಾಪಾ
ಅರ್ಧಕ್ಕೆ ಕುಸಿಯಿತು. ಅಲ್ಲಿಯ ಅನೇ
ಅಂಗಡಿಗಳು ಮುಚ್ಚಿ ಹೋದವು. ಅಲ್ಲಿಯ
ಬ್ರಿಟಿಷ್ ಸರ್ಕಾರದ ಪ್ರತಿಷ್ಠೆ ಮಣ್ಣು ಗೂ
ಹೋಯಿತು.

ಅದೇ ಸಮಯದಲ್ಲಿ ಹಾಂಗ್‌ಕಾಂಗ್‌ನಿಂ
ವಸ್ತುಗಳನ್ನು ಕೊಳ್ಳುತ್ತಿದ ಶಾಂಘೈ ನಗರ
ಮತ್ತಿತರ ಪ್ರದೇಶದ ವ್ಯಾಪಾರಿಗಳು ಕ್ಯಾಂಟನ
ನಗರದ ಕಡೆ ತಿರುಗಿದ್ದರಿಂದಾಗಿ ಕ್ಯಾಂಟನ
ನಗರದ ವ್ಯಾಪಾರ ಇಮ್ಮಡಿಸಿತು. ಅಲ್ಲಿಯ
ಸರ್ಕಾರ ಬಿಡುಗಡೆ ಮಾಡಿದ್ದ ಹಣ
ಉಪಯೋಗ ಮತ್ತು ಮೌಲ್ಯ ವೃದ್ಧಿಸಿತು.

ಕೊನೆಗೆ ಹಾಂಗ್‌ಕಾಂಗ್ ಸರ್ಕಾ
ಮಣಿಯಲೇ ಬೇಕಾಯಿತು. ಹೀಗೆ
ಅತ್ಯಂತ ದೀರ್ಘ ಕಾಲದ ಮುಷ್
ವಿಜಯದಲ್ಲಿ ಅಂತ್ಯವಾಯಿತು.

ಗುಲ್ಬರ್ಗಾ ಗ್ರಾಮಾಂತರ....

ಪುಟ 5 ರಿಂದ

ಹಾಗೂ ಸಿಪಿಐ(ಎಂ)ಗೆ ಅದರ ಲಾಭ ಆಗಲಿದೆ ಎಂಬ ಅಭಿಪ್ರಾಯ ಪ್ರಚಲಿತವಿದೆ.

ಈ ಕ್ಷೇತ್ರದಲ್ಲಿ ಮಾತ್ರವೇ ಅಲ್ಲಾ, ರಾಜ್ಯದಾದ್ಯಂತ ಹಲವೆಡೆ ಪರಿಶಿಷ್ಠ ಜಾತಿಗೆ ಮೀಸಲಾದ ಕ್ಷೇತ್ರಗಳಲ್ಲಿ ಜಾತಿ ಬದ್ಧ ಸಮಾಜವನ್ನುಮುನ್ನಡೆಸುವ ಮೇಲ್ಜಾಜಾತಿಗಳ ಮೇಲ್ವರ್ಗಗಳು, ಸಹಜವಾಗಿಯೇ ಅಸ್ಪ್ರಶ್ಯ ಜನ ಸಮುದಾಯದ ಅಭ್ಯರ್ಥಿಗಳ ಬದಲಿಗೆ ಅಸ್ಪ್ರಶ್ಯರಲ್ಲದ ಪರಿಶಿಷ್ಠ ಅಭ್ಯರ್ಥಿಗೆ ಮತ ಹಾಕಿಸುವುದು ನಡೆದಿದೆ. ಇಂತಹದೊಂದು ಮೀಸಲು ಕ್ಷೇತ್ರದೊಳಗಿನ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಳ್ಳುವುದು ಈ ಕ್ಷೇತ್ರದಲ್ಲಿಯು ಈ ಹಿಂದಿನಿಂದಲೇ ನಡೆದು ಬಂದಿದ್ದು ಇದು ಮತ್ತು ಜೆಡಿಎಸ್‌ನ ಹಳೆಯ ನಾಯಕರೆಲ್ಲಾ ಕೆಜೆಪಿ ಹಾಗೂ ಬಿಜೆಪಿ ಗಳಿಗೆ ವಲಸೆ ಹೋಗಿರುವುದು ಎಲ್ಲವೂ ಜೆಡಿಎಸ್ ಅಭ್ಯರ್ಥಿ ಗೆಲುವಿಗೆ ಮುಳುವಾಗಿದೆ ಎಂಬ ಅ[illegible]ಪ್ರಾಯವಿದೆ.

ಬಿಜೆಪಿಯ ಒಳ ಜಗಳ, ಭ್ರಷ್ಟಾಚಾರ,ಮತ್ತು ಅದು ಒಡೆದು ಕೆಜೆಪಿ, ಬಿಎಸ್ಸಾರ್ ಪಕ್ಷಗಳಿಗೆ ಜನ್ಮ ನೀಡಲು ಕಾರಣವಾದದ್ದು ಎಲ್ಲವೂ ಈ ಕ್ಷೇತ್ರದ ಲಿಂಗಾಯತ ಜನ ಸಮೂಹದ ಒಂದು ಜನ ವಿಭಾಗದಲ್ಲಿ ಭ್ರಮ ನಿರಸನ ಉಂಟು ಮಾಡಿ, ತಟಸ್ಥ ನಿಲುಮೆ ತಾಳುವಂತೆ ಮಾಡಿದೆ.

ಸಿಪಿಐ(ಎಂ) :

ಸಿಪಿಐ(ಎಂ) ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ, ಗುಲ್ಬರ್ಗಾ ಜಿಲ್ಲೆಯಲ್ಲಿ ತೊ ಗರಿ ಬೆಳೆಯ ಬೆಲೆ 3300 ರೂ ಗಳಿಗೆ ಕುಸಿದು ರೈತರು ಆತಂಕಿತರಾಗಿದ್ದಾಗ ಅವರ ಜೊತೆ ನಿಂತುದಲ್ಲದೇ, ಆಂದು ಬೇಳೆ ಕಾಳುಗಳ ಮೇಲೆ ಶೇ 50ರಷ್ಟು ಆಮದು ಸುಂಕ ಹಾಕಬೇಕು ಹಾಗೂ ತೊಗರಿಗೆ ಕನಿಷ್ಠ 5000 ರೂ ಬೆಲೆ ನಿಗದಿಸಿ ಖರೀದಿಸಬೇಕೆಂದು ಇತ-ರೇ ಸಂಘ ಸಂಸ್ಥೆಗಳು ಹಾಗೂ ಪ್ರಗತಿಪರರ ಜೊತೆ ಒಂದುಗೂಡಿ ನಿರಂತರ ಹೋರಾಟ ನಡೆಸಿ 4500 ರೂಗಳಿಗೆ ಬೆಲೆ ಹೆಚ್ಚುವಂತೆ ಎರಡುವರೆ ತಿಂಗಳ ಕಾಲ ಶ್ರಮಿಸಿದ್ದು ರೈತರು ಮತ್ತಿತರೆ ರಾಜಕೀಯ ಪಕ್ಷಗಳ ಮುಖಂಡರ ಮೇಲೆ ಪ್ರಬಾವ ಬೀರಿದ್ದು, ಈ ತಟಸ್ತ ಜನಗಳು ಸಿಪಿಐ(ಎಂ) ಕಡೆ ವಾಲಿರುವುದು ಕಂಡು ಬಂದಿದೆ.

ಅದೇ ರೀತಿ ಸಿಪಿಐ(ಎಂ) ಅಭ್ಯರ್ಥಿ ಅಂಬಲಗಿ ಮಾರುತಿ ಮಾನಪಡೆಯವರ ಶ್ರಮ ಮತ್ತು ಸಿಪಿಐ(ಎಂ) ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ನಿಷ್ಠಾವಂತ ಕಾರ್ಯಕರ್ತರಾಗಿ ಅವರ ಜನಪರ ದುಡಿಮೆಯು ಮತ್ತು ಕಳೆದ 03-04 ಬಾರಿ ಸ್ಪರ್ಧಿಸಿ ಸೋತಿರುವುದು ಎಲ್ಲವೂ ಅನುಕಂಪದ ಅಲೆಯನ್ನು ಎಬ್ಬಿಸಿವೆ. ತೊ ಗರಿ ಬೆಲೆಗಾಗಿ ನಡೆದ ಹೋರಾಟದಲ್ಲಿ ಮತ್ತು ಅದರ ಮುಖಂಡತ್ವದಲ್ಲಿ ತೊ ಡಗಿದ್ದ ಹಲವಾರು ಇತರೇ ರಾಜಕೀಯ ಪಕ್ಷಗಳ ಮುಖಂಡರು ಅವರ ಬೆಂಬಲಿಗರು ಸಿಪಿಐ(ಎಂ) ಕಡೆ ಒಲವು ತೋರುತ್ತಿರುವುದು ಕಂಡು ಬಂದಿದೆ.

ಸಿಐಟಿಯು ಗುಲ್ಬರ್ಗಾ ಜಿಲ್ಲಾ ಸಮಿತಿಯು ಇತ್ತೀಚೆಗೆ ಈ ಕ್ಷೇತ್ರದಲ್ಲಿ ಬರುವ ಎಲ್ಲಾ 031 ಗ್ರಾಮ ಪಂಚಾಯತ್ ಮಟ್ಟದಲ್ಲಿ ರಚಿಸಿರುವ ಪಂಚಾಯತ್ ಮಟ್ಟದ ಟ್ರೇಡ್ ಯುನಿಯನ್ ಸಮಿತಿಗಳು, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಸಿಪಿಐ(ಎಂ) ಸದಸ್ಯರೊಂದಿಗೆ ಸೇರಿ ತುಂಬಿಸಿದ ಮನೆ ಹಾಗೂ ನಿವೇಶನ ರಹಿತರ 21 ಸಾವಿರ ಅರ್ಜಿ ಫಾರಂಗಳು ಮತ್ತು 06-04-2013 ರಂದು ನಡೆಸಲಾದ ಸುಮಾರು 06-07 ಸಾವಿರ ಅರ್ಜಿದಾರರ ಬೃಹತ್ ಸಮಾವೇಶ ಹಾಗು ಹೋರಾಟ ಸಮಿತಿಗಳು ಸಿಪಿಐ(ಎಂ) ಕಡೆ ಮುಖ ಮಾಡಿರುವುದಿದೆ.

ಸತತವಾಗಿ ರೈತರು,ಕೂಲಿಕಾರರು,ಹಾಗೂ ಅಂಗನವಾಡಿ, ಬಿಸಿಯೂಟ , ಆಶಾ,ಪಂಚಾಯತ್‌ನೌಕರರ ನಡುವೆ, ಸಿಪಿಐ(ಎಂ) ಹಾಗು ಅದರ ಅಭ್ಯರ್ಥಿಮಾಡಿದ ಕೆಲಸಗಳು ಈ ಎಲ್ಲವೂ ಸಿಪಿಐ(ಎಂ) ಪರವಾದ ಗಾಳಿಯನ್ನು ಕ್ಷೇತ್ರದಲ್ಲಿ ಎಬ್ಬಿಸಿದೆ.

ಮೂಲತ:, ಸಿಪಿಐ(ಎಂ) ತಳಹದಿ, ಕೇತ್ರದ ನರೋಣ ಸರ್ಕಲ್‌ನಲ್ಲಿದ್ದು ಪಕ್ಷದ ಜಿಲ್ಲಾ/ಗ್ರಾಮೀಣ ತಾಲೂಕಾ ಸಮಿತಿಗಳು ಅನುಕೂಲಕರವಾದ ರಾಜಕೀಯ ಸಂದರ್ಭವನ್ನು ಬಳಸಿಕೊಳ್ಳಲು ಪರಿಶ್ರಮಿಸುತ್ತಿವೆ. ಇತ್ತೀಚೆಗೆ ಗುಲ್ಬರ್ಗಾ ಗ್ರಾಮೀಣ ತಾಲೂಕಾ ಸಮಿತಿ ವಿಸ್ತೃತ ಸಭೆ ಸೇರಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೃಷಿಯ ಕಂಪನೀಕರಣದ ಗಂಭೀರ ಪರಿಣಾಮಗಳನ್ನು, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳದ ಹಾಗೂ ಧಾನ್ಯದ ಬದಲು ನಗದು ವರ್ಗಾವಣೆಯ ದುಷ್ಪರಿಣಾಮಗಳನ್ನು ಗ್ರಾಮಗಳಲ್ಲಿ ನೂರಾರು ಬೈಠಕ್ ಸಭೆ ಸಂಘಟಿಸಿ ಆ ಪ್ರದೇಶದ ಆ ಪಕ್ಷಕ್ಕೆ ಎರಡುಪಟ್ಟು ಮತಗಳು ಬರುವಂತೆ ಮಾಡಲು ಶ್ರಮಿಸಬೇಕೆಂದು ನಿರ್ಧರಿಸಿ ಐಕ್ಯತೆಯಿಂದ ಕಾರ್ಯ ನಿರ್ವಹಿಸಲು ತೊಡಗಿರುವುದು ಸಿಪಿಐ(ಎಂ) ಮುನ್ನಡೆಯುವ ಸೂಚನೆಯನ್ನು ನೀಡುತ್ತಿದೆ.

ಇತ್ತೀಚೆಗೆ ಕ್ಷೇತ್ರಕ್ಕೆ ಬೇಟಿ ನೀಡಿದ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ: ಎಂ.ಎ.ಬೇಬಿ ಹಾಗೂ ಪ್ರಧಾನ ಕಾರ್ಯದರ್ಶಿ ಕಾಂ: ಪ್ರಕಾಶ್ ಕಾರಟ್ ರವರ ಚುನಾವಣಾ ಭಾಷಣಗಳು ಮತ್ತಷ್ಟು ಬಲ ತಂದಿವೆ.

ರಾಮದುರ್ಗ: ಕಾರ್ಮಿಕರೆಲ್ಲರೂ ಒಗ್ಗಟ್ಟಾಗಲು ಕರೆ

ದುಡಿಯುವ ಜನರಿಗೆ ದುಡಿತಕ್ಕೆ ತಕ್ಕ ಫಲ ಸಿಗದೇ ಇವತ್ತು ದುಡಿಯುವ ವರ್ಗ ಶೋಚನೀಯ ಸ್ಥಿತಿಯಲ್ಲಿದೆ. ನಮ್ಮನ್ನು ಕಾಪಾಡಬೇಕಿದ್ದ ಚುನಾಯಿತ ಪ್ರತಿನಿಧಿಗಳು ಶ್ರೀಮಂತರ ಪರವಾಗಿ ನಿಂತಿದ್ದಾರೆ. ಚುನಾವಣೆಗಳಲ್ಲಿ ಆಶ್ವಾಸನೆ ನೀಡಿದವರು ಚುನಾವಣೆ ಮುಗಿದ ಮೇಲೆ ಎಲ್ಲವನ್ನು ಮ[illegible]ಛ ಬಿಡುತ್ತಾರೆ. ನಮ್ಮ ಸಮಸ್ಯೆಗಳಿಗೆ ನಾವೇ ಸಂಘಟಿತರಾಗಿ ಹೋರಾಟ ಮಾಡಿ ನಮ್ಮಬೇಡಿಕೆಗಳನ್ನುಈಡೇರಿಸಿಕೊಳ್ಳಬೇಕೆಂದು ಮರಾಠಾ ಮಂಡಳ ಕಾರ್ಯಾಲಯದ ಸಭಾ ಭವನದಲ್ಲಿ ನಡೆದ ಕಾರ್ಮಿಕ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಹಿರಿಯ ಕಾರ್ಮಿಕ ಮುಖಂಡರಾದ ವ್ಹಿ.ಪಿ.ಕುಲಕರ್ಣಿರವರು ಮಾತನಾಡಿದರು.

1886 ರಲ್ಲಿ ಅಮೇರಿಕಾದ ಚಿಕ್ಯಾಗೋ ನಗರದ ಹೇ ಮಾರ್ಕೇಟ್‌ನಲ್ಲಿ ಅವತ್ತಿನ ಸಾಮ್ರಾಜ್ಯ ಶಾಹಿಗಳ ವಿರುದ್ಧ ಕಾರ್ಮಿಕರು ಹೋರಾಟ ಮಾಡಿ, 8 ಘಂಟೆಗಳ ಕಾಲ ಕೆಲಸ, ಕೆಲಸಕ್ಕೆ ತಕ್ಕಂತೆ ವೇತನ ಕೊಡಬೇಕೆಂದು ಹೋರಾಟ ಮಾಡಿದ ಇತಿಹಾಸ ಕಾರ್ಮಿಕ ದಿನಾಚರಣೆಗೆ ಇದೆ. ಹಿಂದೆ ಈ ರೀತಿ ಹೋರಾಟ ನಡೆದಿದೆ. ಇವತ್ತು ಮತ್ತೆ ಸರಕಾರಗಳು 2011 ರಲ್ಲಿ ಕಾರ್ಮಿಕ ಕಾಯ್ದೆ ತಿದಿ ಮಸೂದೆಯನ್ನು ಪಾಸ ಮಾಡಿ 8 ಘಂ-[illegible]ದಲಾಗಿ 10 ಘಂಟೆ ಕೆಲಸ ಮಾಡಲು ಆದೇಶ ಮಾಡಿ ಬಂಡವಾಳ ಶಾಹಿಗಳ ತರಹ ವರ್ತಿಸಿದ್ದಾರೆ. ಕನಿಷ್ಠ ವೇತನಕ್ಕಾಗಿ ಹಲವಾರು ಬಾರಿ ಹೋರಾಟ ಮಾಡಿ ಚುನಾಯಿತ ಪ್ರತಿನಿಧಿಗಳಿಗೆ, ಸರ್ಕಾರಗಳಿಗೆ ಒತ್ತಾಯಿಸಿದ್ದರೂ ಕಾಂಗ್ರೆಸ್ ಸರ್ಕಾರವಾಗಲಿ, ಬಿಜೆಪಿ ಸರ್ಕಾರವಾಗಲಿ, ಚುನಾಯಿತ ಪ್ರತಿನಿಧಿಗಳಾಗಲಿ ಪಾರ್ಲಿಮೆಂಟ್‌ನಲ್ಲಿ, ವಿಧಾನಸಭೆಯಲ್ಲಿ ಕಾರ್ಮಿಕ ಪರ ಧ್ವನಿ ಎತ್ತದೇ ಇರುವುದು ವಿಷಾದನೀಯ. ಇವತ್ತಿನ ಸಂದರ್ಭದಲ್ಲಿ ನಾವು ರೈತ ಕಾರ್ಮಿಕರ ಪರವಾಗಿ ಕೆಲಸ ಮಾಡುತ್ತೇವೆ ಎಂದು ಮತ ಗಿಟ್ಟಿಸಿಕೊಳ್ಳಲು ಮುಂದಾಗಿದ್ದಾರೆಂದು ಕಾರ್ಮಿಕ ಮುಖಂಡರಾದ ಗೈಬು ಜೈನೆಖಾನ ಹೇಳಿದರು.

ಎಲ್ಲರೂ ಒಗ್ಗಟ್ಟಾಗಿ ಇವತ್ತಿನ ಭ್ರಷ್ಟ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತದೇ ಇದ್ದ-ರೆ ನಮಗೆ ಭವಿಷ್ಯವಿಲ್ಲ. ಕಾರಣ ನಿರಂತರ ಹೋರಾಟ ನಡೆಸಬೇಕಾಗಿದೆ ಎಂದು ಕಾರ್ಮಿಕ ಮುಖಂಡರಾದ ನಾಗಪ್ಪ ಸಂಗೊಳ್ಳಿ, ರೈತ ಮುಖಂಡರಾದ ಎಸ್.ಬಿ. ಹಳ್ಳಿ, ಅಂಗನವಾಡಿ ನೌಕರರ ಸಂಘದ ತಾಲೂಕಾ ಅಧ್ಯಕ್ಷರಾದ ಪ್ರೇಮಾ ಕಿಲ್ಲೇದಾರ, ಸಕ್ಕರೆ ಕಾರ್ಖಾನೆ ಕಾರ್ಮಿಕರ ಸಂಘದ ಮುಖಂಡ ಕೃಷ್ಣಾ ಹೊಸೂರ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ವೆಂಕಟೇಶ್ವರ ದೇವಸ್ಥಾನದ ಆವರಣದಿಂದ ಹೊರಟ ಮೇ ದಿನಾಚರಣೆಯ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಇವತ್ತಿನ ಭ್ರಷ್ಟ ವ್ಯವಸ್ಥೆಯ ವಿರುದ್ಧ ಘೋಷಣೆಗಳನ್ನು ಕೂಗುತ್ತ ನಗರದ ಮರಾಠಾ ಮಂಡಳ ಕಾರ್ಯಾಲಯದಲ್ಲಿ ಸಮಾವೇಶಗೊಂಡು ಬಹಿರಂಗ ಸಭೆ ನಡೆಸಲಾಯಿತು.

ಫಾರುಖ ಶೇಖ, ದಾದಾಸಾಬ, ಯು. ಎಫ್. ದಂಡಿನ, ತುಳಸಾ ಮಾಳದಕರ, ಗಿರಿಯಪ್ಪ ಬಂಡಿವಡ್ಡರ, ಜುಬೇದಾ ಪೆಂಡಾರಿ, ಚಿಕ್ಕೋಡಿಯ ಟಿ.ಎ. ಬಾಬಾಗೌಡ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಸಮಾರಂಭದ ಮೊದಲು ಬೆಳಗಾವಿ ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ರಾಮದುರ್ಗ ತಾಲೂಕಾ ಅಧ್ಯಕ್ಷೆ ಸಿ.ಪಿ.ಎಂ. ಪಕ್ಷದ ಸದಸ್ಯೆಯಾದ ಖಾತುನಬಿ ಫ. ಮುಲ್ಲಾ ಮೇ 1 ರಂದು ನಿಧನರಾಗಿದ್ದರಿಂದ ಶೃದ್ಧಾಂಜಲಿ ಸಭೆ ನಡೆಸಲಾಯಿತು. ರಾಮದುರ್ಗದಲ್ಲಿ ಬೀಡಿ ಕಾರ್ಮಿಕ ಸಂಘಟನೆ ಕಟ್ಟಲು ಖಾತುನಬಿ ಫ. ಮುಲ್ಲಾ ರವರ ಕೊಡುಗೆ ಶ್ಲಾಘನೀಯ. ಅವರ ನಿಧನದಿಂದ ಸಂಘಟನೆಗೆ ಭಾರಿ ನಷ್ಟವಾಗಿದೆ ಎಂದು ಶೃದ್ಧಾಂಜಲಿ ಸಭೆಯಲ್ಲಿ ಕಾರ್ಮಿಕ ಮುಖಂಡರು ಮಾತನಾಡಿದರು. ಪಂಚಾಯತ ನೌಕರರು, ಅಂಗನವಾಡಿ ನೌಕರರು, ಬಿಸಿ ಅಡುಗೆ ನೌಕರರು, ಕಟ್ಟಡ ಕಾರ್ಮಿಕರು, ಬೀಡಿ ಕಾರ್ಮಿಕರು, ಆಶಾ ಕಾರ್ಯಕರ್ತೆಯರು ಇನ್ನಿತರ ಕಾರ್ಮಿಕರು ಮೇ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿದ್ದರು.

ಸಿಬಿಐ ದುರ್ಬಳಕೆ...

ಪುಟ 7 ರಿಂದ

ಆತಂಕ ವ್ಯಕ್ತಪಡಿಸಲಾಗಿತ್ತು. ಈ ಮಸೂದೆ ಇನ್ನೂ ರಾಜ್ಯಸಭೆಯಲ್ಲಿ ಅಂಗೀಕಾರ-ಕ್ಕೆ ಕಾಯುತ್ತಿದೆ. ಲೋಕಸಭೆ ಅಂಗೀಕರಿಸಿದ ಮಸೂದೆಯನ್ನು ಪರೀಕ್ಷಿಸಲು ರಚಿಸಿದ ಆಯ್ಕೆ ಸಮಿತಿ ಈಗಾಗಲೇ ತನ್ನ ಶಿಫಾರಸುಗಳನ್ನು ಸಲ್ಲಿಸಿದೆ. ಅವುಗಳಲ್ಲಿ ಒಂದು ಈ ವಿಷಯದ ಬಗ್ಗೆ ವ್ಯಾಪಕವಾಗಿ ಹೇಳಿದೆ. ಈ ಶಾಸನ ಇದುವರೆಗೆ ರಾಜ್ಯಸಭೆಯ ಮುಂದೆ ಬಂದಿಲ್ಲ. ಇದು ಬಹಳ ಸಹಜವೇ, ಏಕೆ-ಂದರೆ, ಅಧಿಕಾರದಲ್ಲಿ ಇರುವ ಪ್ರತಿಯೊಂದು ಸರಕಾರವೂ ಸಿಬಿಐಯನ್ನು ತನ್ನ ಉದ್ದೇಶ ಈಡೇರಿಸಿಕೊಳ್ಳಲು ತನ್ನ ತೊತ್ತಿನಂತೆ ಬಳಸಿಕೊಂಡಿದೆ ಮತ್ತು ಹಾಗೆಯೇ ಬಳಸಿಕೊಳ್ಳ ಬಯಸುತ್ತದೆ. ಇದು ಸಂಸತ್ತಿನಲ್ಲಿ ಬಹುಮತವನ್ನು ಸೃಷ್ಟಿಸುವಲ್ಲಿ ಬೆಂಬಲವನ್ನು ಗಿಟ್ಟಿಸುವುದಕ್ಕಾಗಿ ಅದನ್ನು ಬಳಸುವುದರಿಂದ ಹಿಡಿದು 'ಚಮಚಾ ಬಂಡವಾಳಶಾಹಿ'ಯ ದಾರಿ ಹಿಡಿದು ದೇಶದ ಸಂಪನ್ಮೂಲಗಳ ಲೂಟಿ ನಡೆಸುವ ತಪ್ಪಿತಸ್ಥರನ್ನು ರಕ್ಷಿಸುವ ವರೆಗೂ ವ್ಯಾಪಿಸಿದೆ.

ಆರಂಭದಲ್ಲಿ ನಾವು ಎತ್ತಿರುವ ಮೂರು ಪ್ರಶ್ನೆಗಳನ್ನು ಈಗ ತುರ್ತಾಗಿ ಎದುರಿಸಬೇಕಾಗಿದೆ. ಸರಕಾರ, ನ್ಯಾಯಾಂಗ ಮತ್ತು ಶಾಸಕಾಂಗ ಈಗ ಈ ವಿಷಯದ ಪರಿಶೀಲನೆಯಲ್ಲಿ ತೊಡಗಿರುವುದರಿಂದ ದೀರ್ಘಕಾಲದಿಂದ ಬಾಕಿ ಉಳಿಸಿರುವ ಕೆಲವು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲು ಇದೀಗ ಸಕಾಲ.

JANASHAKTHI KANNADA VARA PATRIKE MAY 12, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Sa
Licensed to Post without prepayment License No. WPP-


'ಆರ್ಯ-ದ್ರಾವಿಡ' ಚರ್ಚೆಯ ಸುತ್ತ



ಅದೊಂದು ಬಯಲು ರಂಗ ಮಂದಿರ. ನಿಸರ್ಗದ ಮಡಿಲಲ್ಲಿ ಬೆಟ್ಟ ಕಡಿದು ಮಾಡಿದ ವಿಶಾಲ ಬಯಲು ರಂಗ ವೇದಿಕೆ. ಬಯಲು ರಂಗಮಂದಿರದಲ್ಲಿ ಸಾವಿರಕ್ಕೂ ಮಿಕ್ಕಿ ನೆರೆದ ಜನ. ರಾತ್ರಿ ಸುಮಾರು 10 ಗಂಟೆಗೆ ಆರಂಭವಾದ ನಾಟಕ ಮುಗಿದದ್ದು ಬೆಳಿಗ್ಗೆ ಸು.8.00 ಗಂಟೆಗೆ. ತಡರಾತ್ರಿ-ನಕ್ಷತ್ರಗಳ ಛಾವಣಿಯ ಅಡಿಯಲ್ಲಿ ನೋಡುಗರಿಗೆ ಭಾರತ ದೇಶದ ಸು. 5 ಸಾವಿರ ವರ್ಷಗಳ ಚರಿತ್ರೆಯನ್ನು ದೃಶ್ಯ ರೂಪದಲ್ಲಿ ಕಟ್ಟಿಕೊಡುವ ಅಭೂತಪೂರ್ವ ಪ್ರಯತ್ನ ಅದು.

...ಹರಪ್ಪ-ಮೊಹೆಂಜೋದಾರೋ ನಾಗರೀಕತೆ ದ್ರಾವಿಡ ನಾಗರೀಕತೆ. ಅದಕ್ಕೂ ಮೊದಲು ದ್ರಾವಿಡರು ಬೇಟೆಯಾಡಿ, ಕಾಡಿನ ಹಣ್ಣು ಹಂಪಲು ಸಂಗ್ರಹಿಸಿ ಬದುಕುತ್ತಿದ್ದರು... ಹಲವು ಪಂಗಡಗಳು ಇದ್ದರೂ ಬುಡಕಟ್ಟುಗಳಲ್ಲಿ ಒಗ್ಗಟ್ಟಿತ್ತು. ಮಧ್ಯ ಏಷ್ಯಾದಿಂದ ಸಿಂಧೂ ನೆಲೆಗೆ ಆರ್ಯರು ವಲಸೆ ಬಂದರು. ತಮ್ಮ ನೆರೆಯಲ್ಲಿ ನೆಲೆಸಲು ಅವಕಾಶ ನೀಡಿದ ದ್ರಾವಿಡರನ್ನು ಆರ್ಯರು ಕುತಂತ್ರಗಳಿಂದ ಸೋಲಿಸಿ, ಒಗ್ಗಟ್ಟು ಮುರಿದು ಗುಲಾಮಗಿರಿಗೆ ತಳ್ಳಿದರು.

ಆರ್ಯರು ಹೋಮ, ಹವನ, ಮಂತ್ರ ತಂತ್ರ ಮುಂತಾದವುಗಳನ್ನು ಬಳಸಿ ಭಯ ಹುಟ್ಟಿಸಿ ಜಾತಿ ತಾರತಮ್ಯವನ್ನೂ ಅಸ್ಪೃಶ್ಯತೆಯನ್ನು ಹುಟ್ಟು ಹಾಕಿದರು. ಭಾರತವನ್ನು ಆವರಿಸಿಕೊಂಡರು. ಮುಂದೆ ಮನು ಈ ನೀಚ ಆಚರಣೆಗಳನ್ನು ಕ್ರೋಢೀಕರಿಸಿ 'ಮನುಸ್ಮೃತಿ' ರಚಿಸಿದನು. ಯಜ್ಞ-ಯಾಗಗಳ ಅನಾಗರೀಕ ಆಚರಣೆ, ಪ್ರಾಣಿ ಹಿಂಸೆ, ಮಹಿಳೆಯರ ಹೀನಾಯ ಶೋಷಣೆ, ಜಾತೀಯತೆ, ಡಂಬಾಚಾರಗಳಿಂದ ತೀರಾ ಕ್ಷೋಭೆಗೊಂಡಿದ್ದ ನಾಡಿನಲ್ಲಿ, ಸುಮಾರು ಎರಡೂವರೆ ಸಹಸ್ರಮಾನಗಳ ಹಿಂದೆ ಬುದ್ಧ ಉದಿಸಿದನು. ಆತನು ನೈತಿಕತೆ, ಸಮಾನತೆ, ಮಾನವೀಯತೆ, ಸರಳತೆಯನ್ನು ಬೋಧಿಸಿದನು. ವೈದಿಕತೆಯನ್ನು ತಿರಸ್ಕರಿಸಿದನು. ಬುದ್ಧ ದಮ್ಮ ವ್ಯಾಪಕವಾಗಿ ಹರಡಿತು. ಕ್ರಿ.ಶ. ಎಂಟನೇ ಶತಮಾನದಲ್ಲಿ ಶಂಕರಾಚಾರ್ಯರ ಮೂಲಕ ಮತ್ತೆ ವೈದಿಕ ಪುರೋಹಿತಶಾಹಿಯು ವಂಚಕತನ ಹಾಗೂ ದಬ್ಬಾಳಿಕೆಯಿಂದ ಮೇಲುಗೈ ಸಾಧಿಸಿತು. ಬೌದ್ಧ ಸಂಸ್ಕೃತಿ, ದಮ್ಮದ ಮೇಲೆ ಕ್ರೂರ ದಾಳಿ ನಡೆಸಲಾಯಿತು. ಹನ್ನೆರಡನೇ ಶತಮಾನದಲ್ಲಿ ಬಸವಣ್ಣ ಮತ್ತು ಶರಣರು ವೈದಿಕತೆಯನ್ನು ತಿರಸ್ಕರಿಸಿ ಸಮಾನತೆಗಾಗಿ ಹಂಬಲಿಸಿದರು. ಬ್ರಿಟೀಷರು ಬಂದರು. ಶೂದ್ರ ಶಕ್ತಿಯನ್ನು ಬಳಸಿ, ವೈದಿಕರನ್ನು ಬಗ್ಗಿಸಿದರು. ನಂತರ ಬ್ರಿಟೀಷರಿಗೂ ವೈದಿಕರಿಗೂ ರಾಜಿ ಏರ್ಪಟ್ಟಿತು. ಜಾತಿವಾದಿ ವೈದಿಕ ಪ್ರಭುತ್ವ ಮುಂದುವರಿಯಿತು. ಹತ್ತೊಂಬತ್ತನೇ ಶತಮಾನದಲ್ಲಿ ಜ್ಯೋತಿ ಬಾಪುಲೆ, ಸಾವಿತ್ರಿ ಬಾಪುಲೆ ದಂಪತಿಗಳು ಶೂದ್ರರು, ಮಹಿಳೆಯರು, ದಲಿತರಿಗೆ ಅಕ್ಷರದ ಬೆಳಕು ನೀಡಿದರು. ಅಂಬೇಡ್ಕರರು ದಲಿತ ಸಮುದಾಯದ ವಿಮೋಚನೆಗಾಗಿ ಧೀಮಂತ ಹೋರಾಟ ಹೂಡಿದರು. ಅಹರ್ನಿಶಿ ದುಡಿದರು. ಗಾಂಧೀಜಿಯವರ ಹಠಮಾರಿತನದಿಂದ ದಲಿತರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಕೊಡಿಸಲು ಸಾಧ್ಯವಾಗಲಿಲ್ಲ. ಆದರೆ ದಲಿತರ ಅಭ್ಯುದಯಕ್ಕೆ



ಪೂರಕವಾದ ಸಾಮಾಜಿಕ ನ್ಯಾಯದ ಆದಾರದ ಉತ್ತಮ ಸಂವಿಧಾನವನ್ನು ಕೊಟ್ಟರು. ವಿಕೃತ 'ಮನುಸ್ಮೃತಿ'ಯನ್ನು ಸುಟ್ಟ ಬಾಬಾ ಸಾಹೇಬರು ಕರ್ಮಠ, ಜಾತಿವಾದಿ ವೈದಿಕ ಧರ್ಮವನ್ನು ಸುಧಾರಿಸಲು ಸಾಧ್ಯವಿಲ್ಲವೆಂಬುದನ್ನು ಮನಗಂಡು ಬುದ್ಧನ ಕಡೆಗೆ ನಡೆದರು. ಈ ನಡೆ ಮತಾಂತರ ಅಲ್ಲ. ಇದು 'ಮರಳಿ ಮನೆಗೆ ಬುದ್ಧನೆಡೆಗೆ'. ಅಂದರೆ ಭಾರತ ಇತಿಹಾಸದಲ್ಲಿ ಸಾಕಷ್ಟು ಕಾಲ ಬುದ್ಧ ಭಾರತವಾಗಿತ್ತು...

...ಭಾರತದ ಚರಿತ್ರೆಯಲ್ಲಿ ಕರ್ಮಠ, ವಂಚಕ ಆರ್ಯ ಸಂಸ್ಕೃತಿ ಮತ್ತು ದ್ರಾವಿಡ ಸಂಸ್ಕೃತಿಗಳ ನಡುವಿನ ಸಂಘರ್ಷ ನಿರಂತರವಾಗಿ ನಡೆಯುತ್ತ ಬಂದಿದೆ. ಬುದ್ಧನ ನಂತರ ಅದು ವೈದಿಕಶಾಹಿ ಮತ್ತು ಬುದ್ಧ ದಮ್ಮದ ನಡುವಿನ ಸಂಘರ್ಷವಾಗಿದೆ. ಪೆರಿಯಾರ್ ಅವರು ದ್ರಾವಿಡ ಪುನರುಜ್ಜೀವನದ 'ಸ್ವಾಭಿಮಾನ' ಚಳುವಳಿಯನ್ನು ಹುಟ್ಟು ಹಾಕಿ ದ್ರಾವಿಡ ಪ್ರಜ್ಞೆಯನ್ನು ಬಡಿದೆಬ್ಬಿಸಿದರು. ಈಗ ದಲಿತ ವಿಮೋಚನೆಯ ದಾರಿ ಎಂದರೆ ಮನುಸ್ಮೃತಿಯ ಜಾಗದಲ್ಲಿ ಸ್ಥಾಪಿಸಲಾಗಿರುವ ಆಧುನಿಕ ಸಂವಿಧಾನ ಕೊಡ ಮಾಡಿರುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದು. ಬುದ್ಧನ ವಿಚಾರಗಳನ್ನು ಅಪ್ಪಿಕೊಳ್ಳುವುದು. ಬುದ್ಧ ಭಾರತದ ಭವಿತವ್ಯದ ಗುರಿ. ಬುದ್ಧ ದಮ್ಮ ಭವಿಷ್ಯ ಭಾರತದ ದಾರಿ....

ಇದು ಸ್ಥೂಲವಾಗಿ 'ಆರ್ಯ-ದ್ರಾವಿಡ' ನಾಟಕದ ಕತೆ. ತಿರುಳು ಮತ್ತು ಸಂದೇಶ.

ಭವ್ಯ ಸನಾತನ ಸಂಸ್ಕೃತಿಯ ಪುಣ್ಯ ಭೂಮಿ ಎಂದು ಕರೆಯಲಾದ ಈ ಭಾರತದ ನೆಲದಲ್ಲಿ ಸಾವಿರ ಸಾವಿರ ವರ್ಷಗಳ ಕಾಲ ಬರೀ ಅಪಮಾನ, ಹಿಂಸೆ, ನೋವುಗಳನ್ನೇ ಉಂಡು, ಮನುಷ್ಯತ್ವದ ಘನತೆಗೆ ಅಪಮಾನಕಾರಿಯಾದ ಘೋರ ಅನ್ಯಾಯ, ವಂಚನೆ, ಶೋಷಣೆಗೆ ತುತ್ತಾದ ಭಾರತದ ಕೋಟಿ ಕೋಟಿ ದಲಿತ ಮತ್ತು ಶೂದ್ರರ ಬದುಕು ಹಸನಾಗಬೇಕು. ಕರಾಳ ಜಾತಿವಾದಿ ವ್ಯವಸ್ಥೆಯ ತಳಾದಿಯಲ್ಲಿ ಸಿಕ್ಕಿ ತುಳಿತಕ್ಕೆ ತುತ್ತಾದ ಅವಕಾಶ ವಂಚಿತ ಸಮುದಾಯಗಳ ಬದುಕಿನ ವಿಮೋಚನೆಯಾಗಬೇಕು ಎಂಬ ತೀವ್ರ ತುಡಿತ ತುಂಬಿರುವ 'ಆರ್ಯ-ದ್ರಾವಿಡ' ನಾಟಕದ ರೂವಾರಿ ನಿರ್ದೇಶಕ ಗಿರೀಶ್ ಮಾಚಳ್ಳಿಯವರನ್ನು ಅವರು ಈ ನಾಟಕವನ್ನು ರಂಗದ ಮೇಲೆ ತರಲು ಪಟ್ಟಿರುವ ಶ್ರಮ, ಉದಾತ್ತ ಆಶಯಕ್ಕಾಗಿ ಮೊತ್ತಮೊದಲು ಅಭಿನಂದಿಸಬೇಕಾಗಿದೆ.

ಸು. 150 ಜನ ಕಲಾವಿದರದ್ದು ಇಲ್ಲಿ ಅಭಿನಯ ಅನ್ನುವಂತಿಲ್ಲ. ಏಕೆಂದರೆ ಅವರಲ್ಲಿ ಬಹುತೇಕರು ತಾವೇ ಪ್ರಾಚೀನ ಚರಿತ್ರೆ, ಪುರಾಣ, ಆಧುನಿಕ ಭಾರತದ ಇತಿಹಾಸದ ಪಾತ್ರಗಳೆಂಬಷ್ಟು ತಲ್ಲೀನತೆ ಬದ್ಧತೆಯಿಂದ ಮತ್ತು ಶ್ರದ್ಧೆಯಿಂದ ನಾಟಕವನ್ನು ಕಟ್ಟಿಕೊಡುತ್ತಾರೆ. ರಂಗ ಸಜ್ಜಿಕೆ, ವಸ್ತ್ರ ವಿನ್ಯಾಸ, ಬೆಳಕು, ಸಂಗೀತ ಎಲ್ಲವುಗಳಲ್ಲಿ ಅಪಾರ ಪರಿಶ್ರಮ ಮತ್ತು ಪ್ರತಿಭೆ ಎದ್ದು ಕಾಣುತ್ತದೆ. ಒಂದು ಕಡೆಯಿಂದ ನೋಡಿದರೆ ನೀಳ ನಾಟಕ ರೂಪಕದಂತೆಯೂ ಮತ್ತೊಂದು ಕಡೆಯಿಂದ ನೋಡಿದರೆ ದಲಿತ ಮತ್ತು ಶೂದ್ರ ಸಮುದಾಯಗಳ ಮುಗ್ಧ ಜನರಿಗೆ ಜಾಗೃತಿ ಶಿಬಿರದಂತೆಯೂ ಇರುವ
ವಿಶಿಷ್ಟ ಪ್ರಯೋಗವನ್ನು ಮೆಚ್ಚಿಕೊ
ಹಲವಾರು ಕಾರಣಗಳಿವೆ. ಅದರಲ್ಲಿ
ಬುದ್ಧ ಉದಿಸಿದ ಸನ್ನಿವೇಶದ ನಿರೂಪ

ಲೋಕದ ನೋವು, ದುಃ
ನಿವಾರಣೆಯ ಗುರಿಯೊಂದಿಗೆ
ಮಾಡಿದ ಪ್ರಯೋಗಗಳು. ಆತ ಕಂ
ಕೊಂಡ ಸತ್ಯಗಳು. ಬುದ್ಧನ ಸರಳ
ಉದಾತ್ತವಾದ ಬೋಧನೆಗಳು ನಾಟ
ಸೊಗಸಾಗಿ ನಿರೂಪಿತವಾಗಿವೆ. ನಾ
ಪ್ರಬುದ್ಧತೆ ಮತ್ತು ಕಲಾತ್ಮಕತೆ ಮಿಂಚು
ಇಂತಹ ಹೊತ್ತಲ್ಲಿ. ನಾವು ಬುದ್ಧನನ್ನು ಇ
ಸರಿಯಾಗಿ, ಸಮಗ್ರವಾಗಿ ಅರ್ಥೈಸಿಕೊ
ತುಂಬ ಸಹಕಾರಿಯಾಗಬಹು
ಹೊಳಹುಗಳು ಇಲ್ಲಿ ಕಾಣುತ್ತವೆ.

ಇಷ್ಟೆಲ್ಲಾ ಹೇಳುವಾಗ ನಾ
ಕೆಲವು ಗಂಭೀರ ಕೊರತೆಗಳು,
ನಾಟಕದ ಸೈದ್ಧಾಂತಿಕ ನೆಲೆಗಟ್ಟಿನ
ಕೆಲವು ಭಿನ್ನಾಭಿಪ್ರಾಯಗಳನ್ನು ಕು
ಹೇಳಲೇಬೇಕಾಗಿದೆ.

ಸಿಂಧೂ ನಾಗರೀಕತೆ-ದ್ರಾ
ನಾಗರೀಕತೆ ಎರಡು ಒಂದೇ
ವಿಚಾರ ವಿವಾದಾಸ್ಪದವಾಗಿದೆ.
ಪ್ರಶ್ನೆ ಇನ್ನೂ ಇತ್ಯರ್ಥಗೊಳ್ಳಬೇ
ಪ್ರಶ್ನೆಯಾಗಿದೆ. ವೇದ, ಪುರಾಣ
ಆರ್ಯ-ಅನಾರ್ಯ ಜನಾಂಗದ ನಡು
ಸಂಘರ್ಷಗಳ, ಕಾದಾಟ, ಯುದ
ಉಲ್ಲೇಖಗಳು ವ್ಯಾಪಕವಾಗಿವೆ. ಆರ್ಯ
ಮಧ್ಯ ಏಷ್ಯಾದಿಂದ ಬಂದವರು ಎಂಬ
ಬಹುತೇಕ ನಿರೂಪಿತ ಇತಿಹಾಸ. ಭಾ
ಭೂ ಭಾಗಕ್ಕೆ ಕುದುರೆಗಳು ಬಂದ
ಆರ್ಯರ ಜೊತೆಗೆ. ಅದಕ್ಕೆ ಮುಂಚೆ
ಭಾಗದಲ್ಲಿ ಕುದುರೆ ಎಂಬ ಪ್ರಾ
ಸುಳಿವೇ ಇರಲಿಲ್ಲ. ಆರೆಸ್ಸೆಸ್ ಬೆಂಬ
ಮನುವಾದಿ ಇತಿಹಾಸಕಾರರು
ಸತ್ಯವನ್ನು ತಿರುಚಿ ಪ್ರಾಚೀನ ಭಾರತ
ಕುದುರೆಗಳಿದ್ದವೆಂದು ಅಕ್ರಮ ಮಾಗ
ತೋರಿಸಲು ಹೋಗಿ ಸಿಕ್ಕಿಬಿದ್ದಿದ
ಮಾರ್ಕ್ಸ್‌ವಾದಿ ಇತಿಹಾಸಕಾರರು ಇ
ಸಾಕ್ಷಿಸಹಿತ ಬಯಲು ಮಾಡಿದ್ದಾರೆ.

ಆರ್ಯರೆಂದರೆ ಬ್ರಾಹ್ಮಣರು. ಆ
ಲಿಂಗಾಯತ, ಒಕ್ಕಲಿಗ, ಕುರುಬ, ಕುಂಬ
ಅಗಸ, ಅಸ್ಪೃಶ್ಯರನ್ನಾಗಿಸಲಾದ
ಜಾತಿಗಳ ಜನರು ದ್ರಾವಿಡರು ಎ
ನಾಟಕದಲ್ಲಿ ಪ್ರಬಲವಾಗಿ ಪ್ರತಿಪಾದಿಸಲ
ಮುಕ್ತ ಮನಸ್ಸಿನ ಇತಿಹಾಸದ ಅಧ್ಯ

ಪುಟ 1

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout,
BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-
560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12,
18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross,
Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout,
BANGALORE-560086 Editor : NITHYANANDASWAMI